# ಕರ್ನಾಟಕ ವಿಕಾಸ

ಏಪ್ರಿಲ್ 2011



ತುಮಕೂರು ಜಿಲ್ಲಾ ಉತ್ಸವ

## ಸಂಸ್ಕೃತಿ ಸಂಭ್ರಮ-2011






ಜಾನಪದದ ದೀಪ ಚಿತ್ರಸುವಿಕೆ,
ಜಿಲ್ಲಾಧಿಕಾರಿಗಳಾದ ಡಾ. ಸಿ. ಸೋಮಶೇಖರ್,
ಹಾಗೂ ಮಾಜಿ ಸಚಿವೆ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್

# ಶಾಲ್ಮಲಾ ಸರಸ್ ಮೇಳ 2010-11



ಹೆಚ್ಚಿನ ವಹಿವಾಟು ಮಾಡಿದ ಸ್ವರೋಜ್‌ಗಾರಿಗಳಿಗೆ ವಿಶೇಷ ಬಹುಮಾನ ಹಾಗೂ ಪ್ರಮಾಣ ಪತ್ರಗಳನ್ನು ವಿತರಿಸುತ್ತಿರುವ ಶ್ರೀಮತಿ ಶಿಖಾ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಜಿಲ್ಲಾ ಪಂಚಾಯತ್, ಧಾರವಾಡ ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳು

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ ಧಾರವಾಡ ಜಿಲ್ಲೆಯ ಹುಬ್ಬಳ್ಳಿ ನಗರ ನೆಹರು ಕ್ರೀಡಾಂಗಣದಲ್ಲಿ ಗ್ರಾಮೀಣ ಉತ್ಪನ್ನಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳದ ಪ್ರಾದೇಶಿಕ ಸರಸ್ (ಶಾಲ್ಮಲಾ ಸರಸ್ ಮೇಳ)ವನ್ನು ಇತ್ತೀಚೆಗೆ ಏರ್ಪಡಿಸಲಾಗಿತ್ತು. ಒಟ್ಟು 13 ರಾಜ್ಯಗಳಿಂದ ತಮ್ಮ ಪ್ರದೇಶದ ಉತ್ಕೃಷ್ಟ ಗುಣಮಟ್ಟದ ಉತ್ಪನ್ನಗಳೊಂದಿಗೆ ಸ್ವಸಹಾಯ ಸಂಘಗಳು/ಸ್ವರೋಜ್‌ಗಾರಿಗಳು ಭಾಗವಹಿಸಿದ್ದರು. ಈ ವಸ್ತು ಪ್ರದರ್ಶನದಲ್ಲಿ ಒಟ್ಟು 3,40,506 ಜನರು ಮೇಳಕ್ಕೆ ಭೇಟಿ ನೀಡಿದ್ದು, ರೂ. 4.94 ಕೋಟಿ ಮೌಲ್ಯದ ವಸ್ತುಗಳು ಮಾರಾಟವಾಗಿರುತ್ತದೆ.




ಮೇಳದಲ್ಲಿ ಭಾಗವಹಿಸಿದ್ದ ಸ್ವರೋಜ್‌ಗಾರಿಗಳು





ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು

**ಬಿ.ಸಿ. ಜಯಪಾಲ ರೆಡ್ಡಿ**

ಮುಖ್ಯ ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿಗಳು

**ಬೂವನಹಳ್ಳಿ ನಾಗರಾಜ್**

ಸಹಾಯಕ ಸಂಪಾದಕರು

**ಡಾ॥ ಎಂ.ಎಸ್. ಮಂಜುನಾಥ**


**ವಿಶೇಷ ಸೂಚನೆ**

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ, ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

**ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.**

# ಕರ್ನಾಟಕ ವಿಕಾಸ


## ಏಪ್ರಿಲ್ 2011

ಸಂಪುಟ : 52 ಸಂಚಿಕೆ : 5


## ಈ ಸಂಚಿಕೆಯೊಳಗೆ


| | | |
|---|---|---|
| 5 | ಸಚಿವಾಲಯದಿಂದ ಸಂದೇಶ | – ಪಿ. ರವಿಕುಮಾರ್ |
| 7 | ಬದುಕುವ ಮಾತು | – ಡಾ. ಪಾಟೀಲ ಪುಟ್ಟಪ್ಪ |
| 8 | ಕಾವ್ಯ ವಿಕಾಸ | – ಶ್ರೀಕಲಾ ಪೇತ್ರಿ |
| 9 | ವರದಿ | – ಪ್ರೊ. ಕೆ. ಚಂದ್ರಣ್ಣ |
| 11 | ಚಿಂತನೆ | – ಪ್ರೊ. ಎ.ಎಚ್. ಮಾಸಪತಿ |
| 17 | ಆರೋಗ್ಯ | – ಡಾ. ಬಿ. ರಮಣರಾವ್ |
| 18 | ಕವಿಯ(ಕ್ಷ) ಪ್ರಶ್ನೆಗಳು | – ಎಸ್.ಬಿ. ನಿರಂಜನ್ |
| 19 | ನುಡಿ ನಿರ್ಮಲ | |
| 23 | ಲೆಕ್ಕಪತ್ರ | – ಎ.ಎಸ್. ಶಿವಾನಂದಾಚಾರ್ಯ |
| 26 | ಗ್ರಾಮ ಸ್ವರಾಜ್ | |
| 28 | ಲೇಖನಗಳು | – ಶೀತಲ್ ಎಸ್. ಸಿಂಗ್ |
| | | – ರವಿ ಎಸ್. ಸೂರನ್ |
| | | – ಸುಶೀಲಾ ಸದಾಶಿವಯ್ಯ |
| | | – ಚಂದ್ರಶೇಖರ ಎಂ.ಹೆಚ್. |
| 42 | ಮಾಲೀಕತ್ವ | |
| 43 | ಸುತ್ತೋಲೆಗಳು | |



**ವಾರ್ಷಿಕ ಚಂದಾ :**

ವ್ಯಕ್ತಿಗಳಿಗೆ ರೂ. 50/–

ಸಂಸ್ಥೆಗಳಿಗೆ ರೂ. 60/–

ಬಿಡಿ ಪ್ರತಿ ರೂ. 5/–

ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಅಂಚೆ ವಿಳಾಸದೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.



**ಕಚೇರಿ ವಿಳಾಸ**

ಮುಖ್ಯ ಸಂಪಾದಕರು, "ಕರ್ನಾಟಕ ವಿಕಾಸ"
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : (080) 22353857
www.rdpr.kar.nic.in
**email:karnatakavikasa@ymail.com**




## ಪತ್ರಿಕೆ ಕುರಿತು ನಿಮ್ಮ ನುಡಿ

**ಮಾನ್ಯರೇ,**

2001ರ ಮಾರ್ಚ್ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ ಕರ್ನಾಟಕ ವಿಕಾಸದಲ್ಲಿ 'ಗ್ರಾಮ ಸ್ವರಾಜ್ ಅಭಿವೃದ್ಧಿಯ ಒಂದು ಸಾಧನ' ಎಂಬ ಲೇಖನ ಸಾಮಾನ್ಯ ಗ್ರಾಮೀಣ ಜನತೆಗೆ ತಿಳಿಯುವ ಮಟ್ಟದಲ್ಲಿ ತುಂಬಾ ಉತ್ತಮವಾಗಿ ಬರೆದು ಪ್ರಸ್ತುತಪಡಿಸಿರುವ ಡಾ॥ ಎಂ.ಆರ್. ಏಕಾಂತಪ್ಪನವರಿಗೆ ಅಭಿನಂದನೆಗಳು ಹಾಗೂ ಈ ಲೇಖನ ಪ್ರಕಟಿಸಿದ ಕರ್ನಾಟಕ ವಿಕಾಸ ವಿಭಾಗದ ಸರ್ವರಿಗೂ ಧನ್ಯವಾದಗಳು.

**– ಪಿ.ಸಿ. ಮಾಧವ**
ಕರ ವಸೂಲಿಗಾರ, ಗ್ರಾ.ಪಂ. ಚಿಕ್ಕಂಗಳ, ಕಡೂರು ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ 577 548.

ಕರ್ನಾಟಕ ವಿಕಾಸ ಪತ್ರಿಕೆ ತುಂಬಾ ಚೆನ್ನಾಗಿದೆ. ಸರ್ಕಾರದಿಂದ ಗ್ರಾಮೀಣಾಭಿವೃದ್ಧಿಗೆ ಸಂಬಂಧಪಟ್ಟ ಎಲ್ಲ ಯೋಜನೆಗಳನ್ನು ಇದರಲ್ಲಿ ನೋಡಲು ಸಿಗುತ್ತದೆ. ಇನ್ನಿತರ ಲೇಖನಗಳು ಚೆನ್ನಾಗಿರುತ್ತವೆ, ಉಪಯುಕ್ತವಾಗಿರುತ್ತವೆ.

**– ಅರ್ಜುನ ಮಕ್ಕಾವಡ್ಡರ**
ಜೈ ಭಾರತ ಪುರುಷ ಸ್ವ–ಸಹಾಯ ಸಂಘ,
ಅಟ್ ಮೊಣಕಾಪುರ ಪೋಸ್ಟ್, ಅಳ್ನಾವರ – 581 103,
ಧಾರವಾಡ ತಾ॥ ಮತ್ತು ಜಿಲ್ಲೆ.

ಡಾ॥ ಪಾಟೀಲ ಪುಟ್ಟಪ್ಪನವರ 'ಬದುಕುವ ಮಾತು' ಅರ್ಥಪೂರ್ಣವಾಗಿತ್ತು. ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಉತ್ತರಿಸುವ ಅಂಕಣ ಒಂದನ್ನು ಆರಂಭಿಸುವಂತೆ ಮುಖ್ಯ ಸಂಪಾದಕರಲ್ಲಿ ವಿನಂತಿ.

**– ಸೋಮಶೇಖರಗೌಡ ಅ. ಚನ್ನಪ್ಪಗೌಡರ್**
ಪೊ : ನಿಡಗುಂದಿ, ತಾ. ರೋಣ, ಗದಗ ಜಿಲ್ಲೆ.

ಪ್ರತಿ ತಿಂಗಳು ಆಕರ್ಷಕವಾಗಿ ಮೂಡಿಬರುತ್ತಿರುವ 'ಕರ್ನಾಟಕ ವಿಕಾಸ' ಪತ್ರಿಕೆಯು ಓದುಗರಿಗೆ ಮಹತ್ವಪೂರ್ಣ ಅಂಕಣಗಳೊಂದಿಗೆ ಉತ್ತಮ ಮೌಲ್ಯಗಳನ್ನು ರೂಪಿಸತೊಡಗಿದೆ. ಇಲಾಖೆಯ ಮುಂದಿನ ಕಾರ್ಯ ಯೋಜನೆಗಳ ಚಿತ್ರಣವನ್ನು ನೀಡುತ್ತದೆ. ಇದೇ ರೀತಿ ಅತ್ಯುನ್ನತ ಸುದ್ದಿ ಸಾರಗಳು ಹೆಚ್ಚು ಹೆಚ್ಚು ಮೂಡಿಬರಲೆಂದು ಆಶಿಸುತ್ತೇನೆ.

**– ಎನ್.ಎಮ್. ಪಾಟೀಲ್**
ಸಾಸರವಾಕ, ಹೂಳೆ ಇಟಗಿ ಪೋಸ್ಟ್, ಶಿರಹಟ್ಟಿ ತಾ॥, ಗದಗ ಜಿಲ್ಲೆ.

ಕರ್ನಾಟಕ ವಿಕಾಸ ಮಾರ್ಚ್ 2011ರ ತಿಂಗಳಲ್ಲಿ ಮೂಡಿಬಂದ ನುಡಿ ನಿರ್ಮಲದ ಬಗ್ಗೆ ಓದಿ ನನಗೆ ತುಂಬಾ ಸಂತೋಷವಾಗಿದೆ.

**– ಮನೋಹರ ಗುಡಪಳ್ಳಿ**
ತಾ॥ ಔರಾದ, ಜಿ॥ ಬೀದರ್.

ಡಾ. ಪಾಟೀಲ ಪುಟ್ಟಪ್ಪನವರ 'ಬದುಕುವ ಮಾತು' ಎಂಬ ಲೇಖನ ಪ್ರತಿ ಸಂಚಿಕೆಯಲ್ಲೂ ಪ್ರಕಟಗೊಳ್ಳಲಿ. ಈ ಮೊದಲಿನಂತೆಯೇ, ಎಲ್ಲಾ ಲೇಖನಗಳು 'ಗ್ರಾಮೀಣಾಭಿವೃದ್ಧಿ'ಗೆ ಪೂರಕವಾಗಿವೆ.

**– ಪ್ರಹ್ಲಾದ ವೀರಪ್ಪ ಬಡಿಗೇರ**
ನಂ. 1601, ಉಡಿಗೇರ ಓಣಿ, ಎಂ.ಕೆ. ಹುಬ್ಬಳ್ಳಿ – 591118,
ತಾ॥ ಬೈಲಹೊಂಗಲ, ಜಿ॥ ಬೆಳಗಾವಿ.

ಸಚಿವಾಲಯದಿಂದ ಸಂದೇಶ

**ಪಿ. ರವಿ ಕುಮಾರ್**
ಸರ್ಕಾರದ ಪ್ರಧಾನ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಮೂರನೆ ಮಹಡಿ – 'ಸಿ' ಬ್ಲಾಕ್
ಬಹುಮಹಡಿ ಕಟ್ಟಡ,
ಬೆಂಗಳೂರು – 560 001.

**ಬಂಧುಗಳೇ,**

## ಜಲಮೂಲಗಳನ್ನು ಪುನಶ್ಚೇತನಗೊಳಿಸೋಣ... ನೀರಿನ ಬವಣೆ ತಪ್ಪಿಸೋಣ

ನೀರು ಜೀವ ಜಲ. ಸಕಲ ಜೀವಾತ್ಮಗಳಿಗೂ ನೀರೇ ಆಧಾರ. ಜಗತ್ತಿನ ಬಹುತೇಕ ಭಾಗ ನೀರಿನಿಂದ ಆವೃತವಾಗಿದ್ದರೂ ಬಳಕೆ ಯೋಗ್ಯ ಕುಡಿಯುವ ನೀರಿನ ಪ್ರಮಾಣ ಅತ್ಯಲ್ಪ ಎಂಬುದು ನಾವೆಲ್ಲರೂ ಮನಗಂಡಿರುವ ವಿಷಯ. ಅಲ್ಲದೇ ದಿನದಿಂದ ದಿನಕ್ಕೆ ಕುಡಿಯುವ ನೀರಿನ ಬೇಡಿಕೆ ಹೆಚ್ಚಾಗುತ್ತಿದ್ದು ಲಭ್ಯವಿರುವ ಜಲ ಮೂಲಗಳು ಬರಿದಾಗುತ್ತಿರುವ ಬಗ್ಗೆ ತಜ್ಞರು ಎಚ್ಚರಿಸುತ್ತಲೇ ಬಂದಿದ್ದಾರೆ. ಬೇಸಿಗೆಯ ಈ ದಿನಮಾನಗಳಲ್ಲಿ ಎಚ್ಚರಿಕೆಯ ಈ ಸಂದೇಶವನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಕುಡಿಯುವ ನೀರಿನ ಮೂಲಗಳ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು.

ನಮ್ಮ ಹಿರಿಯರು ಇದನ್ನೆಲ್ಲಾ ಮೊದಲೇ ಊಹಿಸಿದ್ದರೇನೋ ಎಂಬಂತೆ, ಬಹುತೇಕ ಗ್ರಾಮೀಣ ಪ್ರದೇಶಗಳಲ್ಲಿ ಕೆರೆಕಟ್ಟೆಗಳು, ಬಾಂದಾರ, ಬಾವಿ ಮುಂತಾದ ಜಲ ಮೂಲಗಳ ನಿರ್ಮಾಣ ಮತ್ತು ಜಲ ಸಂರಕ್ಷಣಾ ನಿರ್ವಹಣೆಯ ಕುರುಹುಗಳನ್ನು ಇಂದಿಗೂ ಸಹ ಕಾಣಬಹುದಾಗಿರುತ್ತದೆ.

ಬದಲಾದ ಕಾಲಘಟ್ಟದಲ್ಲಿ ಆಡಳಿತ ವಿಕೇಂದ್ರೀಕರಣದ ಆಶಯದಡಿ ಜನಾಧಿಕಾರಕ್ಕೆ ಮನ್ನಣೆ ದೊರೆತು ಗ್ರಾಮೀಣ ಪ್ರದೇಶಗಳಲ್ಲಿ ಈಗ ಸ್ಥಳೀಯ ಸರ್ಕಾರಗಳು ಆಡಳಿತ ನಡೆಸುತ್ತಿವೆ. ಹಾಗಾಗಿ ಕುಡಿಯುವ ನೀರು, ವಸತಿ, ರಸ್ತೆ ಮುಂತಾದ ಮೂಲಭೂತ ಸೌಲಭ್ಯಗಳ ಬಗ್ಗೆ ಸ್ವತ: ತಾವೇ ನಿರ್ಧರಿಸಿ, ನಿರ್ಮಿಸಿ ಸಮರ್ಪಕವಾಗಿ ನಿರ್ವಹಿಸಿಕೊಂಡು ಹೋಗುವ ಜವಾಬ್ದಾರಿ ಎಲ್ಲಾ ಪಂಚಾಯತ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿ ಸಿಬ್ಬಂದಿಯವರದ್ದಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಸಮರ್ಪಕ ಕುಡಿಯುವ ನೀರು ಪೂರೈಕೆ ಹಾಗೂ ಅಂತರ್ಜಲ ಮಟ್ಟವನ್ನು ಹೆಚ್ಚಿಸುವ ಹಲವಾರು ಕಾರ್ಯಕ್ರಮಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಸರ್ಕಾರ ಅನುಷ್ಠಾನಗೊಳಿಸಿದೆ. ಕೇಂದ್ರ, ರಾಜ್ಯ ಮತ್ತು ವಿದೇಶಿ ನೆರವಿನ ಇತರ ಅಭಿವೃದ್ಧಿ ಯೋಜನೆಗಳೊಂದಿಗೆ ಪ್ರಮುಖವಾಗಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಮಳೆ ನೀರು ಸಂರಕ್ಷಿಸಲು, ನೀರು ಹರಿವಿನ ಸ್ಥಳಗಳಲ್ಲಿ, ಸರ್ಕಾರಿ ಸ್ಥಳಗಳಲ್ಲಿ ಜಲ ಸಂರಕ್ಷಣೆ ಕಾಮಗಾರಿಗಳಾದ ತಡೆ ಅಣೆ, ನಾಲಾಬದು ಮತ್ತು ಬಾಂದಾರ ಮುಂತಾದವುಗಳ ನಿರ್ಮಾಣ ಮಾಡಲಾಗಿದ್ದು ಮತ್ತಷ್ಟು ಅಭಿವೃದ್ಧಿ ಕಾಮಗಾರಿಗಳು ಪ್ರಗತಿ ಹಂತದಲ್ಲಿವೆ. ಕೆರೆಗಳ ಹೂಳೆತ್ತುವುದು, ಸಮುದಾಯ ಕುಡಿಯುವ ನೀರಿನ ಬಾವಿಗಳು, ಕಲ್ಯಾಣಿ, ಹೊಂಡಗಳು ಮತ್ತು ಗೋಕಟ್ಟೆಯಂತಹ ಸಾಂಪ್ರದಾಯಿಕ ಜಲ ಮೂಲಗಳನ್ನು ಪುನಶ್ಚೇತನಗೊಳಿಸುವ ಮುಂತಾದ ಅಭಿವೃದ್ಧಿ ಕಾರ್ಯಗಳ ನಿರ್ಮಾಣ ಹಾಗೂ ನಿರ್ವಹಣೆಯಿಂದ ಜಲಸಿರಿಯನ್ನು ಕಾಪಾಡಿ ಕಾಯ್ದಿರಿಸಿಕೊಳ್ಳಬೇಕು.

ಸಾಮಾಜಿಕ ಅರಣ್ಯೀಕರಣದಡಿ ನರ್ಸರಿ ಬೆಳೆಸುವಿಕೆ, ರಸ್ತೆ ಬದಿಗಳ ಗಿಡ ನೆಡುವಿಕೆ, ಗುಡ್ಡ ಪ್ರದೇಶಗಳಡಿ ಅರಣ್ಯೀಕರಣ, ಗುಂಡು ತೋಪುಗಳ ನಿರ್ಮಾಣ, ಜೈವಿಕ ಇಂಧನಗಳ ಗಿಡಗಳನ್ನು ನೆಡುವುದು ಮುಂತಾದ ಕಾರ್ಯಕ್ರಮಗಳನ್ನು ನಮ್ಮ ಸ್ಥಳೀಯ ಸಂಸ್ಥೆಗಳು ಸ್ಥಳೀಯ ಪ್ರದೇಶಗಳಲ್ಲಿ ಸಮರ್ಪಕವಾಗಿ ಹಮ್ಮಿಕೊಳ್ಳಬೇಕು. ಇದರಿಂದ ಶುದ್ಧ ಗಾಳಿ ದೊರೆಯುವುದಲ್ಲದೆ, ಮಣ್ಣು ಸವಕಳಿಯನ್ನು ತಡೆದು ಭೂಮಿಯ ಫಲವತ್ತತೆಯನ್ನು ಕಾಪಾಡಿಕೊಂಡು ಪ್ರಮುಖವಾಗಿ ಜಲ ಸಂಪತ್ತನ್ನು ಶಾಶ್ವತವಾಗಿ ಸಂರಕ್ಷಿಸಿ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಬವಣೆಯನ್ನು ತಪ್ಪಿಸಬಹುದಾಗಿರುತ್ತದೆ. ಈ ಎಲ್ಲಾ ಯೋಜನೆಗಳ ಫಲಶೃತಿ ಫಲಾನುಭವಿಗಳನ್ನು ತಲುಪಿಸಲು ನಮ್ಮೆಲ್ಲ ಅಧಿಕಾರಿ ಸಿಬ್ಬಂದಿಯವರು ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕು.

## ಕರ ಸಂಗ್ರಹಣೆ ಕಡ್ಡಾಯವಾಗಲಿ.... ಬಳಕೆದಾರರ ಸಹಕಾರವಿರಲಿ

ಕುಡಿಯುವ ನೀರಿನ ಕರವನ್ನು ಕಡ್ಡಾಯವಾಗಿ ಸಂಗ್ರಹಿಸಿ, ಸಮುದಾಯ ನೀರು ಸರಬರಾಜು ವ್ಯವಸ್ಥೆ, ಕೆಟ್ಟು ನಿಂತ ಪಂಪ್‌ಸೆಟ್ ಹಾಗೂ ಬೋರ್‌ವೆಲ್‌ಗಳ ದುರಸ್ತಿ ಮುಂತಾದವುಗಳಿಗೆ ಸದುಪಯೋಗಪಡಿಸಿಕೊಳ್ಳುವುದು ನಮ್ಮ ಗ್ರಾಮ ಪಂಚಾಯತ್‌ಗಳ ಅತ್ಯಂತ ಗುರುತರ ಜವಾಬ್ದಾರಿ. ಕರ ಸಂಗ್ರಹಣೆಯಲ್ಲಿ ಯಾವುದೇ ಸಬೂಬು ಹೇಳದೆ ಕರ ಸಂಗ್ರಹಣೆಯ ಉಪಯುಕ್ತತೆಯ ಬಗ್ಗೆ ಬಳಕೆದಾರರ ಮನವೊಲಿಸಿ ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕು. ತಮ್ಮ ವ್ಯಾಪ್ತಿಯ ಜನ ವಸತಿ ಹಾಗೂ ಜಾನುವಾರುಗಳಿಗೆ ಯಾವುದೇ ಕಾರಣಕ್ಕೂ ಕುಡಿಯುವ ನೀರಿನ ಸರಬರಾಜಿನಲ್ಲಿ ಯಾವುದೇ ವ್ಯತ್ಯಯವಾಗದಂತೆ ಎಚ್ಚರಿಕೆ ವಹಿಸಿ ಸರ್ಕಾರದ ಆಶಯಗಳಿಗೆ ಬದ್ಧವಾಗಿ ನಮ್ಮೆಲ್ಲ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿ ಸಿಬ್ಬಂದಿಯವರು ಜನಪರವಾಗಿ ಕಾರ್ಯನಿರ್ವಹಿಸುವಂತಾಗಲಿ ಎಂದು ಆಶಿಸುತ್ತೇನೆ.

(ಪಿ. ರವಿ ಕುಮಾರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಬದುಕುವ ಮಾತು



ಡಾ. ಪಾಟೀಲ ಪುಟ್ಟಪ್ಪ

# ಧೈರ್ಯ ಇಲ್ಲದಿದ್ದರೆ ಯಾವುದೂ ಇರುವುದಿಲ್ಲ

ಮನುಷ್ಯನಲ್ಲಿ ಎಲ್ಲ ಸದ್ಗುಣಗಳೂ ಇದ್ದು, ಧೈರ್ಯವೊಂದು ಇಲ್ಲದೇ ಹೋದರೆ, ಆ ಸದ್ಗುಣಗಳಿಗೆ ರಕ್ಷಣೆಯೇ ಇರುವುದಿಲ್ಲ.

ಧೈರ್ಯ ಇರುವ ಮನುಷ್ಯನಲ್ಲಿ ಆತ್ಮವಿಶ್ವಾಸ ಇರುತ್ತದೆ. ತನ್ನ ದಾರಿಯಲ್ಲಿ ಪ್ರತಿಕೂಲಗಳೇನೇ ಬಂದರೂ ಅವನು, ಅವುಗಳನ್ನು ನಿವಾರಿಸಿಕೊಂಡು ಮುಂದೆ ಹೋಗುತ್ತಾನೆ. ಗಂಡಾಂತರಕ್ಕೆ ಅವನು ಹೆದರಿಕೊಳ್ಳುವುದಿಲ್ಲ. ಗಂಡಾತರಗಳೇ ಅವನಿಗೆ ಹೆದರಿಕೊಳ್ಳುತ್ತವೆ. ಧೈರ್ಯದಲ್ಲಿ ತಾಳಿಕೊಳ್ಳುವ ಶಕ್ತಿ ಇರುತ್ತದೆ. ಮುಂದೆ ನುಗ್ಗಿ ಹೋಗಿ ಸಾಹಸಗಳನ್ನು ಸಾಧ್ಯ ಮಾಡಿಕೊಳ್ಳುವ ಸಾಮರ್ಥ್ಯಗಳನ್ನು ಅವನು ಹಿಡಿದುಕೊಂಡಿರುತ್ತಾನೆ.

ಮನುಷ್ಯನಲ್ಲಿ ಇರಬೇಕಾದ ಪ್ರಥಮ ಗುಣಧರ್ಮವೆಂದರೆ ಧೈರ್ಯವೆಂದು ಚರ್ಚಿಲ್ ಹೇಳುತ್ತಾರೆ. ಯಾಕೆಂದರೆ, ಅದು ಮನುಷ್ಯನ ಎಲ್ಲ ಗುಣ ವಿಶೇಷಗಳಿಗೂ ಭದ್ರತೆಯ ಭರವಸೆ ಒದಗಿಸಿಕೊಡುವ ರಕ್ಷಾಕವಚವೆನಿಸಿದೆ.

ಈ ಧೈರ್ಯವು ದೈಹಿಕವಾಗಿದ್ದರೆ ಸಾಲದು. ಅದು ನೈತಿಕವಾಗಿಯೂ ಇರಬೇಕು. ನೈತಿಕ ಧೈರ್ಯವು ಮನುಷ್ಯನಿಗೆ ಹೆಚ್ಚಿನ ಬಲವನ್ನು ತಂದುಕೊಡುತ್ತದೆ. ಮಹಾತ್ಮಾ ಗಾಂಧಿಯವರಲ್ಲಿ ದೈಹಿಕ ಬಲ ಏನಿದ್ದಿತು? ಅವರಲ್ಲಿಯ ನೈತಿಕ ಬಲವೇ ಅವರನ್ನು ಮನುಷ್ಯರಲ್ಲಿಯೇ ಬಹು ವಿಶಿಷ್ಟರನ್ನಾಗಿ ಮಾಡಿದ್ದಿತು.

ಧೈರ್ಯ ಇದ್ದವನು ಯೋಗ್ಯವಾದುದನ್ನು ನೋಡಬೇಕು. ಯೋಗ್ಯವಾದುದನ್ನು ಮಾಡಬೇಕು. ಯೋಗ್ಯವಾದುದನ್ನು ಮಾಡದೇ ಇರುವುದು ಧೈರ್ಯವೇ ಅಲ್ಲವೆಂದು ಕನಫ್ಯೂಷಿಯಸ್ ಹೇಳುತ್ತಿದ್ದನು.

> ಧೈರ್ಯ ಮನುಷ್ಯನ ಎಲ್ಲ ಗುಣ ವಿಶೇಷಗಳಿಗೂ ಭದ್ರತೆಯ ಭರವಸೆ ಒದಗಿಸಿ ಕೊಡುವ ರಕ್ಷಾಕವಚ ವೆನಿಸಿದೆ.

ಮನುಷ್ಯನ ನೈತಿಕತೆ ಏನೆಂದರೆ ಅವನು, ತನಗೇನೇ ಆದರೂ, ಮಾಡಬೇಕಾದುದನ್ನು ಪರಿಣಾಮ ಲೆಕ್ಕಿಸದೇ ಮಾಡಬೇಕು. ಬೇರೆ ಒತ್ತಡಗಳೇನೇ ಇದ್ದರೂ ಅವುಗಳಿಗೆ ಬಲಿಯಾಗದೇ, ಕಷ್ಟ ನಿಷ್ಠುರಗಳನ್ನು, ತೊಡಕು ತೊಂದರೆಗಳನ್ನು, ಗಂಡಾಂತರಗಳನ್ನು ಎದುರಿಸಿ ನಿಲ್ಲಬೇಕು. ಮನುಷ್ಯನ ನೈತಿಕತೆಯ ಈ ಗುಣಧರ್ಮಗಳ ಮೇಲೆಯೇ ನಿಂತಿಕೊಂಡಿದೆ.

ಹೊಸದೇನೇ ಇದ್ದರೂ ಅಂಜುಗುಳಿಯು ಅದಕ್ಕೆ ಹೆದರಿ ಹಿಂದೆ ಸರಿಯುತ್ತಾನೆ. ಆದರೆ ಧೈರ್ಯಶಾಲಿಯಾದವನು ಹೊಸದೇನಾದರೂ ಇದ್ದರೆ ಮುಂದೆ ನುಗ್ಗಿಕೊಂಡು ಹೋಗುತ್ತಾನೆ.

ಮನುಷ್ಯನಲ್ಲಿ ಧೈರ್ಯ ಇರಬೇಕು. ಎಲ್ಲ ಕಾಲಗಳಲ್ಲಿಯೂ ಇರಬೇಕು. 'ಧೈರ್ಯಂ ಸರ್ವತ್ರ ಸಾಧನಂ' ಎಂದು ಹೇಳುತ್ತಾರೆ. ಒಂದಿಷ್ಟು ಧೈರ್ಯ ಇಲ್ಲವೆನ್ನುವ ಕಾರಣದಿಂದ ಈ ಜಗತ್ತಿನಲ್ಲಿ ಅನೇಕ ಪರಿಣತಿಗಳು ವ್ಯರ್ಥವಾಗಿ ಹಾಳಾಗಿವೆ.

❑

ಕಾವ್ಯ ವಿಕಾಸ

# 'ಪಂಚತಂತ್ರ' ತಂತ್ರಾಂಶ



ಶ್ರೀಕಲಾ ಪೇತ್ರಿ *

ಪಂಚತಂತ್ರ ಇದು ಕಥೆಯಲ್ಲ
ಪಂಚಾಯತಿ ತಂತ್ರಾಂಶ
ತಂತ್ರಾಂಶದೊಳಗೆ ಅಡಗಿದೆ
ಪಂಚಾಯತಿಯ ಸಾರಾಂಶ

ಅಂದು ಒಂದೊಂದು ಯೋಜನೆಗೆ
ಒಂದೊಂದು ತಂತ್ರಾಂಶ
ಇಂದು ಹಾಗಲ್ಲ ಎಲ್ಲಾ ಯೋಜನೆಗೂ
ಒಂದೇ ಪಂಚತಂತ್ರ ತಂತ್ರಾಂಶ

ತಂತ್ರಾಂಶದೊಳಗೆ ಸಿಗುವುದು
ಪಂಚಾಯತಿ ಸಭೆಗಳ ವಿವರ
ಹಳ್ಳಿಗಾಡಿನ ಚಂದದೂರಿನ
ಚಿಕ್ಕ ಚೊಕ್ಕ ಪ್ರವರ

ಪಂಚಾಯತಿಯ ಎಲ್ಲ ಸದಸ್ಯರ
ವಿವರ ಬರುವುದೇ ಚಂದ
ಪಂಚಾಯತ್‌ಗೆ ಸಂಬಂಧಪಟ್ಟ
ಚಿತ್ರಗಳ ಚಿತ್ತಾರ ಇನ್ನೂ ಅಂದ

ಪಂಚಾಯತ್‌ನ ಚಿಕ್ಕ ಪುಟ್ಟ
ಆಸ್ತಿಗಳ ಪಟ್ಟಿ ನೋಡಿ
ನಿಮ್ಮ ಮನೆಯ ತೆರಿಗೆ ಬಾಕಿ
ಎಷ್ಟಿದೆ ಎಂದು ಕಣ್ಣು ಬಿಟ್ಟು ನೋಡಿ

ಬಂದೇ ಬರುವುದು ವಿವಿಧ ಯೋಜನೆಗಳ
ಫಲಾನುಭವಿಗಳ ಕಡತ
ಜೊತೆಗೆ ಬರುವುದು ಆಯಾ ವರ್ಷದ
ಬ್ಯಾಲೆನ್ಸ್ ಶೀಟ್ ಸಹಿತ

ಪುಟ್ಟ ಹಳ್ಳಿಯ ಸಾಮಾನ್ಯ
ಮಾಹಿತಿಯ ವರದಿ ಸಿಗುವುದಿಲ್ಲಿ
ಇಷ್ಟು ಚಂದದ, ಇಷ್ಟು ಅಂದದ
ತಂತ್ರಾಂಶ ಸಿಗುವುದಿನ್ನೆಲ್ಲಿ?

ಪಂಚತಂತ್ರ ತಂತ್ರಾಂಶಕ್ಕೆ
ಲಭಿಸಿದೆ ಬಂಗಾರದ ಪದಕ
ಅಭಿವೃದ್ಧಿಪಡಿಸಿದ ಮಹಾನುಭಾವರಿಗೆ
ಅಭಿನಂದನೆಗಳು ಹಾರ್ದಿಕ.

❑

* D/o. ಶಿವರಾಮ ಶೆಟ್ಟಿ, ಕನ್ನಾರ್ ಕಿಸ್ತ್ ಬೆಟ್ಟ್, ಚೇರ್ಕಾಡಿ ಗ್ರಾಮ ಮತ್ತು ಅಂಚೆ–576215, ತಾ॥ ಮತ್ತು ಜಿ॥ ಉಡುಪಿ.

# ತುಮಕೂರು ಜಿಲ್ಲಾ ಉತ್ಸವ
## ಸಂಸ್ಕೃತಿ ಸಂಭ್ರಮ – 2011

– ಪ್ರೊ. ಕೆ. ಚಂದ್ರಣ್ಣ *

ಸಂಸ್ಕೃತಿ ಸೃಜನ ಶೀಲತೆಯ ಸಂಕೇತ, ಪರಂಪರೆಯ ಆಚಾರ, ವಿಚಾರ ಕಲೆ, ಸಾಹಿತ್ಯ, ಜಾನಪದ ಸಂಸ್ಕೃತಿಯ ಅಂಶಗಳು, ಸಂಸ್ಕೃತಿ ಪ್ರಗತಿ ಒಂದೆ ನಾಣ್ಯದ ಎರಡು ಮುಖಗಳಿದ್ದಂತೆ, ಇತ್ತೀಚಿನ ದಿನಗಳಲ್ಲಿ ಅಭಿವೃದ್ಧಿಯಲ್ಲಿ ಸಂಸ್ಕೃತಿಯ ನೋಟ ಎಂಬ ಹೊಸ ಪರಿಕಲ್ಪನೆ ಬೆಳೆದುಬಂದಿದೆ, ಈ ಪರಿಕಲ್ಪನೆ ಅಡಿಯಲ್ಲೇ ಕರ್ನಾಟಕ ಸರ್ಕಾರ ನಾಡಿನ ಕಲೆ, ಸಂಗೀತ, ನೃತ್ಯ, ಹರಿಕಥೆ, ಜಾನಪದ ಮೊದಲಾದ ಸಂಸ್ಕೃತಿ ವಾಹಕಗಳನ್ನು ಉಳಿಸಿ ಬೆಳೆಸುವ ಸಲುವಾಗಿ ಜಿಲ್ಲಾ ಉತ್ಸವವನ್ನು ನಡೆಸುತ್ತಾ ಬಂದಿದದ

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರತೀ ವರ್ಷಕ್ಕೊಮ್ಮೆ ಕಳೆದ ಕೆಲವು ವರ್ಷಗಳಿಂದ ನಿರಂತರವಾಗಿ ನಡೆದುಕೊಂಡು ಬರುತ್ತಿರುವ ಜಿಲ್ಲಾ ಉತ್ಸವಗಳ ಸಾಲಿನಲ್ಲಿ ತುಮಕೂರು ಜಿಲ್ಲಾ ಉತ್ಸವ ಅಗ್ರಸ್ಥಾನದಲ್ಲಿ ನಿಲ್ಲುತ್ತದೆಯೆಂದರೆ ಅತೀಶಯೋಕ್ತಿ ಎನಿಸದು, ಕಾರಣ ಕಲ್ಪತರು ನಾಡಿನ ಸೊಗಡಿನಲ್ಲಿ ಆಯೋಜಿಸಿಕೊಂಡು ಬರುತ್ತಿರುವ ಜಿಲ್ಲಾ ಉತ್ಸವ ವರ್ಷಕ್ಕೊಮ್ಮೆ 3–4 ದಿನಗಳ ಕಾಲ ತುಮಕೂರು ಜಿಲ್ಲೆಯ ಜನರ ಪಾಲಿಗೆ ಸಂಭ್ರಮದ ಹಬ್ಬವಾಗಿ ರೂಪುಗೊಂಡಿದೆ.

ಕಲ್ಪತರು ನಾಡಿನ ಸೊಗಡಿನಲ್ಲಿ ಆಯೋಜಿಸಿಕೊಂಡು ಬರುತ್ತಿರುವ ಜಿಲ್ಲಾ ಉತ್ಸವ ವರ್ಷಕ್ಕೊಮ್ಮೆ 3–4 ದಿನಗಳ ಕಾಲ ತುಮಕೂರು ಜಿಲ್ಲೆಯ ಜನರ ಪಾಲಿಗೆ ಸಂಭ್ರಮದ ಹಬ್ಬವಾಗಿ ರೂಪು ಗೊಂಡಿದೆ.

ಗ್ರಾಮೀಣ ಕಲಾ ಪ್ರಕಾರಗಳ ಸಂಸ್ಕೃತಿಯ ಅಭಿವ್ಯಕ್ತಿಯೊಂದಿಗೆ ರಾಜ್ಯ, ರಾಷ್ಟ್ರಮಟ್ಟದ ಕಲೆಗಳ ಪ್ರದರ್ಶನ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದ ಕಲಾವಿದರ ಅಭಿವ್ಯಕ್ತಿ, ತುಮಕೂರು ಜಿಲ್ಲಾ ಉತ್ಸವದ ವೈಶಿಷ್ಟ. ಜಿಲ್ಲಾ ಉತ್ಸವವನ್ನು ಬರೀ ಜಿಲ್ಲಾ ವ್ಯಾಪ್ತಿಗೆ ಸೀಮಿತಗೊಳಿಸದೇ ಹಂಪಿ, ದಸರಾ ಉತ್ಸವದಂತಹ



ಖ್ಯಾತ ಚಲನಚಿತ್ರ ನಟಿ ಹೇಮಮಾಲಿನಿ ಹಾಗೂ ತಂಡದವರಿಂದ ನೃತ್ಯ ಪ್ರದರ್ಶನ

* ಜಿಲ್ಲಾಧಿಕಾರಿಗಳ ಕಛೇರಿ, ತುಮಕೂರು ಜಿಲ್ಲೆ.

ನಾಡು ಉತ್ಸವದ ಮಟ್ಟಿಗೆ ಬೆಳೆಸಿರುವ ಕೀರ್ತಿ ಸಾಹಿತಿಗಳು, ಸಂಸ್ಕೃತಿ ಪರಿಚಾರಕರು ಆಗಿರುವ ತುಮಕೂರಿನ ಜಿಲ್ಲಾಧಿಕಾರಿ ಡಾ. ಸಿ. ಸೋಮಶೇಖರ್ ಅವರಿಗೆ ಸಲ್ಲುತ್ತದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಇಲಾಖೆ ನಿರ್ದೇಶಕರಾಗಿ ಮಾಡಿದ ಸಂಸ್ಕೃತಿ ಕಟ್ಟುವ ಕೆಲಸವನ್ನು ಜಿಲ್ಲಾಧಿಕಾರಿಯಾಗಿ ತುಮಕೂರಿನಲ್ಲೂ ಮುಂದುವರಿಸಿದ್ದಾರೆ. ಆಡಳಿತ ಕಾರ್ಯಭಾರದ ಒತ್ತಡದ ನಡುವೆಯೂ ಜಿಲ್ಲೆಯ ಎಲ್ಲಾ ಜನ ಪ್ರತಿನಿಧಿಗಳು, ಸನ್ಮಾನ್ಯ ಸಚಿವರು, ಆಡಳಿತ ಅಧಿಕಾರಿಗಳು, ಕಲಾವಿದರುಗಳು ಪ್ರಮುಖವಾಗಿ ಜಿಲ್ಲೆಯ ಜನತೆಯ ವಿಶ್ವಾಸ ಪಡೆದು ಜಿಲ್ಲಾ ಉತ್ಸವನ್ನು ಕಳೆದ 3 ವರ್ಷಗಳಿಂದ ಸಾಂಸ್ಕೃತಿಕ ಹಬ್ಬವಾಗಿ ರೂಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ, ಪ್ರಸಿದ್ಧ ಗಾಯಕರಾದ ದಿ. ಡಾ. ಸಿ. ಅಶ್ವಥ್, ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂ, ಹಂಸಲೇಖ, ಶಿವಮೊಗ್ಗ ಸುಬ್ಬಣ್ಣ, ಕಂಚಿನ ಕಂಠದ ಗಾಯಕಿ ಉಷಾಉತ್ತಪ್, ವಸುಂದರಾ ದಾಸ್, ಬಿ. ಜಯಶ್ರೀ, ಬಾಲಿವುಡ್ ತಾರೆ ಸಂಸದೆ ಹೇಮಾಮಾಲಿನಿ ನಾಡಿನ ಹಿರಿಯ ಸಾಹಿತಿಗಳಾದ ಚನ್ನವೀರ ಕಣವಿ, ಬರಗೂರು ರಾಮಚಂದ್ರಪ್ಪ, ಚಂದ್ರಶೇಖರ ಕಂಬಾರ, ರಂಗೇಗೌಡ, ಕನ್ನಡ ಚಿತ್ರರಂಗದ ಮೇರು ಕಲಾವಿದರಾದ ಅಭಿನಯ ಶಾರದೆ ಜಯಂತಿ, ತಾರಾ, ಜಗ್ಗೇಶ್, ಮುಖ್ಯಮಂತ್ರಿ ಚಂದ್ರು, ಲೀಲಾವತಿ, ವಿನೋದ ರಾಜ್, ಅರ್ಜುನಸರ್ಜಾ, ಮುರುಳಿ, ಸುದೀಪ್, ಪೂಜಾಗಾಂಧಿ...... ಹೀಗೆ ಒಬ್ಬರಿಬ್ಬರಲ್ಲ ನಾಡಿನ ಸಾಂಸ್ಕೃತಿಕ ರಂಗದ ಗಣ್ಯರೆಲ್ಲಾ ತುಮಕೂರು ಜಿಲ್ಲಾ ಉತ್ಸವದಲ್ಲಿ ಪಾಲ್ಗೊಂಡು ಕಾರ್ಯಕ್ರಮ ನೀಡಿ ವಿಶೇಷ ಮೆರಗು ನೀಡಿದ್ದಾರೆ.

ನಾಡಿನ ಗಣ್ಯ ಮಾನ್ಯರಷ್ಟೆ ಅಲ್ಲ, ಪರಮಪೂಜ್ಯ ಶತಾಯುಷಿ ಕರ್ನಾಟಕ ರತ್ನ ಸಿದ್ದಗಂಗಾ ಮಠಾಧ್ಯಕ್ಷರಾದ ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ಅವರು ಸಹ ಜಿಲ್ಲಾ ಉತ್ಸವದಲ್ಲಿ ಪಾಲ್ಗೊಂಡು ಉತ್ಸವ ಆಯೋಜನೆಯ ಬಗ್ಗೆ ಹರ್ಷ ವ್ಯಕ್ತ ಪಡಿಸಿರುವುದು ಉತ್ಸವದ ಹಿರಿಮೆಗೆ ಸಾಕ್ಷಿಯೆನಿಸಿದೆ.

ಗ್ರಾಮೀಣ, ಜಾನಪದ ಕಲಾ ಪ್ರಕಾರಗಳಾದ ಡೊಳ್ಳು ಕುಣಿತ, ಪಟ ಕುಣಿತ, ವೀರಗಾಸೆ, ಸೋಮನ ಕುಣಿತ, ನಗಾರಿ ವಾದ್ಯ, ಕರಡಿ ಮಜಲು ಮುಂತಾದವುಗಳಿಗೆ ಜಿಲ್ಲಾ ಉತ್ಸವದಲ್ಲಿ ಪ್ರಾಧಾನ್ಯತೆ ಕೊಟ್ಟು ಪ್ರದರ್ಶನಕ್ಕೆ ಅವಕಾಶ ಮಾಡಿಕೊಡುತ್ತಾ ಬಂದಿರುವುದು ಜನಪದ ಕಲೆಯ ಬೆಳವಣಿಗೆಗೆ ಸಹಕಾರಿಯಾಗಿದೆ, ಸ್ಥಳೀಯ ಸಂಸ್ಕೃತಿಯ ಅನಾವರಣದ ಜೊತೆಗೆ ಹೊರಗಿನ ಸಂಸ್ಕೃತಿಯನ್ನು ತುಮಕೂರಿನ ಜನತೆ ಕಣ್ತುಂಬಿ ಕೊಳ್ಳಬೇಕು ಎಂಬ ಜಿಲ್ಲಾಧಿಕಾರಿಗಳ ಆಶಯಕ್ಕನುಗುಣವಾಗಿ ಜಿಲ್ಲಾ ಉತ್ಸವದಲ್ಲಿ ಮಣಿಪುರಿ ಕಲಾವಿದರು ನಡೆಸಿಕೊಟ್ಟ ಮಣಿಪುರ ನೃತ್ಯ, ಪಾಪ್ ಶೈಲಿ ಗಾಯಕಿ ಉಷಾ ಉತ್ತಪ್ ಗಾಯನ, ಕವಿತಾ ಕೃಷ್ಣಮೂರ್ತಿ, ಶೋಭನಾ ಅವರ ಇಂಪಾದ ಗಾಯನ ಜಿಲ್ಲೆಯ ಜನರ ಮನಸೂರೆಗೊಂಡಿದೆ. ನಾಡಿನ ಪ್ರಸಿದ್ದ ಸಂಗೀತ ನಿರ್ದೇಶಕರಾದ ಹಂಸಲೇಖ ಮತ್ತವರ ತಂಡ ಪ್ರದರ್ಶಿಸಿದ ದೇಶಿ ನೃತ್ಯ ರೂಪಕ ವರ್ಷ ಕಳೆದರೂ ಜನ ಮಾನಸದಲ್ಲಿ ಉಳಿದಿರುವುದು ಉತ್ಸವದ ಸವಿನೆನಪಿನ ದ್ಯೋತಕವಾಗಿದೆ.

ಸುಗಮ ಸಂಗೀತ ಕ್ಷೇತ್ರದ ದಿಗ್ಗಜ. ದಿ. ಸಿ. ಅಶ್ವತ್ಥ, 2009 ರ ಜಿಲ್ಲಾ ಉತ್ಸವದಲ್ಲಿ ಹಾಡಿನ ಏರುಧ್ವನಿಯ ಗಾಯಕ ಜಿಲ್ಲೆಯ ಜನತೆ ಮರೆಯುವಂತಿಲ್ಲ, ಇನ್ನೂ ಎಸ್.ಪಿ. ಕಿಕ್ಕೇರಿ ಕೃಷ್ಣಮೂರ್ತಿ ಅವರ ತಂಡದೊಂದಿಗೆ ಸ್ಥಳೀಯ ಪ್ರತಿಭೆಗಳ ಗಾಯನ ಉತ್ಸವದಲ್ಲಿ ಗಮನ ಸೆಳೆದಿದೆ. ಸಾವಿರಾರು ರೂ. ಗಳನ್ನು ಕೊಟ್ಟೆ ನೋಡಬೇಕಿದ್ದ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಕಲಾವಿದರ ಕಾರ್ಯಕ್ರಮವನ್ನು ಜಿಲ್ಲೆಯ ಜನತೆ ಕಳೆದ ಮೂರು ವರ್ಷಗಳಿಂದ ಉಚಿತವಾಗಿ ಕಣ್ತುಂಬಿ ಕೊಳ್ಳುತ್ತಿರುವುದು ಸೌಭಾಗ್ಯವೇ ಸರಿ.

ಜಿಲ್ಲಾ ಉತ್ಸವವನ್ನು ಕೇವಲ ಮನೋರಂಜನೆಗೆ ಮಾತ್ರ ಸೀಮಿತಗೊಳಿಸದೆ, ಸಾಹಿತ್ಯ, ವೈಚಾರಿಕ ಚಿಂತನೆಯ ಸ್ಪರ್ಶ ನೀಡಿರುವುದು ತುಮಕೂರು ಜಿಲ್ಲಾ ಉತ್ಸವದ ವಿಶೇಷವೆನಿಸಿದೆ. ಮನೋರಂಜನೆ ಕಾರ್ಯಕ್ರಮ ಸಂಜೆ ವೇಳೆಯಾದರೆ ಪರ್ಯಾಯ ವೇದಿಕೆಯಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೆ ಸಾಹಿತ್ಯ, ಕಲೆ, ಸಂಶೋಧನೆ, ಇತಿಹಾಸ, ಪ್ರವಾಸೋದ್ಯಮ, ಪರಿಸರ ವಿಷಯಗಳ ಕುರಿತಂತೆ ಚಿಂತನೆಯ ಕಾರ್ಯಕ್ರಮ, ಗೋಷ್ಠಿಗಳು ಉತ್ಸವವನ್ನು ಅರ್ಥಪೂರ್ಣಗೊಳಿಸಿದೆ, ಜಿಲ್ಲೆಯ ಪ್ರಸಿದ್ದಿ ಚಿಂತಕರು, ಸಾಹಿತಿಗಳು, ಸಾಧಕರು ಸಂಪನ್ಮೂಲ ವ್ಯಕ್ತಿಗಳಾಗಿ ಬಂದು ವಿಚಾರ ಮಂಥನದ ಮೂಲಕ ಜಾಗೃತಿ ಮೂಡಿಸಿದ್ದರೆ, ಮಕ್ಕಳಲ್ಲಿ ಸಂಸ್ಕೃತಿಯ ಪ್ರಜ್ಞೆ ಮೂಡಿಸಲು ನಾನಾ ಸ್ಪರ್ದೆಗಳನ್ನು ಏರ್ಪಡಿಸಿ ಅವರ ಪ್ರತಿಭೆಯನ್ನು ಉತ್ಸವದ ಮೂಲಕ ಪ್ರೋತ್ಸಾಹಿಸಲಾಗಿದೆ.

2009 ರಲ್ಲಿ ಸುಗಮ ಸಂಗೀತ ಸಮ್ಮೇಳನ, 2010ರ ಜಿಲ್ಲಾ ಸಾಹಿತ್ಯ ಸಮ್ಮೇಳನದ ಜೊತೆಗೆ ಜಿಲ್ಲಾ ಉತ್ಸವವನ್ನು ಜಿಲ್ಲಾಡಳಿತ ಆಯೋಜಿಸಿದ್ದು ಉತ್ಸವದಲ್ಲಿ ಸರ್ವರೂ ಭಾಗಿಯಾಗಬೇಕು ಎಂಬ ಆಶಯಕ್ಕೆ ಪೂರಕವಾಗಿದೆ, ಜಿಲ್ಲೆಯ ಖ್ಯಾತರಾದ ತಿ.ನಂ.ಶ್ರೀ, ಡಾ. ಗುಬ್ಬಿ ವೀರಣ್ಣ, ಪದ್ಮಶ್ರೀ ಶಿವಮೂರ್ತಿ ಶಾಸ್ತ್ರಿ, ಅವರ ಹೆಸರುಗಳನ್ನು ಉತ್ಸವದ ನಾನಾ ವೇದಿಕೆಗಳಿಡುವ ಮೂಲಕ ಜಿಲ್ಲೆಯ ಸಾಧಕರ ಸ್ಮರಣೆ ಮಾಡಲಾಗಿದೆ, ಜಗಮಗಿಸುವ ವಿದ್ಯುತ್ ದೀಪಾಲಂಕಾರ, ಅತ್ಯಾಕರ್ಷಕ ವೇದಿಕೆ, ಸಹಸ್ತ, ಸಹಸ್ರ ಜನಸ್ತೋಮ ಹೀಗೆ ತುಮಕೂರು ಜಿಲ್ಲಾ ಉತ್ಸವ ಸೊಬಗೆ, ಸೊಬಗು, ಇಂತಹ ಸೊಬಗನ್ನು ಪ್ರತಿ ವರ್ಷ ಕಣ್ತುಂಬಿ ಕೊಳ್ಳಬೇಕೆಂಬ ಆಶಯವನ್ನು ಜಿಲ್ಲೆಯ ಜನತೆ ಹೊಂದಿದ್ದಾರೆ.

❑



# ಕುಡಿಯುವ ನೀರು ಮತ್ತು ಗ್ರಾಮೀಣ ಸಮುದಾಯ



**ಪ್ರೊ. ಎ.ಎಚ್. ಮಾಸಾಪತಿ ***
**ಮೊಬೈಲ್ : 93435 35229**

ಭಾರತೀಯ ಸಂವಿಧಾನದ 73ನೇ ತಿದ್ದುಪಡಿಯ ನಂತರ ಗ್ರಾಮೀಣ ನೀರು ಪೂರೈಕೆಯ ವಿಷಯವು, ಪಂಚಾಯತ್ ರಾಜ್ ಸಂಸ್ಥೆಗಳ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರು ಪೂರೈಕೆ ಹಾಗೂ ಜಲಮೂಲ ಸಂಬಂಧಿತ ಯೋಜನೆಗಳ ಪರಾಮರ್ಶೆ ಮಾಡುವಾಗ ಗ್ರಾಮಸಭೆಯು ಸಂಪೂರ್ಣವಾದ ಸಹಭಾಗಿತ್ವ ಹೊಂದಬೇಕು.

ನೀರು (ರಾಸಾಯನಿಕವಾಗಿ $H_2O$ ಎಂದು ಗುರುತಿಸಲ್ಪಡುತ್ತದೆ) ಪ್ರಕೃತಿದತ್ತವಾದ ಅಮೂಲ್ಯ ಸಂಪನ್ಮೂಲವಾಗಿದೆ. ಅದು ಹಲವಾರು ಚಮತ್ಕಾರಕ ಶಕ್ತಿಗಳ ಆಗರವಾಗಿದೆ. ಅದು ಪ್ರಾಣರಕ್ಷಕ, ಆರೋಗ್ಯಧಾಯಕ, ಚೈತನ್ಯವರ್ಧಕ ಮತ್ತು ದೀರ್ಘಾಯುಷ್ಯ, ಪ್ರೇರಕಶಕ್ತಿಯನ್ನು ಹೊಂದಿದೆ. ಪರಿಶುದ್ಧವಾದ ನೀರು, ಸಕಲ ಜೀವರಾಶಿಯ ಅಸ್ತಿತ್ವದ ಆಧಾರಶಿಲೆಯಾಗಿದೆ. ಆದರೆ, ಕಲುಷಿತ ನೀರು ಸರ್ವನಾಶದ ಶಾಸನಕ್ಕೆ ಮುನ್ನುಡಿ ಆಗುತ್ತದೆ. ಕಲುಷಿತ ನೀರಿನಿಂದ ಹಲವಾರು ಮಾರಕ ರೋಗಗಳು ಉದ್ಭವಿಸಿ ಜೀವಿಗಳ ಅಕಾಲಿಕ ಮರಣದ ಪ್ರಧಾನ ಕಾರಣವಾಗುತ್ತವೆ. ಆದುದರಿಂದ, ನೀರಿನ ಪರಿಶುದ್ಧತೆಯನ್ನು ಸಂರಕ್ಷಿಸಲು ನಾಗರಿಕ ಸಮಾಜ ಆದ್ಯತೆ ನೀಡಬೇಕು. ಆರೋಗ್ಯದಾಯಕ ಜೀವನ ಶೈಲಿಯು ಜಲ–ನೈರ್ಮಲದ ಸಂರಕ್ಷಣೆಯನ್ನು ಅವಲಂಬಿಸಿದೆ.

ಪ್ರಾಚೀನ ನಾಗರಿಕತೆಯ ಇತಿಹಾಸದಲ್ಲಿ, ಪರಿಶುದ್ಧ ನೀರನ್ನು 'ಜೀವ–ಜಲ' ಎಂದು ಕರೆಯಲಾಗಿದೆ. ಪ್ರಾಚೀನ ನಾಗರಿಕತೆಗಳು ನೀರಿನ ದಂಡೆ/ನದೀ ತೀರದಲ್ಲಿ ಉದ್ಭವಿಸಿ ವಿಸ್ಮಯಕಾರಕ ಪ್ರಗತಿಯ ಐತಿಹಾಸಿಕ/ದಾಖಲೆಗಳನ್ನು ನಿರ್ಮಿಸಿ ಕಾಲ–ಪುರುಷನ ಮರುಭೂಮಿಯ ಮೇಲೆ ಮುನ್ನಡೆಯ ಹೆಜ್ಜೆಗಳನ್ನಿಟ್ಟಿವೆ. ಮೊಹಂಜೋದಾರೊ, ಹರಪ್ಪಾ, ಇಜಿಪ್ತ್, ಬೆಬಿಲೋನ್, ಗ್ರೀಕ್, ರೋಮ್ ಇತ್ಯಾದಿ. ನಾಗರಿಕತೆಗಳ ಮೇಲೆ ನೀರಿನ ಪ್ರಭಾವ ವಿಶಿಷ್ಟವಾಗಿದೆ. ಭೂಮಿಯ ಮೇಲೆ ಅನೇಕ ತಂಪು ಮತ್ತು ಉಷ್ಣ ನೀರಿನ ನೈಸರ್ಗಿಕ ಕಾರಂಜಿಗಳಿವೆ. ಅವುಗಳ ಪರಿಶುದ್ಧವಾದ ಜಲಪಾನ ಹಾಗೂ ಸ್ನಾನದಿಂದ ಆರೋಗ್ಯಭಾಗ್ಯ ದೊರೆಯುತ್ತದೆ. ಉರ್ದು/ಪರ್ಶಿಯನ್ ಭಾಷೆಯಲ್ಲಿ 'ಆಬ್–ಏ–ಹಯಾತ್' ಎಂಬ ಒಂದು ಅದ್ಭುತವಾದ ನೀರಿನ ಬುಗ್ಗೆಯನ್ನು ಕುರಿತು ಉಲ್ಲೇಖಿಸಲಾಗಿದೆ. ಅದರ ಜಲಪಾನದಿಂದ ಮಾನವನ ದೇಹ ಮತ್ತು ಮನಸ್ಸಿನಲ್ಲಿ ವಿಸ್ಮಯಕಾರಕ ಚೈತನ್ಯ ಉದ್ಭವಿಸುವುದೆಂದು ಪರಿಗಣಿಸಲಾಗಿದೆ. 'ನೀರು' ಮಾನವ–ಜನಾಂಗದ ಜೀವನಾಡಿಯಾಗಿದೆ. ನೀರಿಲ್ಲದ ಪೃಥ್ವಿ ಹಾಗೂ ಜೀವ–ಜಗತ್ತನ್ನು ಊಹಿಸಲು ಅಸಾಧ್ಯವೆನಿಸುತ್ತದೆ.

ಮಾನವ ಜನಾಂಗದ ಪ್ರಗತಿಯಲ್ಲಿ ನೀರು ಮಹತ್ವದ ಪಾತ್ರವಹಿಸಿದೆ. ಸಾಮಾಜಿಕ/ಆರ್ಥಿಕ ವಿಕಾಸ, ಸಾಮುದಾಯಿಕ ಅಭಿವೃದ್ಧಿ ಮತ್ತು ಸಾರ್ವಜನಿಕ ಆರೋಗ್ಯ ಸಂರಕ್ಷಣೆಗಾಗಿ ಶುದ್ಧವಾದ ನೀರು ಸಾಕಷ್ಟು ಪ್ರಮಾಣದಲ್ಲಿ ದೊರೆಯಬೇಕು. ರಾಷ್ಟ್ರದ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸುವಾಗ ಪೃಥ್ವಿ, ವಾಯು, ಜಲ, ಅಗ್ನಿ ಹಾಗೂ ಆಕಾಶದಂತಹ ಪಂಚಮಹಾಭೂತಗಳೆಡೆಗೆ ಲಕ್ಷ್ಯವನ್ನು ಕೇಂದ್ರೀಕರಿಸಬೇಕು. ಜಲ–ಸಂಪನ್ಮೂಲ ಸಂರಕ್ಷಣೆ/ಸಮೃದ್ಧಿಗೆ ಸರ್ವಪ್ರಯತ್ನಗಳು ನಡೆಯಬೇಕು. ಶಿಕ್ಷಣ ಮತ್ತು ಪ್ರೋತ್ಸಾಹದಾಯಕ ಕ್ರಮಗಳಿಂದ ಅಗತ್ಯವಾದ ನಿಯಮಗಳನ್ನು ಬಿಗಿಗೊಳಿಸಿ ನೀರು ಬಳಕೆದಾರರ ಸಮುದಾಯದಲ್ಲಿ, ಜಲ ಸಾಕ್ಷರತೆ/ಜಾಗೃತಿಯನ್ನು ಹೆಚ್ಚಿಸಬೇಕು.

## ಕುಡಿಯುವ ನೀರಿನ ಸಮಸ್ಯೆ

**1. ನೀರು ಪೂರೈಕೆ ಯೋಜನೆಗಳ ನಿರ್ವಾಹಕರ ತಾಂತ್ರಿಕ ಸಾಮರ್ಥ್ಯ** : ಕುಡಿಯುವ ನೀರು ಪೂರೈಕೆಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವಂತಹ ವ್ಯಕ್ತಿಗಳು ಭೂ–ಜಲಶಾಸ್ತ್ರ ಮತ್ತು

* ನಿರ್ದೇಶಕರು, ವಿಕಾಸ ಪ್ರಕಾಶನ, ನಂ. 1/4, 1ನೇ ಅಡ್ಡರಸ್ತೆ, ಕೆ.ಎಚ್.ಬಿ. ರಸ್ತೆ, ಸುಲ್ತಾನ್‌ಪಾಳ್ಯ, ಬೆಂಗಳೂರು–560 032.

ಅಂತರ್ಜಲ ನಿರ್ವಹಣೆಯಲ್ಲಿ ಪ್ರಾವೀಣ್ಯತೆಯನ್ನು ಹೊಂದಿರಬೇಕು. ಸಾರ್ವಜನಿಕ ಆರೋಗ್ಯ ಇಲಾಖೆಗಳಲ್ಲಿ ಭೂ-ಜಲ ಶಾಸ್ತ್ರಜ್ಞರ ಸೇವೆಯು ಅಗತ್ಯವಾಗಿದೆ. ಇಂತಹ ತಜ್ಞರ ಸಹಯೋಗದಿಂದ ಪರಿಸರ ಸಂರಕ್ಷಣೆ ಮತ್ತು ಜಲ-ನೈರ್ಮಲ್ಯ ಸಮಸ್ಯೆಯನ್ನು ಸೂಕ್ತವಾಗಿ ನಿರ್ವಹಿಸಬಹುದಾಗಿದೆ.

**2. ಜಲ-ಮಾಲಿನ್ಯ :** ಆಧುನಿಕ ಸಮಾಜದಲ್ಲಿ, ಭೂಮಿಯ ಮೇಲ್ಮೈ ನೀರು ಹಾಗೂ ಅಂತರ್ಜಲ ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಾಗುವುದರಿಂದ ಜಲ-ಮಾಲಿನ್ಯದಂತಹ ಗಂಭೀರ ಸಮಸ್ಯೆ ಉದ್ಭವಿಸುವುದು. ಸ್ಥಳೀಯ ಜನರು ತಮ್ಮ ಜೀವನ ನಿರ್ವಹಣೆ ಮತ್ತು ಇತರ ಉದ್ದೇಶಗಳಿಗಾಗಿ ಸ್ಥಳೀಯ ಜಲ-ಸಂಪನ್ಮೂಲಗಳನ್ನು ಬಳಸಿಕೊಳ್ಳುತ್ತಾರೆ. ಆದರೆ ಬೃಹದ್ ನೀರಾವರಿ, ಔದ್ಯೋಗೀಕರಣ ಮತ್ತು ನಗರೀಕರಣದ ಒತ್ತಡದಿಂದ ಜಲ-ಮಾಲಿನ್ಯ ಹೆಚ್ಚಾಗಿದೆ.

**3. ಪರಿಮಿತವಾದ ಸಂಪನ್ಮೂಲ :** ನೀರು ಒಂದು ಪರಿಮಿತವಾದ ನೈಸರ್ಗಿಕ ಸಂಪನ್ಮೂಲವಾಗಿದೆ. ಯಾವುದೇ ತಂತ್ರಜ್ಞಾನದ ಸಹಾಯದಿಂದ ಜನರ ಬಳಕೆಗೆ ಅಗತ್ಯವಿರುವ ಪ್ರಮಾಣದಲ್ಲಿ ನೀರನ್ನು ಉತ್ಪಾದಿಸಲು ಸಾಧ್ಯವಾಗಿಲ್ಲ. ರಾಷ್ಟ್ರದಲ್ಲಿ ಸಂಭವಿಸುವಂತಹ ಜಲಕ್ಷಾಮದಿಂದ, ಜನರು ದಾರಿದ್ರ್ಯದ ವಿಷ-ವರ್ತುಳದಲ್ಲಿ ಸಿಲುಕಿದ್ದಾರೆ.

**4. ಜನಸಂಖ್ಯಾ ಬೆಳವಣಿಗೆ :** ಜನಸಂಖ್ಯಾ ಸ್ಫೋಟದಿಂದ, ನಗರ/ಉಪನಗರಗಳು ತ್ವರಿತಗತಿಯಿಂದ ಬೆಳೆಯುತ್ತವೆ. ಜನಸಂಖ್ಯಾ ಬೆಳವಣಿಗೆಯೊಂದಿಗೆ ಜಲ-ಮಾಲಿನ್ಯವೂ ಸಹ ಬೃಹದಾಕಾರ ಹೊಂದುತ್ತದೆ. ಭಾರತದಲ್ಲಿ ಪ್ರತಿದಿನ 17,600 ದಶಲಕ್ಷ ಲೀಟರ್‌ಗಳಷ್ಟು ಕೊಳಚೆ ನೀರು ಉತ್ಪತ್ತಿಯಾದರೆ, ಅದರಲ್ಲಿ ಕೇವಲ 4000 ಲೀಟರ್‌ಗಳಷ್ಟು ಕೊಳಚೆ ನೀರು ಮಾತ್ರ ಸಂಸ್ಕರಣೆ ಹೊಂದುತ್ತದೆ. ಉಳಿದಂತಹ ಅತ್ಯಧಿಕ ಪ್ರಮಾಣದ ಕೊಳಚೆ ನೀರು ಪರಿಸರದಲ್ಲಿ ಸೇರಿಕೊಳ್ಳುತ್ತದೆ.

**5. ಫ್ಲೋರೈಡ್ ಸಮಸ್ಯೆ :** ಭಾರತದ ಹಲವಾರು ಭಾಗಗಳಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ ಗರಿಷ್ಠ ಮಿತಿಯನ್ನು ದಾಟಿರುವುದರಿಂದ ಸಾರ್ವಜನಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಜನರು ಸಾಮಾಜಿಕ/ಆರ್ಥಿಕ ಸಂಕಷ್ಟಕ್ಕೆ ಗುರಿಯಾಗುತ್ತಾರೆ.

**6. ಹಣಕಾಸು ಸಂಪನ್ಮೂಲ ಮತ್ತು ಸುರಕ್ಷತೆಯ ಕೊರತೆ :** ಕುಡಿಯುವ ನೀರು ಪೂರೈಕೆಗಾಗಿ ಸಂಪನ್ಮೂಲಗಳ ಕೊರತೆಯಾದ ಸಂದರ್ಭದಲ್ಲಿ ಕೃಷಿ ಮತ್ತು ನೀರಾವರಿ ಇಲಾಖೆಗಳ ಜಿಲ್ಲಾ ಯೋಜನೆ ಹಾಗೂ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾರ್ಯಕ್ರಮಗಳ ಮೂಲಕ ನೀರು ಮರುಪೂರಣ ಚಟುವಟಿಕೆಗಳಿಗೆ ಹಣಕಾಸು ಪೂರೈಸಬಹುದಾಗಿದೆ. ಕುಡಿಯುವ ನೀರು ಪೂರೈಕೆಯ ಕಾರ್ಯಕ್ರಮವನ್ನು ಪಂಚಾಯತ್ ರಾಜ್ ಸಂಸ್ಥೆಗಳು ನಿರ್ವಹಿಸುವಂತೆ ಪ್ರೋತ್ಸಾಹ ನೀಡಬೇಕು.

**7. ನಿರ್ವಹಣೆಯ ಸಮಸ್ಯೆ :** ಕುಡಿಯುವ ನೀರು ನಿರ್ವಹಣೆಯ ಚಟುವಟಿಕೆಗಳು ಜಿಲ್ಲಾ ಮಟ್ಟದಲ್ಲಿ ಆಗದೆ, ರಾಜ್ಯಮಟ್ಟದಲ್ಲಿ ನಡೆಯುತ್ತಿವೆ. ಈ ಸಮಸ್ಯೆಯನ್ನು ಪರಿಹರಿಸಲು ಜಿಲ್ಲಾಮಟ್ಟದ ಸಾಂಸ್ಥಿಕ ವ್ಯವಸ್ಥೆಯನ್ನು ಸಶಕ್ತಗೊಳಿಸಲು, ರಾಜ್ಯ ಸರ್ಕಾರ ಗಮನ ಹರಿಸಬೇಕು.

**8. ಕಾರ್ಯಾಚರಣೆಯ ವೈಫಲ್ಯ :** ರಾಷ್ಟ್ರೀಯ ಗ್ರಾಮೀಣ ನೀರು ಪೂರೈಕೆಯ ಕಾರ್ಯಕ್ರಮದಲ್ಲಿ, ಬೃಹದ್ ಪ್ರಮಾಣದ ಬಂಡವಾಳ ಹೂಡಿಕೆ ಮಾಡಿದ್ದರೂ ಸಹ ಈ ವ್ಯವಸ್ಥೆಯ ವಿಫಲವಾಗಿದೆ ಎಂಬುದು ಸರ್ಕಾರದ ಅನುಭವಕ್ಕೆ ಬಂದಿದೆ. ಕುಡಿಯುವ ನೀರಿನ ಯೋಜನೆಗಳ ಕಳಪೆ ಕಾರ್ಯಾಚರಣೆ ಮತ್ತು ಅಸಮರ್ಪಕ ನಿರ್ವಹಣೆಯಿಂದ ವ್ಯವಸ್ಥೆಯು ಪರಿಣಾಮಕಾರಿ ಆಗಿರುವುದಿಲ್ಲ.

**9. ಜಲ-ವಿವಾದ :** ಭಾರತದ ಅನೇಕ ರಾಜ್ಯಗಳಲ್ಲಿ ಅನಾವೃಷ್ಟಿಯ ದೆಸೆಯಿಂದ ರಾಜ್ಯ-ರಾಜ್ಯಗಳ ನಡುವೆ ನದೀ ನೀರಿನ ಹಂಚಿಕೆಗಾಗಿ, ಗಂಭೀರ ಸ್ವರೂಪದ ವಿವಾದಗಳು ಉದ್ಭವಿಸುತ್ತವೆ. ಸೀಮಿತವಾದ ಜಲ-ಸಂಪನ್ಮೂಲಗಳ ಮೇಲಿನ ಒತ್ತಡ ಹೆಚ್ಚುತ್ತಿದೆ. ಹಲವಾರು ಕ್ಷೇತ್ರಗಳಲ್ಲಿ, ನೀರಿಗಾಗಿ ವಿಪರೀತ ಬೇಡಿಕೆ ಇದೆ. ದೇಶದ ಸುಮಾರು 20 ಕೋಟಿ ಜನರಿಗೆ ಕುಡಿಯಲು ಸುರಕ್ಷಿತವಾದ ನೀರು ದೊರಕದಂತಹ ಪರಿಸ್ಥಿತಿ ಉಂಟಾಗಿದೆ. ಇಂತಹ ಪರಿಸ್ಥಿತಿಯು ಜಲ-ವಿವಾದಕ್ಕೆ ಕಾರಣವಾಗುವುದು.

**10. ಗ್ರಾಮಸ್ಥರ ನಿರಾಸಕ್ತಿ :** ಕುಡಿಯುವ ನೀರು ಪೂರೈಕೆಯು ಸಮಾಜ ಕಲ್ಯಾಣದ ಕಾರ್ಯವಾಗಿರುವುದರಿಂದ ಸರ್ಕಾರವು ಪುಕ್ಕಟೆಯಾಗಿ ನೀರು ಪೂರೈಕೆ ಮಾಡಬೇಕು ಎಂದು ಗ್ರಾಮೀಣ ಜನರು ಭಾವಿಸಿದ್ದಾರೆ. ಸ್ಥಾನಿಕ ಸಂಸ್ಥೆಗಳ ಮೂಲಕ ನೀರನ್ನು ಜಾಗೃತಿಯಿಂದ ಸಂರಕ್ಷಿಸಬೇಕೆಂಬ ಭಾವನೆಯನ್ನು ಹೊಂದಿರದೆ, ಗ್ರಾಮಸ್ಥರು ಪರಾವಲಂಬನೆಯ ಭಾವನೆಯನ್ನು ಬೆಳೆಸಿಕೊಂಡಿದ್ದಾರೆ. ಕುಡಿಯುವ ನೀರಿನ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ನಿರ್ವಹಣೆಯಲ್ಲಿ ಸ್ಥಾನಿಕ ಸಮುದಾಯದ ಸಹಭಾಗಿತ್ವದ ಅಗತ್ಯವನ್ನು ಕುರಿತು ಹಲವಾರು ಸಮೀಕ್ಷೆಗಳು ಗಮನ ಸೆಳೆದಿವೆ.

**11.** ಕುಡಿಯುವ ನೀರು ಪೂರೈಕೆಯ ಲೋಪ / ದೋಷಗಳನ್ನು 'ವಿಶ್ವ ನೀರು ಪೂರೈಕೆ ನೈರ್ಮಲ್ಯ ಮತ್ತು ವ್ಯವಸ್ಥೆಯ ಅಂದಾಜು ವರದಿಯಲ್ಲಿ ಗುರುತಿಸಲಾಗಿದೆ.

1. ಮಾನವ ಸಂಪನ್ಮೂಲಗಳ ಕೊರತೆ, 2. ಸಾಂಸ್ಥಿಕ ಸಮಸ್ಯೆ, 3. ಆರ್ಥಿಕ ಬಿಕ್ಕಟ್ಟು, 4. ವಲಯಗಳ ನಡುವಿನ ಪರಸ್ಪರ ಸಮನ್ವಯದ ಅಭಾವ, 5. ಅಲ್ಪ ಪ್ರಮಾಣದ ಸಾಮುದಾಯಿಕ ಸಹಭಾಗಿತ್ವ, 6. ಅತೃಪ್ತಿಕರ ಕಾರ್ಯನಿರ್ವಹಣೆ, 7. ನೈರ್ಮಲ್ಯ ಶಿಕ್ಷಣದ ಕೊರತೆ, 8. ಮಾಹಿತಿ ಹಾಗೂ ಸಂಪರ್ಕದ ಅಭಾವ, 9. ನೀರಿನ ಕಳಪೆ ಗುಣಮಟ್ಟ, 10. ರಾಜಕೀಯ ಇಚ್ಛಾಶಕ್ತಿಯ ದುರ್ಬಲತೆ.

ಇಂತಹ ನ್ಯೂನತೆಗಳು ಅಭಿವೃದ್ಧಿ ಹೊಂದುತ್ತಿರುವ ಅನೇಕ ರಾಷ್ಟ್ರಗಳಿಗೆ ಅನ್ವಯಿಸುತ್ತವೆ.

**12. ಗ್ರಾಮೀಣ ಜಲ ಸಾಕ್ಷರತೆಯ ಕೊರತೆ :** ಜಲ–ಸಾಕ್ಷರತೆಯು ಕೇವಲ ನಗರ ಪ್ರದೇಶಗಳಿಗೆ ಸೀಮಿತವಾಗಿರದೆ, ಅದು ಲಕ್ಷಾಂತರ ಭಾರತದ ಗ್ರಾಮಗಳಿಗೆ ತಲುಪಬೇಕು. ಶುದ್ಧವಾದ ಪಾನೀಯ ಜಲದ ಆಂದೋಲನಗಳು ಪ್ರತಿಯೊಂದು ಗ್ರಾಮದಲ್ಲಿ ಗತಿಶೀಲವಾಗಬೇಕು. ನೈರ್ಮಲ್ಯವು ದೈವತ್ವದ ಪ್ರಥಮ ಸೋಪಾನವಾಗಿದೆ. ಜಲ–ನೈರ್ಮಲ್ಯ–ಸಂರಕ್ಷಣೆಯು ನಾಗರಿಕ ಜನಾಂಗದ ಪರಮ ಕರ್ತವ್ಯವಾಗಿದೆ.

## ಜಲ–ಸಂಪನ್ಮೂಲಗಳ ನಿರ್ವಹಣೆ

ಸೌರವ್ಯೂಹದಲ್ಲಿ ಪೃಥ್ವಿಯು ಜಲಾವೃತವಾದ ಮತ್ತು ಜೀವಿಗಳನ್ನು ಹೊಂದಿರುವಂತಹ ಏಕೈಕ ಗ್ರಹವಾಗಿದೆ. ಪೃಥ್ವಿಯ ಮೇಲೆ ನೀರು ಸರ್ವವ್ಯಾಪಿಯಾದ ಸಂಪನ್ಮೂಲವೆಂಬಂತೆ ಕಂಡುಬಂದರೂ ಸಹ ಅದರ ವಾಸ್ತವಿಕ ಸ್ವರೂಪ ಭಿನ್ನವಾಗಿದೆ. ಭೂಮಿಯ ಮೇಲಿನ ಒಟ್ಟು ನೀರಿನ ಪರಿಮಾಣದ ಶೇಕಡಾ 97.3 ರಷ್ಟು ಉಪ್ಪು ಮಿಶ್ರಿತ ಹಾಗೂ ಶೇಕಡಾ 2.7 ರಷ್ಟು ಮಾತ್ರ ಸಿಹಿ ನೀರು. ಅದರಲ್ಲಿ ಶೇಕಡಾ 70ರಷ್ಟು ಅಂಟಾರ್ಟಿಕಾ ಮತ್ತು ಗ್ರೀನ್‌ಲ್ಯಾಂಡ್‌ನಲ್ಲಿ ಹಿಮಬಂಡೆಗಳ ರೂಪದಲ್ಲಿದೆ. ಉಳಿದಂತಹ ನೀರಿನ ಬಹಳಷ್ಟುಭಾಗ ಮಣ್ಣಿನ ತೇವಾಂಶವಾಗಿದೆ ಅಥವಾ ಭೂಮಿಯ ಅಂತರಾಳದಲ್ಲಿ ಸೇರಿಕೊಂಡಿರುವುದರಿಂದ ಅದು ಮಾನವರ ನೇರವಾದ ಬಳಕೆಗೆ ಲಭ್ಯವಾಗುವುದಿಲ್ಲ. ಭೂಮಿಯ ಮೇಲಿನ ಒಟ್ಟು ನೀರಿನ ಸಂಗ್ರಹದ ಶೇಕಡಾ 1 ಕ್ಕಿಂತ ಕಡಿಮೆ ಪ್ರಮಾಣದ ನೀರು ಮಾನವರ ಬಳಕೆಗೆ ಲಭ್ಯವಾಗುವಂತೆ ಕಾಣುತ್ತದೆ. ಅದು ಕೆರೆ, ಬಾವಿ, ನದಿ, ಜಲಾಶಯ ಮತ್ತು ಸರೋವರಗಳಲ್ಲಿ ಸಂಗ್ರಹಿತವಾಗಿದೆ. ಆದರೆ, ಲಘು ಪ್ರಮಾಣದ ನೀರು ಮಾತ್ರ ಪ್ರಾಕೃತಿಕ ಜಲ ಚಕ್ರದ ಮೂಲಕ ನವೀಕರಣ ಹೊಂದುತ್ತದೆ.

ಭೂಮಿಯ ಮೇಲೆ ಜಲಸಂಪನ್ಮೂಲಗಳು ಏಕರೂಪವಾಗಿ ಹರಡಿಕೊಂಡಿರುವುದಿಲ್ಲ. ಭಾರತದ ಕೆಲವು ಭಾಗಗಳು ಅಸಮಾನ ಮಳೆ ಬೀಳುವಿಕೆಯ ದೆಸೆಯಿಂದ ಮಹಾಪೂರದ ಪ್ರಕೋಪಕ್ಕೆ ಬಲಿಯಾದರೆ ಇತರ ಕೆಲವು ಪ್ರದೇಶಗಳು ಬರಗಾಲದಿಂದ ಪೀಡಿತವಾಗುತ್ತವೆ. ಪೂರ್ವ ಮೇಘಾಲಯದ ಚಿರಾಪುಂಜಿಯಲ್ಲಿ ವಾರ್ಷಿಕ 11,000 ಮಿಲಿ ಮೀಟರ್ ಮಳೆಯಾದರೆ ರಾಜಸ್ಥಾನದ ಪಶ್ಚಿಮ ಜಿಲ್ಲೆಯಲ್ಲಿ, ಕೇವಲ 100 ಮಿಲಿ ಮೀಟರ್ ಮಳೆಬೀಳುತ್ತದೆ. ಸ್ಥಳ. ಸಮಯ ಹಾಗೂ ಪ್ರದೇಶದಿಂದ ಪ್ರದೇಶಕ್ಕೆ ಮಳೆಯ ಹಂಚಿಕೆಯಲ್ಲಿ ಸಾಕಷ್ಟು ವ್ಯತ್ಯಾಸವಿರುತ್ತದೆ. ನದಿಗಳಲ್ಲಿ ನೀರಿನ ಲಭ್ಯತೆಯು ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಬರುವ ಮಳೆಯನ್ನು ಅವಲಂಬಿಸಿರುತ್ತದೆ. ಮಳೆಯ ಮೂಲಕ ಮತ್ತು ಅಲ್ಪ ಪ್ರಮಾಣದಲ್ಲಿ ಮಂಜಿನ ಗಡ್ಡೆಗಳ ಕರುಗುವಿಕೆಯಿಂದ ಭಾರತದ ನದಿಗಳಲ್ಲಿ ನೀರು ಲಭ್ಯವಾಗುತ್ತದೆ. ಕೆಲವೊಂದು ಸಂದರ್ಭಗಳಲ್ಲಿ, ಅತಿ ಕಡಿಮೆ ಮಳೆ ಬೀಳುವಂತಹ ಪ್ರದೇಶಗಳಲ್ಲಿ (ಉದಾ : ಗುಜರಾತ್, ರಾಜಸ್ಥಾನ್, ಇತ್ಯಾದಿ) ಅಕಸ್ಮಾತ್ತಾಗಿ ಬಿರುಗಾಳಿಯೊಂದಿಗೆ ವಿಪರೀತ ಮಳೆ ಬೀಳುವ ಸಂಭವವಿದೆ. ಅತ್ಯಧಿಕ ಸರಾಸರಿ ಮಳೆ ಬೀಳುವಂತಹ ಚಿರಾಪುಂಜಿಯಲ್ಲಿ ವರ್ಷದ ಒಂದೇ ಋತುಮಾನದಲ್ಲಿ ಸಾಕಷ್ಟು ಮಳೆ ಬೀಳುತ್ತದೆ. ಈ ಪ್ರದೇಶದ ವಿಶಿಷ್ಟವಾದ ಭೂ–ಲಕ್ಷಣದ ದೆಸೆಯಿಂದ ಹೆಚ್ಚುವರಿ ನೀರಿನ ಹರಿವನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗಿಲ್ಲ. ಈ ಪ್ರದೇಶದಲ್ಲಿ 3–4 ತಿಂಗಳವರೆಗೆ ಪ್ರವಾಹದ ಭೀತಿ ಉಂಟಾಗುತ್ತದೆ ಹಾಗೂ ಇತರ ಅವಧಿಯಲ್ಲಿ, ನೀರಿನ ಕೊರತೆ ಎದುರಾಗುತ್ತದೆ.

ವರ್ಷಾ ಋತುವಿನಲ್ಲಿ ಧಾರಾಕಾರವಾಗಿ ಸುರಿಯುವ ಮಳೆ ನೀರನ್ನು ಸಂಗ್ರಹಿಸುವಂತಹ ವಿಧಾನಗಳನ್ನು ಅನುಸರಿಸಬೇಕು. ಮಳೆ ಕೊಯ್ಲು ಅಥವಾ ಮಳೆ ನೀರಿನ ಸಂಗ್ರಹಣೆಯು ವಿನೂತನವಾದ ತಂತ್ರವಾಗಿಲ್ಲ. ಇಂತಹ ವಿಧಾನವನ್ನು ಸಾವಿರಾರು ವರ್ಷಗಳ ಪೂರ್ವದಲ್ಲಿ ಬಳಕೆಮಾಡಿದಂತಹ ಉಲ್ಲೇಖವಿದೆ. ಕರ್ನಾಟಕ ರಾಜ್ಯದ ಕೆಲವು ಜಿಲ್ಲೆಗಳಲ್ಲಿ 'ಮಳೆ ಕೊಯ್ಲು' ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ 'ಇಡ್ಕಿದು' ಗ್ರಾಮದಲ್ಲಿ, ಮಳೆನೀರು ಸಂಗ್ರಹಣೆಯ ಬಗೆಗೆ ಗಮನ ಸೆಳೆಯಲಾಗಿದೆ. ತುಮಕೂರು ಜಿಲ್ಲೆಯಲ್ಲಿ, ಕೊಳವೆ ಬಾವಿಗಳ ರುಚಿರಹಿತ ನೀರಿನಿಂದ ಅತೃಪ್ತರಾದ ಜನರು ಮಳೆ ಕೊಯ್ಲಿನ ಕಾರ್ಯಕ್ರಮದಲ್ಲಿ ಆಸಕ್ತಿ ಹೊಂದಿದ್ದಾರೆ.

ಪ್ರತಿಯೊಂದು ಗ್ರಾಮದಲ್ಲಿ ಜಲದ ಸ್ವರೂಪ ವೈಶಿಷ್ಟ್ಯ ಮತ್ತು ಪ್ರಾಮುಖ್ಯತೆಯನ್ನು ಕುರಿತು ಜಲ-ಸಾಕ್ಷರತೆಯ ಆಂದೋಲನವು ಗತಿಶೀಲವಾಗಬೇಕು.

## ಜಲ ನಿರ್ಮಲ ಯೋಜನೆ

ಗ್ರಾಮೀಣ ಭಾರತದಲ್ಲಿ ಶುದ್ಧವಾದ ಕುಡಿಯುವ ನೀರು ಮತ್ತು ನೈರ್ಮಲ್ಯ ಸಂರಕ್ಷಣೆಯ ಸಮಸ್ಯೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಎಲ್ಲರಿಗೂ ಶುದ್ಧವಾದ ಕುಡಿಯುವ ನೀರು ಪೂರೈಕೆ ಮಾಡುವ ಉದ್ದೇಶದಿಂದ ಪ್ರೇರಿತವಾಗಿ ಕುಡಿಯುವ ನೀರಿನ ಯೋಜನೆಗಳನ್ನು ಸರ್ಕಾರವು ಅನುಷ್ಠಾನಗೊಳಿಸಿದೆ. ಇಂತಹ ಯೋಜನೆಗಳಲ್ಲಿ ಜಲನಿರ್ಮಲ ಯೋಜನೆಗೆ ಮಹತ್ವದ ಸ್ಥಾನವಿದೆ. ಅದು ಸಮುದಾಯ ಹಾಗೂ ಬೇಡಿಕೆ ಆಧಾರಿತವಾದ ಯೋಜನೆಯಾಗಿದೆ. ವಿಶ್ವಬ್ಯಾಂಕಿನ ಆರ್ಥಿಕ ನೆರವಿನಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮುಖಾಂತರ ಈ ಯೋಜನೆಯನ್ನು ಕಾರ್ಯಗತಗೊಳಿಸ ಲಾಗುತ್ತದೆ. ಇದರ ಪ್ರಧಾನ ಧ್ಯೇಯೋದ್ದೇಶಗಳು :

1. ಗ್ರಾಮೀಣ ಜನರಿಗೆ ಪರಿಶುದ್ಧ ಪಾನೀಯ ಜಲ ಮತ್ತು ನೈರ್ಮಲ್ಯ ಸೇವೆಗಳನ್ನು ಪೂರೈಸುವುದು.

2. ಆಡಳಿತ ವಿಕೇಂದ್ರೀಕರಣ ವ್ಯವಸ್ಥೆಯನ್ನು ಸುದೃಢಗೊಳಿಸಿ ಗ್ರಾಮಪಂಚಾಯತಿಗಳು ಮತ್ತು ಬಳಕೆದಾರರ ಗುಂಪುಗಳಿಗೆ ಶುದ್ಧ ಕುಡಿಯುವ ನೀರು ಹಾಗೂ ನೈರ್ಮಲ್ಯ ಸೇವೆಗಳ ಸರಬರಾಜು ಮಾಡುವುದು.

3. ಸರ್ವ ಜಲ-ಸಂಪನ್ಮೂಲಗಳ ನಿರ್ವಹಣಾ ಸುಧಾರಣೆಗೆ ಉತ್ತೇಜನ ನೀಡುವುದು.

4. ಈ ಯೋಜನೆಯಲ್ಲಿ ಸ್ಥಳೀಯರ ಸಹಭಾಗಿತ್ವದಿಂದ ಗ್ರಾಮೀಣ ಸಮುದಾಯದಲ್ಲಿ ಆತ್ಮವಿಶ್ವಾಸ ಮತ್ತು ಕ್ರಿಯಾಶೀಲತೆಯನ್ನು ಹೆಚ್ಚಿಸುವುದು.

5. ಗ್ರಾಮೀಣ ಪರಿಸರ ನೈರ್ಮಲ್ಯಕ್ಕೆ ಅಗತ್ಯವಾದ ಮೂಲ ಸೌಕರ್ಯಗಳ ನಿರ್ಮಾಣ ಮಾಡುವುದು.

6. ಗ್ರಾಮ ಪಂಚಾಯತಿಗಳು ಸಾಮಾಜಿಕ/ಆರ್ಥಿಕ ಹೊಣೆಗಾರಿಕೆ ಅಧಿಕ ಶಿಸ್ತು ಹಾಗೂ ದಕ್ಷತೆಗೆ ಬದ್ಧವಾಗುವುದು.

ಕರ್ನಾಟಕ ರಾಜ್ಯ ಸರ್ಕಾರವು ಜಲ ನಿರ್ಮಲ ಯೋಜನೆಯನ್ನು ಉತ್ತರ ಕರ್ನಾಟಕದ 11 ಜಿಲ್ಲೆಗಳಲ್ಲಿ (ಉತ್ತರ ಕನ್ನಡ, ಬೆಳಗಾವಿ, ಬೀದರ್, ಬಿಜಾಪುರ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ, ಗುಲ್ಬರ್ಗಾ, ರಾಯಚೂರು ಮತ್ತು ಕೊಪ್ಪಳ) ಅನುಷ್ಠಾನಗೊಳಿಸಿ ಡಿಸೆಂಬರ್ 2007ರ ವರೆಗೆ ಪೂರ್ಣಗೊಳಿಸಬೇಕಾಗಿತ್ತು. ಈ ಯೋಜನೆಯ ಒಟ್ಟು ಅಂದಾಜು ವೆಚ್ಚ 940 ಕೋಟಿ ರೂ.ಗಳೆಂದು ವಿವರಿಸಲಾಗಿತ್ತು. ಯೋಜನೆಯ ಅಂತಿಮ ವರ್ಷವನ್ನು ಸುಧಾರಣೆಯ ಕ್ರೋಢಿಕರಿಸುವ ಮಾರ್ಗ, ಅನುಷ್ಠಾನದ ನಂತರ ಸುಸ್ಥಿರತೆ ಮೇಲ್ವಿಚಾರಣಾ ಕ್ಷೇತ್ರದ ಕಾರ್ಯನಿರ್ವಹಣೆ ಇತ್ಯಾದಿಗೆ ಮೀಡಲಿಡಲಾಗಿದೆ ಎಂದು ಆಶ್ವಾಸನೆ ನೀಡಲಾಗಿತ್ತು. ಆದರೆ, ಭರವಸೆ ಹಾಗೂ ಕಾರ್ಯಾಚರಣೆಯ ನಡುವಿನ ವ್ಯತ್ಯಾಸವನ್ನು ಗುರುತಿಸಬೇಕು.

2001ರ ಜನಗಣತಿಯನ್ನು ಆಧರಿಸಿ ಜಲ-ನಿರ್ಮಲ ಯೋಜನೆಯ ಅಡಿಯಲ್ಲಿ ಪ್ರತಿಯೊಬ್ಬರಿಗೆ ಒಂದು ದಿನಕ್ಕೆ 55 ಲೀಟರ್ ಶುದ್ಧ ನೀರು ಪೂರೈಸಬೇಕಾಗಿತ್ತು. 2010ರಲ್ಲಿ ಭಾರತದ ಜನಸಂಖ್ಯೆ 110 ಕೋಟಿಗೆ ತಲುಪಿರುವುದರಿಂದಲೆ ಕುಡಿಯುವ ನೀರಿನ ಜೊತೆಗೆ ವಿವಿಧ ಪ್ರಕಾರದ ಬಳಕೆಗೆ ಅಗತ್ಯವಿರುವಂತಹ ನೀರಿನ ಬೇಡಿಕೆಯು ಹೆಚ್ಚಿದೆ. 2003ರ ಮಾರ್ಚ್ ಮೂರನೆಯ ವಾರದಲ್ಲಿ ಜರುಗಿದ 3ನೇ ವಿಶ್ವಜಲ ವೇದಿಕೆಯಲ್ಲಿ ಮಂಡಿಸಲಾದ ವರದಿಯಲ್ಲಿ ಕೆಲವು ಮಹತ್ವದ ಅಂಶಗಳನ್ನು ಉಲ್ಲೇಖಿಸಲಾಗಿದೆ. ಅದರಲ್ಲಿ ಸೂಚಿಸಲಾದ ಒಂದು ಪ್ರಧಾನ ಅಂಶವೆಂದರೆ :

2015 ರೊಳಗೆ 1.2 ದಶಲಕ್ಷ ಜನರಿಗೆ ನೀರು ಮತ್ತು 2.4 ದಶಲಕ್ಷ ಜನರಿಗೆ ಶೌಚ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂಬ ಸಂಯುಕ್ತ ರಾಷ್ಟ್ರ ಸಂಘದ ಗುರಿ ಸಾಧನೆಗಾಗಿ ಜಲ ಕ್ಷೇತ್ರಕ್ಕೆ ದುಪ್ಪಟ್ಟು ಹಣ ಪೂರೈಕೆ ಮಾಡಬೇಕು.

ನಿಗದಿತ ಧ್ಯೇಯ ಸಾಧನೆಗಾಗಿ, ಹಣಕಾಸಿನ ಸದ್ಬಳಕೆ ಆಗಬೇಕು.

## ಸರಬರಾಜು ವ್ಯವಸ್ಥೆಯ ಸುಧಾರಣೆ

1. ಭಾರತದ ರಾಷ್ಟ್ರಗೀತೆಯು 'ಜಲ ಸಾಕ್ಷರತೆ'ಯ ಮಹತ್ವವನ್ನು ಪ್ರತಿಬಿಂಬಿಸುತ್ತದೆ. ರಾಷ್ಟ್ರಗೀತೆಯಲ್ಲಿ ಉಲ್ಲೇಖಿತವಾದ 'ಸುಜಲಾಂ ಸುಫಲಾಂ ಮತ್ತು ಮಲಯಜಶೀತಲಾಂ / ಸಸ್ಯ ಶಾಮಲಾಂ' ಎಂಬ ಶಬ್ದಗಳು ಭೂಮಿ ಹಾಗೂ ನೀರಿನ ಪ್ರಾಮುಖ್ಯತೆಯನ್ನು ಪ್ರಸ್ತಾಪಿಸುತ್ತದೆ. ಮಾನವನ ಅಸ್ತಿತ್ವ ಮತ್ತು ಅಭಿವೃದ್ಧಿಯಲ್ಲಿ ನೀರಿನ ಪಾತ್ರ ಪ್ರಧಾನವಾಗಿದೆ.
2. ಜಲ-ಸಾಕ್ಷರತೆಯು ಭಾರತದ ಮಹಾನಗರಗಳಲ್ಲಿ ಮಾತ್ರ ಸೀಮಿತವಾಗಬಾರದು. ಶುದ್ಧ ಕುಡಿಯುವ ನೀರಿನ ಬಗೆಗೆ ನಗರ ಮತ್ತು ಗ್ರಾಮದ ನಡುವಿನ ಪಕ್ಷಪಾತ ಧೋರಣೆಯನ್ನು ತ್ಯಜಿಸಬೇಕು. ಪ್ರತಿಯೊಂದು ಗ್ರಾಮದಲ್ಲಿ ಜಲ-ಜಾಗೃತಿಯ ಆಂದೋಲನವು ಕ್ರಿಯಾಶೀಲವಾಗಬೇಕು.

3. 2007ರ ಜನವರಿ 12ರಂದು, ಭಾರತದ ಪ್ರಧಾನ ಮಂತ್ರಿ 'ಇಂಡಿಯಾ ವಾಟರ್ ಪೋರ್ಟಲ್'ಗೆ (ಭಾರತದ ಜಲ–ಮಾಹಿತಿ ಮಹಾದ್ವಾರ) ಅಧಿಕೃತವಾಗಿ ಚಾಲನೆ ನೀಡಿದ್ದಾರೆ. ಸರ್ಕಾರಿ ಸಂಸ್ಥೆಗಳು ಉಪಯುಕ್ತ ಮಾಹಿತಿಯನ್ನು ಸಾರ್ವಜನಿಕ ಕ್ಷೇತ್ರದಲ್ಲಿ ವಿತರಣೆ ಮಾಡಿ ಪಾರದರ್ಶಕತೆಯ ಮಾರ್ಗದಲ್ಲಿ ನಡೆಯಲು ಸಾಧ್ಯವೆಂದು ನಿರೀಕ್ಷಿಸಲಾಗಿದೆ. ನಾಗರಿಕರ ವೈಯಕ್ತಿಕ ಜೀವನ ಮತ್ತು ಸಾಮುದಾಯಿಕ ಜೀವನ ಸುಧಾರಣೆ ಯೋಗ್ಯವಾದ ಅವಕಾಶ ದೊರೆಯಲು ಸಾಧ್ಯವಿದೆ. ನೀರಿನ ಮೇಲಿನ ಮಾನವ ಹಕ್ಕಿನ ಅಂತರ–ರಾಷ್ಟ್ರೀಯ ದಾಖಲೆಯನ್ನು [C.E.S.C.R. 2002 ಸಾಮಾನ್ಯ ಟಿಪ್ಪಣಿ ಸಂಖ್ಯೆ : 15] ಗೌರವಿಸುವ ಹಾಗೂ ಕಾರ್ಯಾಚರಣೆಗೊಳಿಸುವಂತಹ ಹೊಣೆಗಾರಿಕೆಯನ್ನು ಸರ್ಕಾರ ಹೊಂದಿರುತ್ತದೆ. [ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಸಮಿತಿ].

4. ಹಲವಾರು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕೈಕೊಂಡಿರುವ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಗಳ ವಿಕೇಂದ್ರೀಕರಣದ ಯಶಸ್ಸು, ಅಪಯಶಸ್ಸಿನಿಂದ ಕೆಲವು ಉಪಯುಕ್ತ ಪಾಠಗಳು ದೊರೆತಿವೆ. ಭಾರತದಲ್ಲಿ ವಿಕೇಂದ್ರೀಕರಣದ ಚಿಂತನೆಯು ಸಾಕಷ್ಟು ಪರಿಣಾಮ ಬೀರಿದ್ದರೂ ಸಹ ಅದರಲ್ಲಿ ಹಲವಾರು ನ್ಯೂನತೆಗಳಿವೆ. ಸ್ಥಳೀಯ ಉತ್ತರದಾಯಿತ್ವ, ಸಹಭಾಗಿತ್ವ, ಪಾರದರ್ಶಕತೆ ಮತ್ತು ಜನಾಭಿಪ್ರಾಯದ ಆದ್ಯತೆಯನ್ನು ಕುರಿತು, ಜಾಗೃತಿ ಮೂಡಿಸಬೇಕು.

5. ಜಲ–ಸಂಪನ್ಮೂಲಗಳನ್ನು ಗುರುತಿಸುವಂತಹ ವೈಜ್ಞಾನಿಕ ಪ್ರಾವೀಣ್ಯತೆಯ ಜೊತೆಗೆ ನೀರು ಮರುಪೂರಣದ ಪರಿಣಾಮಕಾರಿ ಸಂಚಲನವನ್ನು ಸುನಿಶ್ಚಿತಗೊಳಿಸಲು, ಸಮರ್ಥವಾದ ಸಾಂಸ್ಥಿಕ ವ್ಯವಸ್ಥೆಯ ಅವಶ್ಯಕತೆ ಇದೆ. ರಾಜ್ಯಮಟ್ಟದ ಸಾಂಸ್ಥಿಕ ವ್ಯವಸ್ಥೆ 'ಮೂಲ ಶೋಧ ಸಮಿತಿಗಳು' ಬಹುತೇಕವಾಗಿ ನಿಷ್ಕ್ರಿಯವಾಗಿವೆ. ಅವುಗಳ ಪುನಶ್ಚೇತನಕ್ಕಾಗಿ ರಾಷ್ಟ್ರದಲ್ಲಿ ಲಭ್ಯವಿರುವ ಆಧುನಿಕ ವೈಜ್ಞಾನಿಕ ಸೌಲಭ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕು.

6. ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಯ ಸಮರ್ಪಕ ಅನುಷ್ಠಾನ, ನಿರ್ವಹಣೆ ಹಾಗೂ ಸುಸ್ಥಿರ ಅಭಿವೃದ್ಧಿಯ ಸಾಂಸ್ಥಿಕ, ತಾಂತ್ರಿಕ ಮತ್ತು ಸಾಮಾಜಿಕ ಸುಸ್ಥಿರತೆ ಹಾಗೂ ಸಾಮಾಜಿಕ ಸಾಮರ್ಥ್ಯ ವರ್ಧನೆಯಂತಹ ಕೆಲವು ಮುಖ್ಯಾಂಶಗಳನ್ನು ಅವಲಂಬಿಸಿದೆ. ಇಂತಹ ಯೋಜನೆಯ ಸ್ವರೂಪ ಅಂದಾಜು ವೆಚ್ಚ ಮತ್ತು ಸಾಮುದಾಯಿಕ ಜವಾಬ್ದಾರಿಯು ಎಲ್ಲರಿಗೂ ಅರ್ಥವಾಗಬೇಕು.

7. ನೀರು ಪೂರೈಕೆ ಮಾಡಲು ಸಾರ್ವಜನಿಕ ವ್ಯವಸ್ಥೆಯು ವಿಫಲವಾದ ಸಂದರ್ಭದಲ್ಲಿ ನಾಗರಿಕರು ನೀರು ಪೂರೈಕೆಯ ನೂತನ ತಂತ್ರಗಳ ಅನ್ವೇಷಣೆ ಮಾಡಿದ್ದಾರೆ. ಉದಾಹರಣೆಗಾಗಿ ಕೇರಳ ರಾಜ್ಯದ 'ಒಳವನ್ನಾ' ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಗೃಹ ಬಳಕೆಯ ನೀರು ಪೂರೈಕೆಯ ವ್ಯವಸ್ಥೆಯನ್ನು ಸಮುದಾಯದ ಜನರು ನಿರ್ವಹಿಸುತ್ತಾರೆ. ದಕ್ಷಿಣ ದೆಹಲಿಯ 'ಸಂಗಮ್ ವಿಹಾರ' ಪ್ರದೇಶದ ನಿವಾಸಿಗಳು ಕೊಳವೆ ಬಾವಿಗಳನ್ನು ನಿರ್ಮಿಸಿ ಪೈಪುಗಳ ಮೂಲಕ ಲಕ್ಷಾಂತರ ಬಡಾವಣೆಯ ನಿವಾಸಿಗಳಿಗೆ ನೀರು ಸರಬರಾಜು ಮಾಡುತ್ತಾರೆ. ಇಂತಹ ನಿದರ್ಶನಗಳಿಂದ ಕೆಲವು ಮಹತ್ವದ ಸಂಗತಿಗಳು ಬೆಳಕಿಗೆ ಬಂದಿವೆ. ನೀರು ಪೂರೈಕೆಗಾಗಿ ಒಂದು ಬೃಹದ್ ವ್ಯವಸ್ಥೆಗಿಂತ, ಲಘು ವ್ಯವಸ್ಥೆಗಳ ಅಗತ್ಯವಿದೆ. ನೀರು ಸರಬರಾಜು ವ್ಯವಸ್ಥೆಯ ರಚನೆ, ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ, ಸಮುದಾಯದ ಸಕ್ರಿಯ ಪಾತ್ರ ಅಗತ್ಯವಾಗಿದೆ.

8. ಮಳೆ ನೀರಿನ ಶೇಖರಣೆಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು. ನೀರಿನ ಪ್ರತಿಯೊಂದು ಹನಿಯನ್ನು ಬಳಸಿಕೊಂಡು ಭೂ/ಜಲದ ಫಲವತ್ತತೆಯನ್ನು ಹೆಚ್ಚಿಸಬೇಕು. ಬಾವಿ, ಜಲಾಶಯ ಮತ್ತು ಭೂಮಿಗೆ ಮಳೆನೀರು ಹರಿದು ಹೋಗುವಂತೆ ಮಾಡುವ ಮೂಲಕ ನೀರಿನ ಸದ್ಬಳಕೆಗೆ ಪ್ರೇರಣೆ ನೀಡಬೇಕು.

9. ಗ್ರಾಮೀಣ ಜಲ ವಿತರಣೆ ಮತ್ತು ನೈರ್ಮಲ್ಯ ಯೋಜನೆಗಳ ಅನುಷ್ಠಾನದ ಸರ್ವ ಹಂತಗಳಲ್ಲಿ ಮಹಿಳೆಯರ ಸಹಭಾಗಿತ್ವಕ್ಕೆ ಆದ್ಯತೆ ನೀಡಬೇಕು. ಇಂತಹ ಆದ್ಯತೆಯು ಕೇವಲ ಔಪಚಾರಿಕವಾಗಿರದೆ, ಅರ್ಥಪೂರ್ಣವಾಗಬೇಕು.

10. ರಾಷ್ಟ್ರೀಯ ಸಂಕಲ್ಪ ಆರಂಭಿಸಿದ ಕಾಲದಿಂದ ಇಂದಿನವರೆಗೆ ಶೇಕಡಾ 99.6 ರಷ್ಟು ಗ್ರಾಮೀಣ ಜನತೆಗೆ ಶುದ್ಧ ಕುಡಿಯುವ ನೀರು ಮತ್ತು ನೈರ್ಮಲ್ಯದ ವ್ಯವಸ್ಥೆಯನ್ನು ಪೂರೈಸಲಾಗಿದೆ ಎಂದು ತಿಳಿಸಲಾಗಿದೆ. ಆದರೆ, ರಾಷ್ಟ್ರೀಯ ಸಂಕಲ್ಪಕ್ಕೆ ಶೀರ್ಷಿಕೆಯ ಬದಲಾವಣೆ ಮಾಡಿದ್ದರಿಂದ ಹೆಚ್ಚಿನ ಪ್ರಯೋಜನಗಳಾಗಿರುವಂತೆ ಕಾಣುವುದಿಲ್ಲ. ಜಾರಿಯಲ್ಲಿರುವ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ವೆಚ್ಚದ ಬಳಕೆಯನ್ನು ಸುಧಾರಿಸಿ ಕುಡಿಯುವ ನೀರು ಮತ್ತು ಮೂಲ ನೈರ್ಮಲ್ಯ ವ್ಯವಸ್ಥೆ ಸುದೀರ್ಘ ಲಭ್ಯತೆಯನ್ನು ಖಚಿತಪಡಿಸಬೇಕು.

11. ನೀರು ಸಂಬಂಧಿತ ಒಡೆತನ ರಾಜ್ಯ ಸರ್ಕಾರಕ್ಕೆ ಸೇರಿದೆ. ನೀರಿನ ದರ ನಿಗದಿ, ಅದರ ಸದ್ಬಳಕೆಗೆ ಪ್ರೋತ್ಸಾಹ ಹಾಗೂ ಬಡವರಿಗೆ ಸೂಕ್ತವಾದ ಸಹಾಯಧನ ನೀಡುವ ಕಾರ್ಯದಲ್ಲಿ ಸರ್ಕಾರದ ಪಾತ್ರವು ಪರಿಣಾಮಕಾರಿಯಾಗಬೇಕು.

12. ಸುಜಲ–ಜಲಾನಯನ ಯೋಜನೆಯ ಅರ್ಥ, ಧ್ಯೇಯೋದ್ದೇಶ, ವೈಶಿಷ್ಟ್ಯ, ಯೋಜನೆಯ ವೆಚ್ಚ ಮತ್ತು ಸಾರ್ವಜನಿಕ ಪ್ರಯೋಜನಗಳನ್ನು ಕುರಿತು 2001ರಿಂದ 2007ರ ಅವಧಿಯಲ್ಲಿ ಸಾಕಷ್ಟು ಜನ ಜಾಗೃತಿಯನ್ನು ಮೂಡಿಸಬೇಕಾಗಿತ್ತು. ಇಂತಹ ಯೋಜನೆಯ ಸೌಲಭ್ಯಗಳು ಸಾರ್ವಜನಿಕರಿಗೆ ದೊರೆತಾಗ ಸರ್ವರೂ ಆಡಳಿತಾತ್ಮಕವಾಗಿ ಭಾಗವಹಿಸಲು ಸಾಧ್ಯವಾಗುವುದು. ಹಿಂದುಳಿದ ಗ್ರಾಮೀಣ ಪ್ರದೇಶಗಳ ನೆಲ, ಜಲ ಸಂರಕ್ಷಣೆ ಹಾಗೂ ಅಭಿವೃದ್ಧಿ ಯೊಂದಿಗೆ ಆಡಳಿತಾತ್ಮಕ/ಆರ್ಥಿಕ ವಿಕೇಂದ್ರೀಕರಣದ ಮಾರ್ಗದಲ್ಲಿ ಮುನ್ನಡೆಯಬೇಕು.

13. ರಾಷ್ಟ್ರದ ಜನಸಂಖ್ಯೆಯ ಏರಿಕೆಗೆ ಅನುಸಾರವಾಗಿ ಪ್ರಾಥಮಿಕ ಸೌಕರ್ಯ/ಸೇವೆಗಳಿಗಾಗಿ ಬೇಡಿಕೆಯು ನಿರಂತರವಾಗಿ ಹೆಚ್ಚುತ್ತದೆ. ಇಂತಹ ಸಮಸ್ಯೆಗೆ ಯೋಗ್ಯವಾದ ಪರಿಹಾರ ನೀಡಲು ಖಾಸಗಿ ವಲಯದ ಪಾಲುಗಾರಿಕೆಯನ್ನು ಸರ್ಕಾರ ಅಪೇಕ್ಷಿಸುತ್ತದೆ. ಸಾರ್ವಜನಿಕ ಮತ್ತು ಖಾಸಗಿ ಪಾಲುಗಾರಿಕೆಯನ್ನು ಯೋಜನೆಯ ಪ್ರಧಾನ ಧ್ಯೇಯೋದ್ದೇಶಗಳಿಗೆ ಸಹಾಯಕವಾಗುವಂತೆ ಕೈಕೊಳ್ಳಬೇಕು.

14. ಸುರಕ್ಷಿತ ಕುಡಿಯುವ ನೀರು ಪೂರೈಕೆ, ಆರೋಗ್ಯ ಸಂರಕ್ಷಕ ಸೇವೆಗಳ ವಿಸ್ತರಣೆ ಹಾಗೂ ರಾಷ್ಟ್ರದ ಆರ್ಥಿಕಾಭಿವೃದ್ಧಿಯ ವೇಗದ ಹೆಚ್ಚಳಕ್ಕಾಗಿ ರಾಜ್ಯ ಸರ್ಕಾರವು ಹಲವಾರು ಹಂತಗಳಲ್ಲಿ, ನಿರ್ವಹಣಾ ಕೌಶಲ್ಯ ಮತ್ತು ತಾಂತ್ರಿಕ ಸಾಮರ್ಥ್ಯದ ಬೆಳವಣಿಗೆಯಿಂದ ಸೇವಾ ಸೌಲಭ್ಯಗಳ ಪ್ರಯೋಜನಗಳನ್ನು ದೃಢಪಡಿಸಬೇಕು.

15. ಗ್ರಾಮೀಣ ಕುಡಿಯುವ ನೀರು ಸರಬರಾಜು ಕಾರ್ಯಕ್ರಮಕ್ಕಾಗಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸುಮಾರು 450 ಶತಕೋಟಿ ರೂ.ಗಳನ್ನು ವೆಚ್ಚಮಾಡಿವೆ. 2004–05ರಲ್ಲಿ ನೈರ್ಮಲ್ಯಕ್ಕಾಗಿ 400 ಕೋಟಿ ರೂ.ಗಳನ್ನು ವಿನಿಯೋಗಿಸಲಾಗಿದೆ. ಶುದ್ಧ ಕುಡಿಯುವ ನೀರು ಪೂರೈಕೆ ಹಾಗೂ ನೈರ್ಮಲ್ಯ ಸಂರಕ್ಷಣೆಯ ಯೋಜನೆಗಳಿಗಾಗಿ, ಹೆಚ್ಚು ಬಂಡವಾಳ ಹೂಡಿಕೆಯ ಅಗತ್ಯವಿದೆ.

16. ಎಲ್ಲ ಗ್ರಾಮೀಣ ಶಾಲೆ/ಅಂಗನವಾಡಿ ಕೇಂದ್ರಗಳಲ್ಲಿ ಶುದ್ಧವಾದ ಕುಡಿಯುವ ನೀರು ಮತ್ತು ನೈರ್ಮಲ್ಯ ಸೌಲಭ್ಯಗಳನ್ನು ಪೂರೈಸಬೇಕು, ಭಾರತ ಸರ್ಕಾರವು ನೈರ್ಮಲ್ಯ ಕಾರ್ಯಕ್ರಮ ಗಳಿಗೆ ನೀಡುವಂತಹ ಆರ್ಥಿಕ ಉತ್ತೇಜನದ ಯೋಗ್ಯವಾದ ಬಳಕೆಯಾಗಬೇಕು.

17. ರಾಷ್ಟ್ರದ ಎಲ್ಲ ಜಿಲ್ಲೆಗಳಲ್ಲಿ, 2005 ರಿಂದ 2010ರ ವರೆಗೆ, ಅನುಷ್ಠಾನಗೊಳಿಸಲು ನಿರ್ಧರಿಸಲಾದ ಸಂಪೂರ್ಣ ನೈರ್ಮಲ್ಯ ಕಾರ್ಯಕ್ರಮಗಳನ್ನು ನಿಷ್ಪಕ್ಷಪಾತವಾದ ವಿಚಾರಣೆಗೆ ಗುರಿಪಡಿಸಬೇಕು.

18. ಕುಡಿಯುವ ನೀರಿನ ಸಮಸ್ಯೆಗೆ ದೀರ್ಘಕಾಲಿಕ ಮತ್ತು ಪರಿಣಾಮಕಾರಿ ಪರಿಹಾರ ಶೋಧಿಸಲು ಖಚಿತವಾದ ನೀರಿನ ಬಳಕೆದಾರರ ಹಕ್ಕುಗಳು, ನೀರು ವಿತರಣೆಯ ವಿಕೇಂದ್ರೀಕರಣ, ಸರಳೀಕರಣ ಹಾಗೂ ನೀರಿನ ಧನ ಸಹಾಯದ ಅಗತ್ಯವಿದೆ.

19. ನೀರು ಮತ್ತು ನೈರ್ಮಲ್ಯ ಕ್ಷೇತ್ರದಲ್ಲಿ, ಅಗ್ಗದ ಮತ್ತು ಸರಳ ತಂತ್ರಗಾರಿಕೆಯನ್ನು ಪರಿಚಯಿಸಲು ಸಂಶೋಧನ ಹಾಗೂ ಅಭಿವೃದ್ಧಿ ಕ್ಷೇತ್ರಗಳಿಗೆ ಅಧಿಕ ಪ್ರಮಾಣದ ಹಣಕಾಸಿನ ನೆರವು ನೀಡಬೇಕು.

20. ಸಹಸ್ರಮಾನದ ಅಭಿವೃದ್ಧಿ ಗುರಿಗಳ ಬೆಳಕಿನಲ್ಲಿ, ನೀರು ಸರಬರಾಜು ಮತ್ತು ನೈರ್ಮಲ್ಯ ಸೌಕರ್ಯಗಳ ನೀಡಿಕೆಗಾಗಿ ಯೋಜನೆಗಳನ್ನು ರೂಪಿಸಲಾಗಿದೆ. ಆದರೆ ಗುರಿ ಸಾಧನೆಗಾಗಿ ಸಮರ್ಥವಾದ ತಂತ್ರಗಾರಿಕೆ ಹಾಗೂ ವಾಸ್ತವಿಕ ದೃಷ್ಟಿಕೋನದ ಅಗತ್ಯವಿದೆ. ನೀರಿನ ಅಭಾವದಿಂದ ಪೀಡಿತವಾದ ಸರ್ವ ವಾಸಸ್ಥಳಗಳು ಮತ್ತು ನೀರಿನ ಲಭ್ಯತೆಯಿಂದ ಅಲಭ್ಯತೆಗೆ ಜಾರಿದ ವಾಸಸ್ಥಳಗಳಿಗೆ ನೀರು ಸರಬರಾಜು ಮಾಡುವಂತಹ ಧ್ಯೇಯದೆಡೆಗೆ, ಲಕ್ಷ್ಯವನ್ನು ಕೇಂದ್ರೀಕರಿಸಬೇಕು.

ಭಾರತೀಯ ಸಂವಿಧಾನದ 73ನೇ ತಿದ್ದುಪಡಿಯ ನಂತರ ಗ್ರಾಮೀಣ ನೀರು ಪೂರೈಕೆಯ ವಿಷಯವು, ಪಂಚಾಯತ್ ರಾಜ್ ಸಂಸ್ಥೆಗಳ ವ್ಯಾಪ್ತಿಗೆ ಒಳಪಟ್ಟಿದೆ. ಪಂಚಾಯತ್ ರಾಜ್ ಸಂಸ್ಥೆಗಳು ಆಯಾ ಪ್ರದೇಶಗಳಲ್ಲಿ, ನೀರು ಪೂರೈಕೆಯ ಹೊಣೆಗಾರಿಕೆಯನ್ನು ಹೊಂದಿವೆ. ಕೇಂದ್ರ ಸರ್ಕಾರವು ಅವುಗಳ ಕರ್ತವ್ಯ ನಿರ್ವಹಣೆ ಮತ್ತು ಸಬಲೀಕರಣಕ್ಕಾಗಿ ಸಹಾಯ ಮಾಡುತ್ತದೆ. ಕುಡಿಯುವ ನೀರು ಪೂರೈಕೆ ಹಾಗೂ ಜಲಮೂಲ ಸಂಬಂಧಿತ ಯೋಜನೆಗಳ ಪರಾಮರ್ಶೆ ಮಾಡುವಾಗ ಗ್ರಾಮಸಭೆಯು ಸಂಪೂರ್ಣವಾದ ಸಹಭಾಗಿತ್ವ ಹೊಂದಬೇಕು.

❑

ಆರೋಗ್ಯ

# ಹೆಪಟೈಟಿಸ್–ಬಿ



ಡಾ. ಬಿ. ರಮಣರಾವ್ *

ಬಹಳ ಸಾಮಾನ್ಯವಾಗಿ ಕಾಡುವ, ವೈರಸ್ ಸೋಂಕಿನಿಂದ ಬರುವ ಕಾಯಿಲೆ ಇದು. ನಮ್ಮ ದೇಶದಲ್ಲಿ ಪ್ರತಿಶತ 3.5 ರಿಂದ 4.5 ರಷ್ಟು ಜನ ಇದರಿಂದ ನರಳುತ್ತಾರೆ. ಬರೀ ಮನುಷ್ಯರಲ್ಲಿ ಮಾತ್ರ ಈ ಕಾಯಿಲೆ ಕಾಣಿಸಿಕೊಳ್ಳುತ್ತದೆ. ಅಲ್ಲದೇ ಇನ್ನೊಬ್ಬ ವ್ಯಕ್ತಿಗೆ ಹರಡಲು ಸೋಂಕು ತಾಕಿದ ವ್ಯಕ್ತಿಯ ಜೊತೆಗಿನ ಸಂಪರ್ಕವೇ ಕಾರಣ.

ಹೊಸಬರಿಗೆ ಈ ಸೋಂಕು ಉಂಟಾಗುವುದು ರಕ್ತ ಮತ್ತು ರಕ್ತದ ಉತ್ಪನ್ನಗಳಿಂದ ಮಾತ್ರ. ಸೋಂಕಿತ ವ್ಯಕ್ತಿಗೆ ಬಳಸಿದ ಸೂಜಿಯಿಂದ ಹಚ್ಚೆ ಮಾಡಿಸಿಕೊಳ್ಳುವುದು, ಕಿವಿ ಚುಚ್ಚಿಸಿಕೊಳ್ಳುವುದು, ಆಕ್ಯುಪಂಕ್ಚರ್‌ಗೆ ಬಳಸುವುದು ಮುಂತಾದವುಗಳಿಂದ ಇದು ಹರಡುತ್ತದೆ. ಸೋಂಕಿತರೊಂದಿಗೆ ಲೈಂಗಿಕ ಕ್ರಿಯೆ ಇದರ ಹರಡುವಿಕೆಗೆ ಅತಿ ದೊಡ್ಡ ಕಾರಣ.

ಈ ಮುಂದೆ ಸೂಚಿಸಲಾಗಿರುವ ವ್ಯಕ್ತಿಗಳಿಗೆ ಹೆಪಟೈಟಿಸ್ ಬಿ ಸೋಂಕು ತಗಲುವ ಸಾಧ್ಯತೆ ಅತಿ ಹೆಚ್ಚು. ಸೋಂಕು ತಾಗಿದ ಮಹಿಳೆಯರಿಗೆ ಹುಟ್ಟುವ ಮಕ್ಕಳು, ಸಲಿಂಗರತಿಯಲ್ಲಿ ತೊಡಗುವ ಪುರುಷರು, ಅನೇಕ ವ್ಯಕ್ತಿಗಳೊಂದಿಗೆ ಲೈಂಗಿಕ ಸಂಪರ್ಕವಿಟ್ಟುಕೊಂಡಿರುವವರು, ಮಾದಕ ವಸ್ತುಗಳ ಸೇವನೆಗೆ ಸೂಜಿಗಳನ್ನು ಬಳಸುವ ಹಾಗೂ ಹಂಚಿಕೊಳ್ಳುವವರು, ಡಯಾಲಿಸಿಸ್ ಮಾಡಿಸಿಕೊಳುತ್ತಿರುವವರು, ಆರೋಗ್ಯಸೇವಾ ಕ್ಷೇತ್ರದಲ್ಲಿ ದುಡಿಯುವವರು, ರಕ್ತ ಅಥವಾ ರಕ್ತದ ಉತ್ಪನ್ನಗಳನ್ನು ಸ್ವೀಕರಿಸುವವರು. ರೋಗಿಗೆ ಬಳಸಿದ ಸೂಚಿ ಅಕಸ್ಮಾತ್ತಾಗಿ ತಾಗುವುದರಿಂದಲೂ ಇದು ಹರಡಬಹುದು. ಬರೀ 0.00001 ಮಿ.ಲಿ. ರಕ್ತ ಸಾಕು ಈ ರೋಗ ಹರಡಲಿಕ್ಕೆ.

ಬರೀ 0.00001 ಮಿ.ಲಿ. ರಕ್ತ ಸಾಕು 'ಹೆಪಟೈಟಿಸ್ ಬಿ' ರೋಗ ಹರಡಲಿಕ್ಕೆ.

ಇದು ಸೊಳ್ಳೆಗಳ ಕಡಿತದಿಂದ ಹರಡುವುದಿಲ್ಲ. ಸೊಳ್ಳೆಗಳ ಶರೀರದಲ್ಲಿ ಇದು ಬದುಕುಳಿಯುವುದಿಲ್ಲ.

ದಂತ ಚಿಕಿತ್ಸೆ, ಹಸಿ ಗಾಯಗಳ ಚಿಕಿತ್ಸೆ ಮತ್ತು ಕೈ ಶಸ್ತ್ರ ಚಿಕಿತ್ಸೆಗಳನ್ನು ಮಾಡಿಸಿಕೊಂಡಾಗ ಸೋಂಕು ತಗಲುವ ಸಾಧ್ಯತೆಗಳು ಹೆಚ್ಚು. ಹೆಚ್.ಐ.ವಿ. ಸೋಂಕಿಗಿಂತ ಹೆಪಟೈಟಿಸ್ ಬಿ ವೈರಾಣು ಸಾವಿರಪಟ್ಟು ಹೆಚ್ಚು ತೀಕ್ಷ್ಣವಾಗಿ ಹರಡುತ್ತದೆ.

ಸೋಂಕಿಗೆ ಒಳಗಾದ ವಯಸ್ಕರು ಕಾಮಾಲೆಯಿಂದ ನರಳುತ್ತಾರೆ. ಇವರಲ್ಲಿ 10% ಜನ ಈ ರೋಗದ ವಾಹಕರಾಗುತ್ತಾರೆ. ಕ್ರಮೇಣ ಇದರಿಂದ ಯಕೃತ್ತಿನ (ಲಿವರ್) ಕ್ಯಾನ್ಸರ್ ಆಗಬಹುದು. ಸೋಂಕು ತಗುಲಿದ ಮಕ್ಕಳಿಗೆ ಹೆಪಟೈಟಿಸ್ ಆಗುವ ಪ್ರಮಾಣ ಕಡಿಮೆಯಾದರೂ ಅವರು ವಾಹಕರಾಗುತ್ತಾರೆ. ಸೋಂಕಿಗೆ ಗುರಿಯಾದ ಕೆಲ ವಾರ ಅಥವಾ ಕೆಲವೇ ತಿಂಗಳುಗಳಲ್ಲಿ ವ್ಯಕ್ತಿಗೆ ರೋಗ ತಗುಲಿದೆಯೇ ಎಂಬುದನ್ನು ದೃಢಪಡಿಸಿಕೊಳ್ಳಬಹುದು.

ಹೆಪಟೈಟಿಸ್ ಬಿ ಲಸಿಕೆ ಲಭ್ಯವಿದೆ. ಪ್ರತಿಯೊಬ್ಬರೂ ತೆಗೆದುಕೊಳ್ಳಬಹುದು. ಜೀವನಪೂರ್ತಿ ಇದರಿಂದ ದೂರವಿರಲು ಹುಟ್ಟಿದ ತಕ್ಷಣ, ನಂತರ ಒಂದು ತಿಂಗಳಿಗೆ ಹಾಗೂ 6 ತಿಂಗಳ ನಂತರ ಮಕ್ಕಳಿಗೆ ಇದನ್ನು ಕೊಡಬೇಕು. ಈ ಲಸಿಕೆ ನಿರಪಾಯಕರ. ಇದರಿಂದ ಯಾವುದೇ ಗಂಭೀರ ರೂಪದ ಸೈಡ್ ಇಫೆಕ್ಟ್ ಇರುವುದು ಕಂಡುಬಂದಿಲ್ಲ.

* ಕನ್ಸಲ್ಟಿಂಗ್ ಫಿಸಿಷಿಯನ್ ಅಂಡ್ ಕಾರ್ಡಿಯಾಲಾಜಿಸ್ಟ್, ನಂ. 94 /ಹೆಚ್. 9ನೇ ಕ್ರಾಸ್, ರಾಜಮಹಲ್ ವಿಲಾಸ್ ಬಡಾವಣೆ, ಬೆಂಗಳೂರು – 80.

# ಉನ್ನತಿಯೇ ಅಹಂಕಾರವಾಗಬಾರದಲ್ಲವೇ?

ಪ್ರತಿಯೊಬ್ಬ ವ್ಯಕ್ತಿಗೂ ತನ್ನ ವೃತ್ತಿ ಜೀವನದಲ್ಲಿ ಅಥವಾ ಸಾಮಾಜಿಕ ಸ್ಥಾನಮಾನದಲ್ಲಿ ಉನ್ನತ ಸ್ಥಾನವನ್ನೇರುವ ಬಯಕೆ ಸಹಜವಾಗಿಯೇ ಇದ್ದೇ ಇರುತ್ತದೆ. ಸಮೂಹದಲ್ಲಿ ತಾನು ಎದ್ದು ತೋರುವಂತಾಗಲು ಪ್ರತಿಯೊಬ್ಬರು ಬಯಸುತ್ತಾರೆ. ಎಲ್ಲಾ ಕ್ಷೇತ್ರಗಳಲ್ಲಿ ಇಂತಹ ಮನೋಭಾವನೆ ಹೆಚ್ಚಾಗಿರುತ್ತದೆ. ಅದು ಸಹಜವೂ ಕೂಡ ಹೌದು. ಆದರೆ ಆರೋಗ್ಯಪೂರ್ಣವಾದ ಪೈಪೋಟಿ ಇರಬೇಕೇ ವಿನಃ ಇತರರಿಗೆ ನೋವು ತರುವಂತಹ ರೀತಿಯಲ್ಲಿ ಇರಬಾರದು. ಇಂತಹ ಮನೋಭಾವವು ವಿಫಲತೆಯನ್ನು ತಂದೊಡ್ಡುತ್ತದೆ.




**ಈ ನಿಟ್ಟಿನಲ್ಲಿ ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು**

1. ಪ್ರತಿಯೊಬ್ಬರೂ ಉನ್ನತ ರೀತಿಯಲ್ಲಿ ಜೀವನ ನಡೆಸುವಂತಹ ಹಾದಿಯಲ್ಲಿ ಅನಗತ್ಯವಾಗಿ ಅನಾರೋಗ್ಯಕರ ಪೈಪೋಟಿಯಿಂದ ಇತರರಿಗೆ ನೋವು ತರುವುದು ಸರಿಯೇ?
2. ತಾನು ಭದ್ರವಾಗಿರಲು ಇನ್ನೊಬ್ಬರಿಗೆ ಸಮಸ್ಯೆ ತರುವುದು ಒಳ್ಳೆಯ ಲಕ್ಷಣವೇ?
3. ನಾವು ಮುಂದಾಗಬೇಕೆಂದು ಬಯಸುವವನು ಆ ದಾರಿಯಲ್ಲಿ ಪ್ರಾಮಾಣಿಕವಾಗಿ ಸಾಗಲು ಪ್ರಯತ್ನಿಸಬೇಕೆ ಹೊರತು ಅಡ್ಡ ದಾರಿ ಹಿಡಿಯುವುದು ತಪ್ಪಲ್ಲವೆ?
4. ತ್ಯಾಗದಿಂದ ಇನ್ನೊಬ್ಬರ ಏಳಿಗೆ ಆಗುತ್ತದೆ ಮತ್ತು ಅದು ನಮ್ಮನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯುತ್ತದೆ ಅಲ್ಲವೆ?
5. ಉನ್ನತಿಯೇ ಅಹಂಕಾರವಾಗಬಾರದಲ್ಲವೆ?

**– ಎಸ್.ಬಿ. ನಿರಂಜನ್**
ನಗರೇಶ್ವರ ದೇವಸ್ಥಾನದ ಹತ್ತಿರ, 4ನೇ ವಾರ್ಡ್,
ಮರಿಯಮ್ಮನಹಳ್ಳಿ – 583 222, ಹೊಸಪೇಟೆ ತಾ, ಬಳ್ಳಾರಿ ಜಿಲ್ಲೆ.
**ಮೊಬೈಲ್ : 9449531086**

ವಿ.ಸೂ. ಓದುಗರು ಸಹ ತಾವು ನೋಡಿದ, ಕೇಳಿದ, ಓದಿದ ಘಟನೆ ಮತ್ತು ಅದಕ್ಕೆ ಪೂರಕವಾದ ಪ್ರಶ್ನೆಗಳನ್ನು ಬರೆದು ಪ್ರಕಟಣೆಗೆ ಕಳುಹಿಸಬಹುದಾಗಿದೆ. ಆಯ್ಕೆಯಾಗಿ ಪ್ರಕಟವಾದ ಪ್ರಶ್ನೆಗಳಿಗೆ ರೂ. 500/- ಬಹುಮಾನ ನೀಡಲಾಗುವುದು.

ಸ್ವಚ್ಛ ಕರ್ನಾಟಕ

## ನುಡಿ ನಿರ್ಮಲ

ಸ್ವಚ್ಛತೆ ಮತ್ತು ಶೌಚಾಲಯಗಳು ಜನ ಜೀವನದ ಆರ್ಥಿಕ ಹಾಗೂ ಸಮಾಜಿಕ ಅಭಿವೃದ್ಧಿಗಳಿಗೆ ಪ್ರಮುಖ ಕಾರಣಗಳಾಗುತ್ತವೆ. ಆದ್ದರಿಂದಲೇ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಗ್ರಾಮೀಣ ಸ್ವಚ್ಛತೆಯ ಅನುಷಾನಕ್ಕಾಗಿ ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸ್ವಚ್ಛತೆಯ ಅನುಷ್ಠಾನದಲ್ಲಿ ಕೇಂದ್ರ ಸರ್ಕಾರ ನೀಡುತ್ತಿರುವ ನಿರ್ಮಲ ಗ್ರಾಮ ಪುರಸ್ಕಾರ ಒಂದು ಮಹತ್ವದ ಮೈಲಿಗಲ್ಲು. ಗ್ರಾಮಿಣ ಪ್ರದೇಶಗಳಲ್ಲಿ ಸ್ವಚ್ಛತೆಯ ಸಾಧನೆಗೆ ಹೆಚ್ಚಿನ ಪ್ರೇರಣೆ ಹಾಗೂ ಪೂರಕ ವಾತಾವರಣ ನಿರ್ಮಿಸುವಲ್ಲಿ, ಜನಸಮುದಾಯವನ್ನು ಮತ್ತು ಗ್ರಾಮ ಪಂಚಾಯಿತಿಗಳನ್ನು ಉತ್ತೇಜಿಸುವಲ್ಲಿ ನಿರ್ಮಲ ಗ್ರಾಮ ಪುರಸ್ಕಾರ ನಿಜಕ್ಕೂ ಮಹತ್ವದ ಪಾತ್ರ ವಹಿಸಿದೆ, ಹಾಗೂ ಅನೇಕ ಬದಲಾವಣೆಯನ್ನು ಉಂಟುಮಾಡಿದೆ. 2010–11 ನೇ ಸಾಲಿನಲ್ಲಿ ರಾಜ್ಯದ 121 ಗ್ರಾಮ ಪಂಚಾಯಿತಿಗಳು ತಮ್ಮ ವ್ಯಾಪ್ತಿಯ ಎಲ್ಲ ಗ್ರಾಮಗಳಲ್ಲಿ ಬಯಲು ಮಲ ವಿಸರ್ಜನೆಯಂತಹ ಕೆಟ್ಟ ಪದ್ಧತಿಯನ್ನು ನಿರ್ಮೂಲನೆ ಮಾಡಿ, ಹಳ್ಳಿಗಳಲ್ಲಿ ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸಿ ಪ್ರಶಸ್ತಿಗೆ ಪಾತ್ರವಾಗಿವೆ. ಒಟ್ಟಾರೆ ಪ್ರಸಕ್ತ ವರ್ಷವೂ ಸೇರಿದಂತೆ ಕಳೆದ 4 ವರ್ಷಗಳಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನದಡಿಯಲ್ಲಿ ರಾಜ್ಯದ 966 ಗ್ರಾಮ ಪಂಚಾಯಿತಿಗಳು ಸಂಪೂರ್ಣ ಸ್ವಚ್ಛತೆ ಸಾಧಿಸಿವೆ.

ಈ ಪ್ರಶಸ್ತಿಗೆ ಪಾತ್ರವಾಗಿರುವ ಗ್ರಾಮ ಪಂಚಾಯಿತಿಗಳ ಎಲ್ಲ ಕುಟುಂಬಗಳಲ್ಲಿ ಶೌಚಾಲಯಗಳು ನಿರ್ಮಾಣಗೊಂಡಿರುವುದು, ಜನರು ಮಲ–ಮೂತ್ರಗಳ ವಿಸರ್ಜನೆಗೆ ಶೌಚಾಲಯಗಳನ್ನೆ ಬಳಸತ್ತಿರುವುದು, ಶಾಲೆ ಮತ್ತು ಅಂಗನವಾಡಿಗಳ ಮಕ್ಕಳೂ ಸಹ ಮಲ–ಮೂತ್ರಗಳ ವಿಸರ್ಜನೆಗೆ ಶೌಚಾಲಯಗಳನ್ನು ಬಳಸತೊಡಗಿರುವುದು, ಹಳ್ಳಿಗಳು ಕಸ–ಕೊಳಚೆಗಳಿಂದ ಮುಕ್ತಗೊಂಡಿರುವುದು ಮಹತ್ಸಾಧನೆಯೇ ಸರಿ. ಇದು ಕೇವಲ ಪುರಸ್ಕಾರ ಮಾತ್ರವಲ್ಲ, ಇದರ ಹಿಂದೆ ಒಂದು ಮಹತ್ತರ ಜನಹಿತ ಅಡಗಿದೆ. ಅನ್ನೈರ್ಮಲ್ಯದಿಂದಾಗಿ ಹಳ್ಳಿಗಳಲ್ಲಿ ಹರಡುತ್ತಿರುವ ಅನೇಕ ಕಾಯಿಲೆಗಳನ್ನು ತಡೆಗಟ್ಟುವುದು, ಶಿಶುಮರಣವನ್ನು ನಿಯಂತ್ರಿಸುವುದು, ಮಹಿಳೆಯರಿಗೆ, ಮಕ್ಕಳಿಗೆ, ಅಶಕ್ತರಿಗೆ, ಅಂಗವಿಕಲವರಿಗೆ ಸುರಕ್ಷತೆ ಹಾಗೂ ಗೌಪ್ಯತೆಗಳನ್ನು ಒದಗಿಸುವುದು, ಒಟ್ಟಾರೆ ಗ್ರಾಮೀಣ ಜನರ ಜೀವನನ್ನು ಸುಧಾರಣೆ ಮಾಡುವಂತಹ ಶಕ್ತಿ ಈ ಪ್ರಶಸ್ತಿಗಿದೆ.

ಆದಾಗ್ಯೂ ಗ್ರಾಮೀಣ ನೈಮಲ್ಯ ಕ್ಷೇತ್ರದಲ್ಲಿ ಸಾಧಿಸಬೇಕಾದ್ದೂ ಬಹಳಷ್ಟಿದೆ. ಇನ್ನೂ 20 ಲಕ್ಷ ಗ್ರಾಮೀಣ ಕುಟುಂಬಗಳು ಶೌಚಾಲಯಗಳನ್ನು ಹೊಂದುವಂತೆ, ಸ್ವಚ್ಛತೆಯ ಅಭ್ಯಾಸಗಳನ್ನು ರೂಢಿಸಿಕೊಳ್ಳುವಂತೆ ಮನವೊಲಿಸುವ ಬಹುದೊಡ್ಡ ಸವಾಲು ನಮ್ಮ ಮುಂದಿದೆ. ಅದಕ್ಕಾಗಿ ಅರಿವು ಮೂಡಿಸುವ ಹಾಗೂ ಜನರಲ್ಲಿ ಜಾಗೃತಿಯನ್ನು ಉಂಟುಮಾಡುವ ಕಾರ್ಯಕ್ರಮಗಳನ್ನು ಇನ್ನಷ್ಟು ತ್ವರಿತಗೊಳಿಸಬೇಕಿದೆ. ಈ ನಿಟ್ಟಿನಲ್ಲಿ ಜಿಲ್ಲಾ ಪಂಚಾಯಿತಿಗಳು, ತಾಲೂಕು ಪಂಚಾಯಿತಿಗಳು ಹಾಗೂ ಗ್ರಾಮ ಪಂಚಾಯಿತಿಗಳೂ ಸೇರಿದಂತೆ ಪಂಚಾಯತ್ ರಾಜ್ ಸಂಸ್ಥೆಗಳ ಜವಾಬ್ದಾರಿ ಹೆಚ್ಚಿನದ್ದಾಗಿದೆ. ಇದರ ಜೊತೆಗೆ ಸರ್ಕಾರೇತರ ಸಂಸ್ಥೆಗಳ ಸಹಕಾರ, ಸ್ತ್ರೀಶಕ್ತಿ ಸಂಘಗಳು, ಸ್ವಸಹಾಯ ಸಂಘಗಳು, ಯುವ ಮಂಡಲಗಳ ಬೆಂಬಲದೊಂದಿಗೆ ಬಯಲು ಮಲ ವಿಸರ್ಜನೆಯೆಂಬ ಸಾಮಾಜಿಕ ಪಿಡುಗನ್ನು ಹೊಡೆದೋಡಿಸುಂತಹ ಕೆಲಸಗಳು ಸಮರೋಪಾದಿಯಲ್ಲಿ ಆಗಬೇಕು. ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮವು ಸರ್ಕಾರದ ಆದ್ಯತೆಯ ಕಾರ್ಯಕ್ರಮವಾಗಿದ್ದು ಎಲ್ಲರೂ ಕೈಜೋಡಿಸಿ ಕಾರ್ಯನಿರ್ವಹಿಸುವ ಮೂಲಕ ನಮ್ಮ ರಾಜ್ಯವನ್ನು 2012 ರ ಒಳಗಾಗಿ ಸಂಪೂರ್ಣ ಬಯಲು ಮಲ ವಿಸರ್ಜನೆ ಮುಕ್ತ ರಾಜ್ಯವನ್ನಾಗಿ ರೂಪಿಸುವಂತಾಗಲಿ ಎಂಬ ಆಶಯ ನನ್ನದು.

**– ಡಾ|| ಪಿ. ಬೋರೇಗೌಡ,**
ನಿರ್ದೇಶಕರು, ಕ.ಗ್ರಾ.ನೀ.ಸ. ಮತ್ತು ನೈ. ಸಂಸ್ಥೆ,
ಗ್ರಾ. ಅ. ಮತ್ತು ಪಂ. ರಾಜ್ ಇಲಾಖೆ.

## ಹೊಸಂಗಡಿ ಗ್ರಾಮ : ಸ್ವಚ್ಛತೆ ಹಾಗೂ ಸುಸ್ಥಿರತೆಗಳ ಸಂಗಮ




ಅರಬ್ಬಿ ಸಮುದ್ರದ ತೀರದ ನಿಸರ್ಗ ಸಿರಿಯ ನಾಡು, ವೈವಿಧ್ಯಗಳ ತವರು, ಸುಶಿಕ್ಷಿತರ ಜಿಲ್ಲೆ ಎಂಬ ಹಲವು ಹೆಗ್ಗಳಿಕೆಗಳಿಗೆ ಹೆಸರಾದ ಜಿಲ್ಲೆ ದಕ್ಷಿಣ ಕನ್ನಡ. ಅಲ್ಲಿ ಕಣ್ಣ ನೋಟ ಕೊನೆಯಾಗುವವರೆಗೂ ಕಾಣುವ ಮಹಾಸಾಗರವಿದೆ, ದಟ್ಟ ಕಾನನ, ಗಿರಿ–ಕಂದರ, ಹಸಿರು–ಹೊನಲು, ಹೀಗೆ ಎಲ್ಲವೂ ವಿಶಿಷ್ಟ, ವೈವಿಧ್ಯ. ಇದಕ್ಕೆ ಈ ಹಿಂದೆ ಇದ್ದ ಒಂದೇ ಒಂದು ಅಪವಾದವೆಂದರೆ ನೈರ್ಮಲ್ಯ ಪಾಲನೆ. ಜಿಲ್ಲೆಯಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನ ಅನುಷ್ಠಾನಕ್ಕೆ ಬರುವ ಮೊದಲು ಜಿಲ್ಲೆಯಲ್ಲಿನ ಬಹಳಷ್ಟು ಜನ ತಮ್ಮ ಮಲ–ಮೂತ್ರಗಳ ವಿಸರ್ಜನೆಗೆ ಬಯಲನ್ನೇ ಅವಲಂಬಿಸಿದ್ದರು. ಅಲ್ಲಿನ ಪರಿಸರ ಕೂಡ ಅದಕ್ಕೆ ಪೂರಕವಾಗಿಯೇ ಇತ್ತು. ದಟ್ಟ ಕಾನನ, ಮರ–ಗಿಡಗಳು, ವಿರಳ ಮನೆಗಳು ಹೀಗೆ ಎಲ್ಲವೂ ಬಯಲು ಮಲವಿಸರ್ಜನೆಯ ಅಭ್ಯಾಸಕ್ಕೆ ಇಂಬು ನಿಡುವಂತಿತ್ತು. ಜಿಲ್ಲೆಯ ಎಲ್ಲ ವಿಶಿಷ್ಟಗಳ ನಡುವೆ ಇದ್ದ ಒಂದೇ ಒಂದು ಕೊರತೆಯನ್ನು ನೀಗಿಸುವಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನ ನಿಜಕ್ಕೂ ಯಶಸ್ವಿಯಾಗಿದೆಯೆಂದೇ ಹೇಳಬೇಕು. ಯಾಕೆಂದರೆ ಸಂಪೂರ್ಣ ಸ್ವಚ್ಛತೆ ಹಾಗೂ ಸ್ವಚ್ಛತೆಯಲ್ಲಿ ಸುಸ್ತಿರತೆಯನ್ನು ಸಾಧಿಸಿದ ಪ್ರಥಮ ಜಿಲ್ಲೆ ಎಂಬ ಹೆಗ್ಗಳಿಕೆಯನ್ನು ಹೊಂದಿರುವ ದಕ್ಷಿಣ ಕನ್ನಡ ಜಿಲ್ಲೆ ರಾಜ್ಯ ಸರ್ಕಾರವು ಸ್ವಚ್ಛತೆಯ ಸಾಧನೆಗಾಗಿ ನೀಡುವ 'ನೈರ್ಮಲ್ಯ ರತ್ನ' ಪ್ರಶಸ್ತಿಯುನ್ನು ಬಾಚಿಕೊಳ್ಳುವ ಮೂಲಕ ತನ್ನದಾಗಿಸಿಕೊಂಡಿದೆ. ಜಿಲ್ಲೆಯ ಎಲ್ಲ ಗ್ರಾಮ ಪಂಚಾಯಿತಿಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಸಂಪೂರ್ಣ ಸ್ವಚ್ಛತೆಯುನ್ನು





ಸಾಧಿಸಿದ್ದು, ಈ ಸಾಧನೆಗಾಗಿ ಈಗಾಗಲೇ ಕೇಂದ್ರ ಸರ್ಕಾರ ನೀಡುವ ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಪಾತ್ರವಾಗಿವೆ. ಜಿಲ್ಲೆಯ ಎಲ್ಲ ಗ್ರಾಮ ಪಂಚಾಯಿತಿಗಳ ಪೈಕಿ ಸ್ವಚ್ಛತೆಯ ಸಾಧನೆ, ಸ್ವಚ್ಛತೆಯಲ್ಲಿ ಸುಸ್ಥಿರತೆ, ಸ್ವಚ್ಚತೆಯ ಸಾಧನೆಯಲ್ಲಿ ಚುನಾಯಿತ ಪ್ರತಿನಿಧಿಗಳು ಹಾಗೂ ಜನಸಮುದಾಯದ ನೇತೃತ್ವವನ್ನು ಸಂಪೂರ್ಣವಾಗಿ ಹೊಂದುವ ಮೂಲಕ ಇಡೀ ರಾಜ್ಯದಲ್ಲೆಯೇ ಅತ್ಯಂತ ಉತ್ತಮ ಹಾಗೂ ಎತ್ತರದ ಸ್ಥಾನದಲ್ಲಿ ನಿಂತಿದೆ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಹೊಸಂಗಡಿ ಗ್ರಾಮ ಪಂಚಾಯಿತಿ.

ಪಲ್ಗುಣಿ ನದಿ ತೀರದ ಕಾಡಿನ ಸೊಬಗಿನಲ್ಲಿ ಮಿಂದು ಮಿನುಗುತ್ತಿರುವ ಹೊಸಂಗಡಿ ಗ್ರಾಮ ಪಂಚಾಯಿತಿ ರಾಜ್ಯದಲ್ಲಿನ ಐದೂವರೆ ಸಾವಿರಕ್ಕೂ ಅಧಿಕವಿರುವ ಎಲ್ಲ ಗ್ರಾಮ ಪಂಚಾಯಿತಿಗಳಿಗೆ ಮಾದರಿಯಾಗಿ ನಿಂತಿದೆ. ಒಮ್ಮೆ ನಾವು ಈ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿದರೆ ಮಾತ್ರ ಅದರ



ಸಾಧನೆ ಹಾಗೂ ಅಲ್ಲಿನ ಸ್ವಚ್ಛತೆಯ ಸ್ವರೂಪವನ್ನು ಕಂಡು ಸವಿಯಲು ಸಾಧ್ಯ. ಅದೊಂದು ಗ್ರಾಮಪಂಚಾಯಿತಿ ಎನ್ನುವುದಕ್ಕೆ ಬದಲಾಗಿ ಅದೊಂದು ನಿಜವಾದ ಗ್ರಾಮರಾಜ್ಯ ಹಾಗೂ ಸುಸ್ಥಿರ ಸ್ವರಾಜ್ಯ ಎಂದು ಹೇಳಬಹುದಾಗಿದೆ. ಎಲ್ಲ ಕಡೆಯಲ್ಲೂ ಇರುವಂತೆ ವಿಭಿನ್ನ ಜನ, ಕೋಮು ಧರ್ಮ, ಸಂಸ್ಕೃತಿ, ಸಮುದಾಯ ಹಾಗೂ ಪಕ್ಷರಾಜಕೀಯ ಇಲ್ಲೂ ಇವೆ. ಆದರೆ ಅವೆಲ್ಲವೂ ಸಕಾರಣಗಳಿಗೆ ಮಾತ್ರ, ಗ್ರಾಮದ ಅಭಿವೃದ್ಧಿಯಲ್ಲಿ, ಜನರ ಹಿತರಕ್ಷಿಸುವಲ್ಲಿ, ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಎಲ್ಲ ಜನಸಮುದಾಯದ ಸುಧಾರಣೆಯಲ್ಲಿ ಅವರದ್ದು ಐಕ್ಯತೆಯ ಮಂತ್ರ. ಹೀಗಾಗಿಯೇ ಹೊಸಂಗಡಿ ಗ್ರಾಮ ಪಂಚಾಯಿತಿ ರಾಜ್ಯದಲ್ಲಿಯೇ ಒಂದು ಮಾದರಿ ಗ್ರಾಮಪಂಚಾಯಿತಿಯಾಗಿದೆ. ಹೊಸಂಗಡಿ ಗ್ರಾಮ ಪಂಚಾಯಿತಿಯೆಂದರೆ ಸ್ವಚ್ಛ ಹಾಗೂ ಸುಂದರ. ಗ್ರಾಮದ ಯಾವ ಮೂಲೆಯೇ ಆಗಲಿ, ಅಲ್ಲಿ ಕಸ-ಕೊಳಚೆಗಳೆಂಬ ಮಾತೇ ಇಲ್ಲ, ಬಯಲು ಮಲವಿಸರ್ಜನೆ ಎಂಬ ಕುರುಹೇ ಸಿಗುವುದಿಲ್ಲ. ಅಷ್ಟರ ಮಟ್ಟಿಗೆ ಇಡೀ ಗ್ರಾಮ ಪಂಚಾಯಿತಿಯಲ್ಲಿ ಸಂಪೂರ್ಣ ಸ್ವಚ್ಛತೆ ನೆಲೆಗೊಂಡಿದೆ. ಅಲ್ಲಿನ ಎಲ್ಲ ಮನೆಗಳಲ್ಲಿ ಶೌಚಾಲಯಗಳಿವೆ. ಎಲ್ಲರೂ ತಪ್ಪದೆ ಶೌಚಾಲಯಗಳನ್ನೇ ಬಳಸುತ್ತಾರೆ. ಸಮಾಜಿಕ ಹಾಗೂ ಸಾರ್ವಜನಿಕ ಹೊಣೆಗಾರಿಕೆಗೆ ಇನ್ನೊಂದು ಹೆಸರು ಎಂದರೆ ಹೊಸಂಗಡಿ ಗ್ರಾಮ ಪಂಚಾಯಿತಿ. ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿನ ಎಲ್ಲ ಶಾಲೆ ಮತ್ತು ಅಂಗನವಾಡಿಗಳಲ್ಲಿ ಅತ್ಯುತ್ತಮವಾದ ನೈರ್ಮಲ್ಯ ಸೌಲಭ್ಯಗಳಿವೆ. ಅಲ್ಲಿನ ಪುಟ್ಟ ಮಕ್ಕಳಲ್ಲಿ ಸ್ವಚ್ಛತೆಯ ಅಭ್ಯಾಸಗಳು ಹಾಸುಹೊಕ್ಕಾಗಿವೆ. ಶಾಲೆ, ಅಂಗನವಾಡಿಗಳ ಪುಟ್ಟ ಮಕ್ಕಳು ಶಾಲೆಗಳಲ್ಲಿ ತಪ್ಪದೆ ಶೌಚಾಲಯಗಳನ್ನು ಬಳಸುವ ಅಭ್ಯಾಸಗಳನ್ನು ರೂಢಿಸಿಕೊಂಡಿವೆ. ಹಾಗೆಯೇ ಮನೆಗಳಲ್ಲೂ ಕೂಡ ಸ್ವಚ್ಛತೆಯ ಅಭ್ಯಾಸಗಳು ತಪ್ಪದೆ ಪಾಲನೆಯಾಗುತ್ತಿವೆ. ಗ್ರಾಮದ ಕಸದ ವಿಲೇವಾರಿಗೆ ಅತ್ಯಂತ ವಿನೂತನ ಅಂಶಗಳನ್ನು ಅಳವಡಿಸಿಕೊಂಡ ಹೆಗ್ಗಳಿಗೆ ಹೊಸಂಗಡಿ ಗ್ರಾಮ ಪಂಚಾಯತಿಗಿದೆ. ಗ್ರಾಮದ ಪ್ರಮುಖ ಸ್ಥಳಗಳಲ್ಲಿ ದಾನಿಗಳ ನೆರವಿನಿಂದ 18 ಕಡೆಗಳಲ್ಲಿ ಕಸ ನಿರ್ವಹಣೆಗಾಗಿ ಪ್ಲಾಸ್ಟಿಕ್ ಸೌಧಗಳನ್ನು ನಿರ್ಮಿಸಲಾಗಿದೆ. ಪ್ಲಾಸ್ಟಿಕ್ ಸೌಧಗಳೆಂದರೆ ತ್ಯಾಜ್ಯ ನಿರ್ವಹಣೆಯಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುತ್ತವೆ. ಗ್ರಾಮದ ಕಸ ಮೂಲದಲ್ಲಿಯೇ ಪ್ರತ್ಯೇಕಿಸಿ ಕೊಳೆಯುವ ಕಸ, ಕೊಳೆಯಲಾರದ ಕಸ, ರಾಸಾಯನಿಕಗಳು, ಗಾಜುಗಳು, ಪ್ಲಾಸ್ಟಿಕ್ ವಸ್ತುಗಳು ಹೀಗೆ ಎಲ್ಲವನ್ನು ಪ್ರತ್ಯೇಕಿಸಿ ಪ್ಲಾಸ್ಟಿಕ್ ಸೌಧದಲ್ಲಿ ಒದಗಿಸಲಾದ ಪ್ರತ್ಯೇಕ ವಿಭಾಗಗಳಲ್ಲಿ ಹಾಕಲಾಗುತ್ತದೆ. ಪ್ರತಿ ಮನೆಯಲ್ಲಿ ಉತ್ಪತ್ತಿಯಾಗುವ ಹಸಿ ಕಸವನ್ನು ಮನೆ ಮಟ್ಟದಲ್ಲಿಯೇ ನಿರ್ವಹಿಸುವ ಮೂಲಕ ತಮ್ಮ ತೋಟ ಹಾಗೂ ಗಿಡ-ಮರಗಳಿಗೆ ಬಳಸುತ್ತಾರೆ. ಹೆಚ್ಚಿನ ಕಸವನ್ನು ಗ್ರಾಮ ಪಂಚಾಯಿತಿಯಿಂದ ನಿರ್ಮಿಸಲಾದ ತ್ಯಾಜ್ಯ ಗುಂಡಿಗಳಲ್ಲಿ ಹಾಕುತ್ತಾರೆ. ಗ್ರಾಮದ ಎಲ್ಲ ಅಂಗನವಾಡಿಗಳಲ್ಲಿ ಇರುವ ಶೌಚಾಲಯಗಳು ಮಕ್ಕಳ ಬಳಕೆಗೆ ಉತ್ತೇಜನಕಾರಿ






ಯಾಗಿ ನಿರ್ಮಾಣಗೊಂಡ ಮಕ್ಕಳ ಸ್ನೇಹಿ ಶೌಚಾಲಯಗಳಾಗಿವೆ. ಗ್ರಾಮದ ಜನರು ಕುಡಿಯುವ ನೀರನ್ನು ಕಾಲ-ಕಾಲಕ್ಕೆ ಪರೀಕ್ಷಿಸಲಾಗುತ್ತಿದೆ ಹಾಗೂ ನೀರು ಮಲಿನಗೊಂಡಿದ್ದು ಕಂಡುಬಂದರೆ ಕೂಡಲೆ ಕ್ರಮವಹಿಸಲಾಗುತ್ತಿದೆ. ಸ್ವಚ್ಛತೆಯ ಕುರಿತು ಜನರಲ್ಲಿ ಹಾಗೂ ಶಾಲ ಮಕ್ಕಳಲ್ಲಿ ಜಾಗೃತಿ ಮೂಡಿಸುವ ಸಂಬಂಧ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿದೆ. ಸ್ವಚ್ಛತೆ ಹಾಗೂ ಪರಿಸರ ರಕ್ಷಣೆಗೆ ಸಂಬಂಧಿಸಿದಂತೆ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಜನರಲ್ಲಿ ಜಾಗೃತಿ ಹಾಗೂ ಹೊಣೆಗಾರಿಕೆಯನ್ನು ಹೆಚ್ಚಿಸಲಾಗುತ್ತಿದೆ. ಗ್ರಾಮದಲ್ಲಿನ ಜನರಲ್ಲಿ ದುಶ್ಚಟಗಳನ್ನು ನಿರ್ಮೂಲನೆ ಮಾಡುವ ಮಹತ್ತರ ಉದ್ಧೇಶದಿಂದ 'ಮಾದರಿ ಕುಟುಂಬ, ಸುಸ್ಥಿರ ಸ್ವಾವಲಂಬಿ ಸಮುದಾಯ ಎಂಬ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತಿದೆ. ಗ್ರಾಮದ ಯಾವ ಕುಟುಂಬದಲ್ಲಿ ದುಶ್ಚಟಗಳಿರುವುದಿಲ್ಲವೊ, ಸ್ವಚ್ಛತೆ, ಸುಸ್ಥಿರತೆ, ಸ್ವಾವಲಂಭಿ ಜೀವನವನ್ನು ಅಳವಡಿಸಿಕೊಂಡಿರುತ್ತದೆಯೋ ಅಂತಹ ಕುಟುಂಬಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಗ್ರಾಮ ಪಂಚಾಯತ್ ನಿಜಕ್ಕೂ ಒಂದು ಘಟಕವಾಗಿ ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವುದು ಹೊಸಂಗಡಿ ಗ್ರಾಮ ಪಂಚಾಯಿತಿಯ ಮತ್ತೊಂದು ಹೆಗ್ಗಳಿಕೆ. ಅಲ್ಲಿನ ಸಿಬ್ಬಂಧಿಗಳು, ಅಧಿಕಾರಿಗಳು, ಪಂಚಾಯತ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು, ಮಾಜಿ ಪ್ರತಿನಿಧಿಗಳು, ಗ್ರಾಮದ ಎಲ್ಲ ಜನಸಮುದಾಯ ಹೀಗೆ ಎಲ್ಲರೂ ಸಹ ಗ್ರಾಮ ಪಂಚಾಯಿತಿಯ ಅಭಿವೃದ್ಧಿಯಲ್ಲಿ ಕೈಜೋಡಿಸಿ ಒಗ್ಗಾಟ್ಟಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಲ್ಲಿ ಎಲ್ಲರದ್ದೂ ಒಂದೇ ಮಂತ್ರ; ಅದು ಗ್ರಾಮಾಭಿವೃದ್ಧಿಯ ಮಂತ್ರ, ಸ್ವಚ್ಛತೆ, ಸುಸ್ಥಿರತೆ ಹಾಗೂ ಸ್ವಾವಲಂಬನೆಯ ಮಂತ್ರ. ಆದ್ದರಿಂದಲೇ ಹೊಸಂಗಡಿ ಗ್ರಾಮ ಪಂಚಾಯತಿ ರಾಜ್ಯದಲ್ಲಿಯೇ ಮಾದರಿ ಗ್ರಾಮ ಪಂಚಾಯಿತಿಯಾಗಿ ನಮ್ಮೆಲ್ಲರ ಮುಂದೆ ಕಂಗೊಳಿಸುತ್ತಿದೆ.

ಹೊಂಸಂಗಡಿ ಗ್ರಾಮ ಪಂಚಾಯಿತಿಯ ಈ ಎಲ್ಲ ಸಾಧನೆಗಳ ಹಿಂದೆ ಹಲವಾರು ಕೈಗಳು ದುಡಿದಿವೆ ಹಾಗೂ ಶ್ರಮಿಸಿವೆ. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪಿ.ಶಿವಶಂಕರ್ ಅವರು ಸೇರಿದಂತೆ ಹಲವು ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ನ ಮಾಜಿ ಉಪಾಧ್ಯಕ್ಷರಾದ ಶ್ರೀ. ದರಣೇಂದ್ರಕುಮಾರ್ ರವರು, ಗ್ರಾಮಪಂಚಾಯತಿ ಅಧಿಕಾರಿಗಳು ಹಾಗೂ ಸಿಬ್ಬಂಧಿಗಳು, ಈ ಹಿಂದಿನ ಸಾಲಿನಲ್ಲಿ ಕಾರ್ಯನಿರ್ವಹಿಸಿದ ಗ್ರಾಮಪಂಚಾಯಿತಿಯ ಮಾಜಿ ಪದಾಧಿಕಾರಿಗಳು, ಈಗಿನ ಪದಾಧಿಕಾರಿಗಳು, ಶಾಲಾ ಮತ್ತು ಅಂಗನವಾಡಿಗಳ ಶಿಕ್ಷಕರುಗಳು, ಫ್ರೆಂಡ್ಸ್ ಕ್ಲಬ್‌ನ ಎಲ್ಲ ಸದಸ್ಯರುಗಳು, ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳು ಹೀಗೆ ಎಷ್ಟೊಂದು ಜನರು ಗ್ರಾಮಪಂಚಾಯಿತಿಯನ್ನು ಮಾದರಿ ಗ್ರಾಮ ಪಂಚಾಯಿತಿಯನ್ನಾಗಿ ರೂಪಿಸುವಲ್ಲಿ ಶ್ರಮಿಸಿದ್ದಾರೆ. ಈ ಎಲ್ಲರ ಶ್ರಮದ ಫಲವಾಗಿ ಹೊಸಂಗಡಿ ಗ್ರಾಮ ಪಂಚಾಯಿತಿ ರಾಜ್ಯ ಸರ್ಕಾರದಿಂದ ಕೊಡಮಾಡುವ 'ನೈರ್ಮಲ್ಯ ರತ್ನ' ಪ್ರಶಸ್ತಿಗೆ ಬಾಜನವಾಗಿರುವುದು ಅತ್ಯಂತ ಶ್ಲಾಘನೀಯವಾದುದು..

ಸಂವಹನ ಮತ್ತು ಸಾಮರ್ಥ್ಯಾಭಿವೃದ್ಧಿ ಘಟಕ, ಕ. ಗ್ರಾ. ನೀ. ಸ. ನೈ. ಸಂಸ್ಥೆ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು - ೫೬೦ ೦೦೯.

ಲೇಖನ ಪತ್ರ

# ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಆರ್ಥಿಕ ಸಂರಚನೆ




ಎ.ಎಸ್. ಶಿವಾನಂದಾಚಾರ್ಯ *

ಮೊಬೈಲ್ : 9900020910


ಸರ್ಕಾರದ ವ್ಯವಸ್ಥೆಯಲ್ಲಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿನ ಆರ್ಥಿಕ ಸಂರಚನೆಯನ್ನು (Financial Structure) ಕುರಿತು ಆರ್ಥಿಕ ಪರಿಕಲ್ಪನೆಗಳ (Financial Concepts) ಪಾರಿಭಾಷಿಕ ವಿವರಣೆಗಳನ್ನು ಒಳಗೊಂಡಂತೆ ಸ್ಥೂಲವಾದ ಪರಿಚಯವನ್ನು ಮಾಡಿಕೊಡಲು ಇಲ್ಲಿ ಪ್ರಯತ್ನಿಸಲಾಗಿದೆ.

ಕಳೆದ ಸಂಚಿಕೆಯಿಂದ ಮುಂದುವರೆದಿದೆ ....

## 2.39 ಲೆಕ್ಕ ಪರಿಶೋಧನೆ

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ ಸೆಕ್ಷನ್253ರ ಮೇರೆಗೆ ತಾಲ್ಲೂಕು ಪಂಚಾಯತ್ ನಿಧಿ ಲೆಕ್ಕಗಳ ಲೆಕ್ಕಪರಿಶೋಧನೆಯನ್ನು, ಮತ್ತು ಸೆಕ್ಷನ್ 262ರ ಮೇರೆಗೆ ಜಿಲ್ಲಾ ಪಂಚಾಯತ್ ನಿಧಿ ಲೆಕ್ಕಗಳ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು (C & AG) ಪ್ರತಿವರ್ಷ ಕೈಗೊಳ್ಳುತ್ತಾರೆ.

## 2.40 ಲೆಕ್ಕಪರಿಶೋಧನಾ ವರದಿಗಳ ಮಂಡನೆ :

ಜಿ.ಪಂ./ ತಾ.ಪಂ. ವಾರ್ಷಿಕ ಲೆಕ್ಕಗಳನ್ನು ಮಹಾಲೇಖಪಾಲರು ಪರಿಶೀಲಿಸಿ, ದೃಢೀಕರಿಸಿ ವರದಿ ನೀಡುತ್ತಾರೆ. ಈ ವರದಿಗಳನ್ನು ಮುದ್ರಿಸಿ, ಶಾಸನ ಸಭೆಯ ಕಾಗದ ಪತ್ರಗಳ ಸಮಿತಿಗೆ ಸಲ್ಲಿಸಲಾಗುತ್ತದೆ; ಮತ್ತು ಆನಂತರ ಉಭಯಸದನಗಳ ಮುಂದೆ ಮಂಡಿಸಲಾಗುತ್ತದೆ. ಜಿ.ಪಂ/ ತಾ.ಪಂ.ಗಳ ಅಧೀನದಲ್ಲಿ ಬರುವ ಕಛೇರಿಗಳ ಸ್ಥಳೀಯ ಲೆಕ್ಕಪರಿಶೋಧನೆಯಲ್ಲಿ ಕಂಡುಬರುವ ಲೋಪದೋಷ-ಅಕ್ರಮಗಳನ್ನು ಕುರಿತಂತೆ ಮಹಾಲೇಖಪಾಲರು ಲೆಕ್ಕ ತನಿಖಾ ವರದಿಗಳನ್ನು (Inspection Reports) ನೀಡುತ್ತಾರೆ. ಅಲ್ಲದೆ ಆಡಿಟ್ ಟಿಪ್ಪಣಿಗಳ ಮುಖಾಂತರ ಆಯಾ ಜಿಲ್ಲಾ/ ತಾಲ್ಲೂಕು ಪಂಚಾಯತಿಗಳ ಮತ್ತು ಸರ್ಕಾರದ ಗಮನಕ್ಕೆ ತಂದು, ಅವುಗಳನ್ನು ಸರಿಪಡಿಸುವಂತೆ ತಿಳಿಸುತ್ತಾರೆ. ನಿಗದಿತ ಗಡುವಿನಲ್ಲಿ ಸೂಕ್ತ ಉತ್ತರಗಳು ಬಾರದಿದ್ದಲ್ಲಿ, ಅಂತಹ ಆಡಿಟ್ ಆಕ್ಷೇಪಣೆಗಳನ್ನು ಪ್ರಧಾನ ವರದಿಯಲ್ಲಿ ಸೇರಿಸುತ್ತಾರೆ.

## 2.41 ತಾಲ್ಲೂಕು ಪಂಚಾಯತ್: ಹಣ ದುರುಪಯೋಗ ಪ್ರಕರಣಗಳ ಮೇಲೆ ಕ್ರಮ:

ಅಧಿನಿಯಮದ ಸೆಕ್ಷನ್ 254ರ ಮೇರೆಗೆ, ತಾಲ್ಲೂಕು ಪಂಚಾಯತಿಗಳು ಸ್ವಯಂ ಪ್ರೇರಿತವಾಗಿ ಅಥವಾ ಆಡಿಟ್ ವರದಿಯನ್ನು ಆಧರಿಸಿ, ಸಂಬಂಧಪಟ್ಟ ವ್ಯಕ್ತಿಯಿಂದ ವಿವರಣೆಯನ್ನು ಪಡೆದು, ಅಥವಾ ವಿಚಾರಣೆ ನಡೆಸಿದ ನಂತರ ಅಕ್ರಮ ವೆಚ್ಚಕ್ಕೆ ಅಥವಾ ಉದಾಸೀನತೆ ಅಥವಾ ದುರ್ನಡತೆಯಿಂದಾಗಿ ನಷ್ಟ ಅಥವಾ ಕೊರತೆಗೆ ಕಾರಣನಾದ ವ್ಯಕ್ತಿಯನ್ನು ಹೊಣೆಗಾರನನ್ನಾಗಿ (Charge) ಮಾಡಿ. ನೋಟೀಸನ್ನು ನೀಡಬೇಕಾಗಿರುತ್ತದೆ. ಅಂತಹ ವ್ಯಕ್ತಿಯು 30 ದಿನಗಳೊಳಗಾಗಿ ಹಣ ಭರಣಾ ಮಾಡಬೇಕು. ಇಲ್ಲದಿದ್ದಲ್ಲಿ, ಸೆಕ್ಷನ್ 255(2)ರ ಪ್ರಕಾರ, ಪಾವತಿಸಬೇಕಾದ ಮೊತ್ತದ ಮೇಲೆ ಶೇಕಡಾ 15 ರಂತೆ ಬಡ್ಡಿಯನ್ನು ವಿಧಿಸಿ, ವಸೂಲಾತಿ ವೆಚ್ಚವನ್ನೂ ಸೇರಿಸಿ ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡಬೇಕಾಗಿರುತ್ತದೆ.

## 2.42 ಜಿಲ್ಲಾ ಪಂಚಾಯತ್: ಹಣದುರುಪಯೋಗದ ಪ್ರಕರಣಗಳ ಮೇಲೆ ಕ್ರಮ:

ಜಿಲ್ಲಾ ಪಂಚಾಯತಿಗಳೂ ಸಹ ಅಧಿನಿಯಮದ ಸೆಕ್ಷನ್ 263ರ ಮೇರೆಗೆ, ಸ್ವಯಂ ಪ್ರೇರಿತವಾಗಿ ಅಥವಾ ಆಡಿಟ್ ವರದಿಯನ್ನು ಆಧರಿಸಿ, ಸಂಬಂಧಪಟ್ಟ ವ್ಯಕ್ತಿಯಿಂದ ವಿವರಣೆಯನ್ನು ಪಡೆದು,


* ಆಂತರಿಕ ಆರ್ಥಿಕ ಸಲಹೆಗಾರರು, (ನಿವೃತ್ತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸಚಿವಾಲಯ, ಬೆಂಗಳೂರು.

ಅಥವಾ ವಿಚಾರಣೆ ನಡೆಸಿದ ನಂತರ ಅಕ್ರಮ ವೆಚ್ಚಕ್ಕೆ ಅಥವಾ ಉದಾಸೀನತೆ ಅಥವಾ ದುರ್ನಡತೆಯಿಂದಾಗಿ ನಷ್ಟ ಅಥವಾ ಕೊರತೆಗೆ ಕಾರಣನಾದ ವ್ಯಕ್ತಿಯನ್ನು ಹೊಣೆಗಾರನ್ನಾಗಿ (Charge) ಮಾಡಿ. ನೋಟೀಸನ್ನು ನೀಡಬೇಕಾಗಿರುತ್ತದೆ. ಅಂತಹ ವ್ಯಕ್ತಿಯು 30 ದಿನಗಳೊಳಗಾಗಿ ಹಣ ಭರಣಾ ಮಾಡಬೇಕು. ಇಲ್ಲದಿದ್ದಲ್ಲಿ, ಸೆಕ್ಷನ್ 264(2)ರ ಪ್ರಕಾರ, ಪಾವತಿಸಬೇಕಾದ ಮೊತ್ತದ ಮೇಲೆ ಶೇಕಡಾ 15 ರಂತೆ ಬಡ್ಡಿಯನ್ನು ವಿಧಿಸಿ, ವಸೂಲಾತಿ ವೆಚ್ಚವನ್ನೂ ಸೇರಿಸಿ ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡಬೇಕಾಗಿರುತ್ತದೆ.

## 2.43 ಆಡಿಟ್ ಅಡ್‌ಹಾಕ್ ಸಮಿತಿ ರಚನೆ :

ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ಸಂಬಂಧಪಟ್ಟ ಲೆಕ್ಕ ತನಿಖಾ ವರದಿಗಳು ಹಾಗೂ ಆಡಿಟ್ ವರದಿಗಳಲ್ಲಿನ ಆಕ್ಷೇಪಣೆಗಳನ್ನು ಶೀಘ್ರ ಇತ್ಯರ್ಥಪಡಿಸುವ ದೃಷ್ಟಿಯಿಂದ ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿಪಿ 20 ಎಎಆರ್ 90 ದಿನಾಂಕ 8.2.1991ರಲ್ಲಿ ಪ್ರತಿಯೊಂದು ಜಿಲ್ಲಾ ಪಂಚಾಯತಿ ಯಲ್ಲಿಯೂ ಆಡಿಟ್ ಅಡ್‌ಹಾಕ್ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯ ಸದಸ್ಯರು :

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್
2. ಸಂಬಂಧಪಟ್ಟ ಉಪಕಾರ್ಯದರ್ಶಿ, ಜಿಲ್ಲಾ ಪಂಚಾಯತ್
3. ಮುಖ್ಯ ಲೆಕ್ಕಾಧಿಕಾರಿ, ಸಮಿತಿಯ ಸಂಚಾಲಕರು.
4. ಸಂಬಂಧಪಟ್ಟ ಜಿಲ್ಲಾ ಮಟ್ಟದ ಇಲಾಖಾಧಿಕಾರಿಗಳು.
5. ಮಹಾಲೇಖಪಾಲರ ಕಛೇರಿಯ ಪ್ರತಿನಿಧಿಗಳು.

ಈ ಸಮಿತಿ ಸಭೆಗಳು ಮೊದಲು 2 ವರ್ಷಕ್ಕೊಮ್ಮೆ ಜರುಗುತ್ತಿದ್ದವು. ಆದರೆ 2007–08ನೇ ಸಾಲಿನಿಂದ ಪ್ರತಿವರ್ಷವೂ ನಡೆಯುತ್ತಿವೆ. ಅಡ್‌ಹಾಕ್ ಸಮಿತಿ ಸಭೆ ನಡೆಯುವ ದಿನಾಂಕಗಳನ್ನು ಮಹಾಲೇಖಪಾಲರು ವರ್ಷದ ಆರಂಭದಲ್ಲಿ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ತಿಳಿಸುತ್ತಾರೆ. ಅಡ್‌ಹಾಕ್ ಸಮಿತಿ ಸಭೆಗೆ ಮುನ್ನ, ಬಾಕಿ ಇರುವ ಆಡಿಟ್ ಆಕ್ಷೇಪಣೆಗಳಿಗೆ ಸೂಕ್ತ ಉತ್ತರಗಳನ್ನು ಒದಗಿಸುವ ಬಗ್ಗೆ ಮುಖ್ಯ ಲೆಕ್ಕಾಧಿಕಾರಿಗಳು ಸಂಬಂಧಪಟ್ಟ ಇಲಾಖಾಧಿಕಾರಿಗಳೊಂದಿಗೆ ಪೂರ್ವಭಾವಿಯಾಗಿ ಚರ್ಚಿಸಿ ಪೂರ್ವಸಿದ್ಧತೆಯನ್ನು ಮಾಡಿ ಕೊಳ್ಳುವಂತೆ ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 53 ಲೆಪಬಿ 2004 ದಿನಾಂಕ 19.6.2004ರಲ್ಲಿ ಸೂಚನೆಗಳನ್ನು ನೀಡಲಾಗಿದೆ. ತರುವಾಯ ಸಮಿತಿ ಸಭೆಯ ಮುಂದೆ ಸಲ್ಲಿಸಲಾದ ಉತ್ತರಗಳನ್ನು ಮಹಾಲೇಖಪಾಲರ ಕಛೇರಿಯ ಸಿಬ್ಬಂದಿಯು ಪರಿಶೀಲಿಸಿದ ನಂತರ ಯಾವ ಯಾವ ಕಂಡಿಕೆಗಳನ್ನು/ ಉತ್ತರಗಳನ್ನು ಒಪ್ಪಿ ಕೈಬಿಡಲಾಗಿದೆ ಎಂಬ ಮಾಹಿತಿಯನ್ನು ಜಿಲ್ಲಾ ಪಂಚಾಯತ್ ಕಚೇರಿಗೆ ತಿಳಿಸಲಾಗುತ್ತದೆ.

## 2.44 C & AG ಹೊರಡಿಸಿದ ಆಡಿಟ್ ವರದಿಯ ಮೇಲೆ ಕ್ರಮ:

ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಗೆ ಸಂಬಂಧಪಟ್ಟ ಪ್ರತ್ಯೇಕ ಆಡಿಟ್ ವರದಿಯನ್ನು C&AG ರವರು ಆರ್ಥಿಕ ಇಲಾಖೆಗೆ ನೀಡುತ್ತಾರೆ. ಆರ್ಥಿಕ ಇಲಾಖೆಯು ರಾಜ್ಯಪಾಲರ ಅನುಮೋದನೆ ಪಡೆದ ನಂತರ ವರದಿಯನ್ನು ವಿಧಾನಮಂಡಳದ ಉಭಯ ಸದನಗಳ ಮುಂದೆ ಮಂಡಿಸಲಾಗುತ್ತದೆ. ಆನಂತರ ಈ ವರದಿಯಲ್ಲಿನ ಪ್ರತಿಯೊಂದು ಕಂಡಿಕೆಗಳಿಗೆ ಸಂಬಂಧಪಟ್ಟ ಜಿಲ್ಲಾಪಂಚಾಯತಿಗಳಿಂದ ಹಾಗೂ ಇಲಾಖೆಗಳಿಂದ ಉತ್ತರಗಳನ್ನು ಪಡೆದು, ಕ್ರೋಡೀಕೃತ ಅನುಸರಣಾ ವರದಿಯನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಸಲ್ಲಿಸಲಾಗುತ್ತದೆ.

## 2.45 ಗ್ರಾಮ ಪಂಚಾಯತ್ ಲೆಕ್ಕಪತ್ರ ನಿರ್ವಹಣೆ :

ಗ್ರಾಮ ಪಂಚಾಯತಿಗಳ ಲೆಕ್ಕಪತ್ರ ನಿರ್ವಹಣೆಯು 2006ರ ಕರ್ನಾಟಕ ಪಂಚಾಯತ್‌ರಾಜ್ [ಗ್ರಾಮ ಪಂಚಾಯತ್ ಹಣಕಾಸು ಮತ್ತು ಲೆಕ್ಕಪತ್ರ] ನಿಯಮಗಳಿಗೆ ಒಳಪಟ್ಟಿದೆ. ಈ ಹೊಸ ನಿಯಮಗಳ ಅನುಸಾರ ಗ್ರಾಮ ಪಂಚಾಯತಿಗಳು ದಿನಾಂಕ 1.4.2007ರಿಂದ ಲೆಕ್ಕಪತ್ರ ದಾಖಲೆಗಳನ್ನು ಜೋಡಿ ನಮೂದು ಪದ್ಧತಿಯಲ್ಲಿ ನಿರ್ವಹಿಸಬೇಕಾಗಿರುತ್ತದೆ.

## 2.46 ಗ್ರಾಮ ಪಂಚಾಯತಿಗಳ ಬ್ಯಾಂಕ್ ವ್ಯವಹಾರ :

ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ, 1993ರ ಸೆಕ್ಷನ್212(3)ರ ಮೇರೆಗೆ, ಗ್ರಾಮ ಪಂಚಾಯತಿ ನಿಧಿಗೆ ಜಮೆಯಾಗುವ ಮೊತ್ತಗಳನ್ನು ತಾಲ್ಲೂಕಿನ ಸರ್ಕಾರಿ ಖಜಾನೆಯಲ್ಲಿ ಅಥವಾ ಕಾರ್ಯ ನಿರ್ವಾಹಕ ಅಧಿಕಾರಿಯ ಅನುಮೋದನೆ ಯೊಂದಿಗೆ ಪಂಚಾಯತ್ ಪ್ರದೇಶದಲ್ಲಿರುವ ಅಥವಾ ನೆರೆಯ ಪಂಚಾಯತಿ ಪ್ರದೇಶದಲ್ಲಿರುವ ಯಾವುದೇ ಅನುಸೂಚಿತ ಅಥವಾ ಸಹಕಾರಿ ಬ್ಯಾಂಕ್‌ನಲ್ಲಿಟ್ಟು ವ್ಯವಹರಿಸಬೇಕಾಗಿರುತ್ತದೆ. ಬ್ಯಾಂಕ್ ಉಳಿತಾಯ ಖಾತೆ ಕುರಿತು ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 129 ಗ್ರಾಪಂಕಾ 2002 ದಿನಾಂಕ 17.9.2002ರಲ್ಲಿ ಸೂಚನೆಗಳನ್ನು ನೀಡಲಾಗಿದೆ. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು,2006ರಲ್ಲಿನ ನಿಯಮ 10ರ ಮೇರೆಗೆ, ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳು ನಿಧಿ ಖಾತೆಗಳನ್ನು ಜಂಟಿಯಾಗಿ ಸಹಿಮಾಡಿ, ನಿರ್ವಹಿಸಬೇಕಾಗಿರುತ್ತದೆ. ಅಲ್ಲದೆ, ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 129 ಗ್ರಾಪಂಕಾ 2002 ದಿನಾಂಕ 6.12.2003ರಲ್ಲಿ ಮುಖ್ಯವಾಗಿ 2 ಬ್ಯಾಂಕ್ ಖಾತೆಗಳನ್ನು ತೆರೆಯಲು ಸೂಚನೆಗಳನ್ನು ನೀಡಲಾಗಿದೆ :

**ಗ್ರಾಮ ಪಂಚಾಯತಿ ನಿಧಿ ಖಾತೆ-1 :** ಈ ಖಾತೆಗೆ ಸರ್ಕಾರದಿಂದ ಬಿಡುಗಡೆಯಾಗುವ ಶಾಸನಬದ್ಧ ಅನುದಾನ, ಅಭಿವೃದ್ಧಿ ಅನುದಾನ ಮತ್ತು ಮುಕ್ತ ಅನುದಾನಗಳನ್ನು ಜಮಾ ಮಾಡಬೇಕು. ಈ ಖಾತೆಗೆ ಬೇರೆ ಯಾವುದೇ ಅನುದಾನವನ್ನೂ ಜಮೆ ಮಾಡುವಂತಿಲ್ಲ.

**ಗ್ರಾಮ ಪಂಚಾಯತಿ ನಿಧಿ ಖಾತೆ-2 :** ಗ್ರಾಮ ಪಂಚಾಯತಿಗಳು ತಮ್ಮ ಸ್ವಂತ ನಿಧಿಯನ್ನು ಅಂದರೆ ತಾವು ವಿಧಿಸಿ, ವಸೂಲಿ ಮಾಡುವ ತೆರಿಗೆ, ಫೀಜುಗಳು ಇತ್ಯಾದಿ ಹಣವನ್ನು ಈ ಖಾತೆಗೆ ಜಮೆ ಮಾಡಿಕೊಂಡು ನಿರ್ವಹಿಸಬೇಕು.

## 2.47 ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನೆ :

ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ, 1993ರ ಸೆಕ್ಷನ್246(1)ರ ಮೇರೆಗೆ, ಗ್ರಾಮ ಪಂಚಾಯತ್ ನಿಧಿ ಲೆಕ್ಕಗಳ ಲೆಕ್ಕಪರಿಶೋಧನೆಯನ್ನು ರಾಜ್ಯ ಲೆಕ್ಕಪತ್ರ ಇಲಾಖೆಯ ನಿಯಂತ್ರಕರ ಪರವಾಗಿ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳ ಸಹಾಯಕ ನಿಯಂತ್ರಕರು ಪ್ರತಿವರ್ಷ ಕೈಗೊಳ್ಳುತ್ತಾರೆ; ಮತ್ತು ಆಡಿಟ್ ವರದಿಯನ್ನು ಸಮಬಂಧಪಟ್ಟ ಗ್ರಾಮ ಪಂಚಾಯತಿಗೆ ಹಾಗೂ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗೆ ಕಳುಹಿಸುತ್ತಾರೆ.

## 2.48 ಗ್ರಾ.ಪಂ.ಆಡಿಟ್ ಅಡ್‌ಹಾಕ್ ಸಮಿತಿ ರಚನೆ:

ಅಧಿನಿಯಮದ ಸೆಕ್ಷನ್ 246 (6 ಮತ್ತು 7)ರ ಮೇರೆಗೆ, ಲೆಕ್ಕಪರಿಶೋಧಕರಿಂದ ಸ್ವೀಕೃತವಾದ ಆಡಿಟ್ ವರದಿಯಲ್ಲಿ ತೋರಿಸಲಾದ ಲೋಪದೋಷ ಹಾಗೂ ಅಕ್ರಮಗಳ ಮೇಲೆ ಗ್ರಾಮ ಪಂಚಾಯತಿಯು 3 ತಿಂಗಳೊಳಗೆ ಸೂಕ್ತ ಕ್ರಮ ಕೈಗೊಂಡು, ಅವುಗಳನ್ನು ಸರಿಪಡಿಸಿ, ಅನುಸರಣೆಗಳನ್ನು ಕಾರ್ಯನಿರ್ವಾಹಕ ಅಧಿಕಾರಿಗೆ ತಿಳಿಸಬೇಕು. ಕಾರ್ಯನಿರ್ವಾಹಕ ಅಧಿಕಾರಿಯು ಅಂತಹ ಅನುಸರಣೆಗಳನ್ನು ಲೆಕ್ಕಪರಿಶೋಧಕ ರೊಂದಿಗೆ ಸಮಾಲೋಚಿಸಿ, ಅವುಗಳನ್ನು ಒಪ್ಪಿಕೊಂಡು ಆಕ್ಷೇಪಣೆಯಿಂದ ಕೈಬಿಡಲು ಆದೇಶಿಸಬಹುದು; ಅಥವಾ ಆಕ್ಷೇಪಣೆಯನ್ನು ಮರುಪರಿಶೀಲಿಸುವಂತೆ ಲೆಕ್ಕಪರಿಶೋಧಕರಿಗೆ ತಿಳಿಸಬಹುದು; ಅಥವಾ ಆಡಿಟ್ ಆಕ್ಷೇಪಣೆ ಬಗ್ಗೆ ಸಮರ್ಪಕ ಕ್ರಮ ಕೈಗೊಳ್ಳುವಂತೆ ಗ್ರಾಮ ಪಂಚಾಯತಿಗೆ ನಿರ್ದೇಶನ ನೀಡಬಹುದಾಗಿದೆ. ಈ ಸಂಬಂಧ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಗ್ರಾಅಪ 80 ಎಎಆರ್ 2000 ದಿನಾಂಕ 14.5.2001 ರಲ್ಲಿ ಆಡಿಟ್ ಆಕ್ಷೇಪಣೆಗಳ ತೀರುವಳಿಗಾಗಿ ತಾಲ್ಲೂಕು ಪಂಚಾಯತಿ ಮಟ್ಟದಲ್ಲಿ ಒಂದು ಅಡ್‌ಹಾಕ್ ಸಮಿತಿಯನ್ನು ರಚಿಸಲಾಗಿದೆ :

1. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ – ಅಧ್ಯಕ್ಷರು
2. ಸಹಾಯಕ ನಿಯಂತ್ರಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ – ಸದಸ್ಯರು
3. ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್ – ಸದಸ್ಯರು
4. ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕು ಪಂಚಾಯತ್ – ಸದಸ್ಯರು
5. ಸಂಬಂಧಪಟ್ಟ ಗ್ರಾಮ ಪಂಚಾಯತಿಗಳ ಕಾರ್ಯದರ್ಶಿಗಳು – ಸದಸ್ಯರು

ಸದರಿ ಸಮಿತಿಯು ಕನಿಷ್ಟ 3 ತಿಂಗಳಿಗೊಮ್ಮೆ ಸಭೆ ಸೇರಿ ಬಾಕಿ ಇರುವ ಆಕ್ಷೇಪಣೆಗಳ ತೀರುವಳಿಗೆ ಕ್ರಮ ಕೈಗೊಳ್ಳಬೇಕು.

## 2.49 ಗ್ರಾಮ ಪಂಚಾಯತ್: ಹಣ ದುರುಪಯೋಗದ ಪ್ರಕರಣಗಳ ಮೇಲೆ ಕ್ರಮ:

ಅಧಿನಿಯಮದ ಸೆಕ್ಷನ್ 246(8)ರ ಮೇರೆಗೆ, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಯು ಆಡಿಟ್ ವರದಿಯನ್ನು ಆಧರಿಸಿ, ಕಾನೂನು ಬಾಹಿರವಾದ ವೆಚ್ಚಕ್ಕೆ ಮಂಜೂರಾತಿ ನೀಡಿದ ಅಥವಾ ಅಂತಹ ವೆಚ್ಚವನ್ನು ಪಾವತಿ ಮಾಡಿದ ಸಂಬಂಧಪಟ್ಟ ವ್ಯಕ್ತಿಯಿಂದ ವಿವರಣೆಯನ್ನು ಪಡೆದು, ಅಥವಾ ವಿಚಾರಣೆ ನಡೆಸಿದ ನಂತರ ಅಂತಹ ವ್ಯಕ್ತಿಯನ್ನು ಹೊಣೆಗಾರನ್ನಾಗಿ (Surcharge) ಮಾಡಿ. ನೋಟೀಸನ್ನು ನೀಡಬೇಕಾಗಿರುತ್ತದೆ. ಅಂತಹ ವ್ಯಕ್ತಿಯು 30 ದಿನಗಳೊಳಗಾಗಿ ಹಣ ಭರಣಾ ಮಾಡಬೇಕು. ಇಲ್ಲದಿದ್ದಲ್ಲಿ, ಪಾವತಿಸಬೇಕಾದ ಮೊತ್ತದ ಮೇಲೆ ಶೇಕಡಾ 15 ರಂತೆ ಬಡ್ಡಿಯನ್ನು ವಿಧಿಸಿ, ವಸೂಲಾತಿ ವೆಚ್ಚವನ್ನೂ ಸೇರಿಸಿ ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡಬೇಕಾಗಿರುತ್ತದೆ.

## 2.50 ಗ್ರಾ. ಪಂ. ಲೆಕ್ಕಪರಿಶೋಧನಾ ಮುಖ್ಯಾಂಶಗಳ ವರದಿ:

ಅಧಿನಿಯಮದ ಸೆಕ್ಷನ್ 246(11)ರ ಮೇರೆಗೆ, ಗ್ರಾಮ ಪಂಚಾಯತ್ ಆಡಿಟ್ ವರದಿಗಳಲ್ಲಿ ಮಾಡಲಾದ ಪ್ರಮುಖ ಪರಿವೀಕ್ಷಣೆಗಳ ಸಾರಾಂಶದ ವರದಿಯನ್ನು ಮತ್ತು ಗ್ರಾಮ ಪಂಚಾಯತಿಗಳು ಇತ್ಯರ್ಥಪಡಿಸಿದ ಆಕ್ಷೇಪಣೆಗಳ ಮಾಹಿತಿಯನ್ನು ರಾಜ್ಯ ಲೆಕ್ಕಪತ್ರ ಇಲಾಖೆಯ ನಿಯಂತ್ರಕರು ಸರ್ಕಾರಕ್ಕೆ ಸಲ್ಲಿಸುತ್ತಾರೆ.

*(ಮುಗಿಯಿತು)*

# ಪರಿಸರ ನಿರ್ವಹಣ ಮಾರ್ಗಸೂಚಿ

## III ಕಾಲುವೆ ದಂಡೆಗಳನ್ನು ಬಲಿಷ್ಟಗೊಳಿಸುವುದು

| ಪರಿಸರಕ್ಕೆ ಧಕ್ಕೆಖಿುಖಿಟು ಮಾಡುವ ಅಖಿಶಗಳು | ನಿವಾರಣಾ ಕ್ರಮಗಳು |
|---|---|
| • ನಾಲಾಬದುಗಳಲ್ಲಿ ಉಖಿಟಾಗುವ ಭೂ ಸವಕಳಿ. | • ಭೂ ಸವಕಳಿಖಿುನ್ನು ತಡೆಖಿುಲು ದಖಿಡೆಗಳನ್ನು ಪುನರ್ ನಿರ್ಮಾಣ ಮಾಡಬೇಕು. (ಉದಾ: ಪ್ಲಾಖಿಟೇಷನ್, ಕಲ್ಲುಗಳೊಖಿದಿಗೆ ಸಾಲುಗಳ ನಿರ್ಮಾಣ ಇನ್ನಿತರ) |
| • ಕಾಲುವೆಗಳ ಅಣೆಕಟ್ಟು / ಖಿಡ್ಡು/ ಏರಿಗಾಗಿ ಮಣ್ಣನ್ನು ತುಖಿಬಿಸಲು ಮಣ್ಣನ್ನು ಪಡೆಖಿುವ ಸ್ಥಳದಲ್ಲಿ ಉಖಿಟಾಗುವ ಪರಿಣಾಮಗಳು. | • ಕಟ್ಟೆ, ಏರಿ, ಖಿಡ್ಡು, ಅಣೆಕಟ್ಟುಗಳಿಖಿದ 1.5 ಮೀಟರಿನೊಳಗೆ ಮಣ್ಣನ್ನು ತೆಗೆಖಿುವುದನ್ನು ತಪ್ಪಿಸಬೇಕು. ಕೃಷಿ ಭೂಮಿ, ಹುಲ್ಲುಗಾವಲು, ಜನವಸತಿಗಳಿಖಿದ 0.8 ಕಿ.ಮೀ ನೊಳಗೆ ಮತ್ತು ಪರಿಸರದಲ್ಲಿ ಸೂಕ್ಷ್ಮವಾಗಿರುವ ಪ್ರದೇಶಗಳಾದ ನೀರಾವರಿ ಜಮೀನು, ಹೊಳೆ, ಹಳ್ಳ, ನದಿ, ತೊರೆ ಮತ್ತು ಅಸ್ಥಿರವಾದ ಗುಡ್ಡ ಪ್ರದೇಶಗಳಿಖಿದ ಮಣ್ಣನ್ನು ತೆಗೆಖಿುಬಾರದು.<br>• ಗುಖಿಡಿ / ಹಳ್ಳಗಳ ಆಳವು 45 ಸೆ.ಮೀ ಗಿಖಿತ ಹೆಚ್ಚಿರಬಾರದು.<br>• ಸುವ್ಯವಸ್ಥಿತ ಚರಖಿಡಿ ನಿರ್ಮಾಣಕ್ಕಾಗಿ, ಕಲ್ವರ್ಟುಗಳು ಆಥವಾ ಸೇತುವೆಗಳನ್ನು ಅಗತ್ಯಕ್ಕೆ ತಕ್ಕಖಿತೆ ನಿರ್ಮಿಸಲು ಅವಕಾಶ ಮಾಡಿಕೊಳ್ಳಬೇಕು. ಪಖಿಚಾಖಿುತ್ ರಾಜ್ ಇಖಿಜಿನಿಖಿುರಿಖಿಗ್ ಇಲಾಖೆಯಿಖಿದ ತಾಖಿತ್ರಿಕ ಬೆಖಿಬಲ ಪಡೆಖಿುವುದು. |
| • ಬಾಲಕಾರ್ಮಿಕರ ಖಿಳಗೊಳ್ಳುವಿಕೆ. | • ಬಾಲಕಾರ್ಮಿಕರನ್ನು ಕೆಲಸಕ್ಕೆ ಸೇರಿಸಿಕೊಳ್ಳಬಾರದು. |

* ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಎಂ.ಎಸ್.ಐ.ಎಲ್. ಕಟ್ಟಡ, 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು.

## IV ನೀರಾವರಿ ಕಾಲುವೆಗಳು – ಭೂಮಿಯನ್ನು ಅಗೆಯುವುದು ಮತ್ತು ನಿರ್ವಹಣೆ

| ಪರಿಸರಕ್ಕೆ ಧಕ್ಕೆಯುಂಟು ಮಾಡುವ ಅಂಶಗಳು | ನಿವಾರಣಾ ಕ್ರಮಗಳು |
|---|---|
| • ಅಸಮರ್ಪಕ ಇಳಿಜಾರಿನಿಂದಾಗಿ ಕೊನೆಯ ಸ್ಥಳಕ್ಕೆ ಕಡಿಮೆ ನೀರು ಸರಬರಾಜು ಆಗುವುದು. | • ನೀರು ಕೊನೆಯ ಸ್ಥಳದವರೆಗೆ ಸುಲಭವಾಗಿ ಹರಿದು ಹೋಗುವಂತಾಗಲು ಇಳಿಜಾರನ್ನು ಮಾಡುವುದು.<br>• ಮಣ್ಣಿನ ಸವಕಳಿಯನ್ನು ತಪ್ಪಿಸಲು ಏರಿ, ಕಟ್ಟೆ ,ಬದುಗಳನ್ನು ಪುನರ್ ನಿರ್ಮಿಸುವುದು. |
| • ಅಸ್ಥಿರವಾದ ಭೂಮಿಯ ಏರಿ, ಕಟ್ಟೆ ಬದು ಗಳಿಂದಾಗುವ ಭೂ ಸವಕಳಿ. | • ಭೂಸವಕಳಿಯನ್ನುತಡೆಯಲು ದಂಡೆಗಳನ್ನು ಪುನರ್‌ನಿರ್ಮಾಣ ಮಾಡಬೇಕು (ಉದಾ: ಪ್ಲಾಂಟೇಷನ್, ಕಲ್ಲುಗಳೊಂದಿಗೆ ಸಾಲುಗಳ ನಿರ್ಮಾಣ ಇನ್ನಿತರ) |
| • ಮರಗಳನ್ನು ಕಡಿಯುವುದು. | • ಒಂದು ಮರ ಕಡಿದಲ್ಲಿ ಅದಕ್ಕೆ ಪ್ರತಿಯಾಗಿ ಕನಿಷ್ಟ ಎರಡಕ್ಕಿಂತ ಹೆಚ್ಚು ಸಸಿಗಳನ್ನು ನೆಡಬೇಕು. |
| • ಮಣ್ಣಿನ ಮೇಲ್ಮೈಯ ಫಲವತ್ತತೆ ನಾಶ ವಾಗುವುದು. | • ಕೃಷಿ ವಿಜ್ಞಾನಕೇಂದ್ರ ಅಥವಾ ಕೃಷಿಇಲಾಖೆಯಿಂದ ತಾಂತ್ರಿಕ ಸಹಾಯವನ್ನು ಪಡೆಯುವುದು.<br>• ಅಧಿಕವಾದ ಮಣ್ಣನ್ನು ಯೋಗ್ಯವಾದ ಕ್ರಮದಲ್ಲಿ ಬಳಸಿಕೊಳ್ಳಬೇಕು, ಆಥವಾ ನೀರು ನಿಲ್ಲದಂತೆ ಅದನ್ನು ವಿಲೇವಾರಿ ಮಾಡಬೇಕು. |

*(ಮುಂದುವರೆಯುತ್ತದೆ)*

---

“ತಪ್ಪುಗಳು ನಮ್ಮ ಅನುಭವಗಳನ್ನು ಹೆಚ್ಚಿಸುತ್ತವೆ ಮತ್ತು
ಅನುಭವಗಳು ನಮ್ಮ ತಪ್ಪುಗಳನ್ನು ಕಡಿಮೆಗೊಳಿಸುತ್ತವೆ”.
ನಾವು ನಮ್ಮ ತಪ್ಪುಗಳಿಂದ ಕಲಿಯುತ್ತೇವೆ.
ಹಾಗೆಯೇ ನಮ್ಮ ಯಶಸ್ಸಿನಿಂದ ಬೇರೆಯವರು ಕಲಿಯುತ್ತಾರೆ.
ಆದ್ದರಿಂದ ಜೀವನವನ್ನು ಸರಳವಾಗಿಸಿಕೊಳ್ಳೋಣ.

– ಎಸ್ಸೆಮ್ಮೆಸ್

# ಅಡುಗೆ ಮನೆ ತ್ಯಾಜ್ಯ ಆಧಾರಿತ ಜೈವಾನಿಲ

– ಶೀತಲ್ ಎನ್. ಸಿಂಗ್*

ಅಡುಗೆ ತ್ಯಾಜ್ಯ ಆಧಾರಿತ ಜೈವಾನಿಲ ಘಟಕವು ಯಾವುದೇ ಹೊಗೆ ಅಥವಾ ಮಸಿಯನ್ನು ಉತ್ಪಾದಿಸದೆ ಮಿಥೇನ್ ನೀಲಿ ಜ್ವಾಲೆಯಾಗಿ ಉರಿಯುತ್ತದೆ. ಹೀಗಾಗಿ ಇದೊಂದು ಪರಿಸರ–ಸ್ನೇಹಿ ಅಡುಗೆ ವ್ಯವಸ್ಥೆ.

ಜೈವಾನಿಲ ಘಟಕವು ಜೈವಿಕವಾಗಿ ಅವನತಿಖಿಯಾಗುವ ತ್ಯಾಜ್ಯಗಳಾದ ಅಡುಗೆ ತ್ಯಾಜ್ಯ, ಕಾಗದ, ಹುಲ್ಲು, ಸೆಗಣಿ, ಹಿಖಿಡಿ ಹಾಗೂ ಖಿಣ/ಹಸಿ ಎಲೆಗಳನ್ನು ಸಖಿಸ್ಕರಿಸಬಲ್ಲದು. ಇದರಿಖಿದಾಗಿ ಖಿಯಾವುದೇ ಕಸ ಉಳಿಖಿಯುದೆ ಸಖಿಪೂರ್ಣ ಸಖಿಸ್ಕರಣವಾಗುವುದು ಹಾಗೂ ಅಧಿಕ ಗುಣ ಮಟ್ಟದ ಗೊಬ್ಬರ ಮತ್ತು ಮಿಥೇನ್ ಅನಿಲವನ್ನು ಖಿದಗಿಸುತ್ತದೆ. ಅಖಿತಹ ತ್ಯಾಜ್ಯಗಳಿಖಿದ ಉತ್ಪಾದಿತ ಕಸ ರಹಿತ ಗೊಬ್ಬರವು ಅಧಿಕ ಸಾರಜನಕ ಅಖಿಶಗಳನ್ನುಖಿಳಗೊಖಿಡಿರುತ್ತದೆ ಮತ್ತು ಉತ್ಕೃಷ್ಟ ಗುಣಮಟ್ಟದ ಮಣ್ಣು ಉಖಿಟಾಗುತ್ತದೆ. ಅಡುಗೆ ಮನೆ, ದೊಡ್ಡ ದೊಡ್ಡ ಆಸ್ಪತ್ರೆ, ಕ್ಯಾಖಿಟೀನ್‌ಗಳು, ಹೋಟೇಲ್ಸ್, ಕೈಗಾರಿಕೆಗಳು, ವಾಸ-ಸಮುಚ್ಛಖಿಯಗಳಲ್ಲಿ ಉತ್ಪಾದಿತವಾಗುವ ಹಸಿ-ತ್ಯಾಜ್ಯ ಗಳನ್ನು ಪರಿಸರ-ಸ್ನೇಹಿ ವಿಲೇವಾರಿ ಮಾಡುವುದಕ್ಕಾಗಿ ಈ ಘಟಕವನ್ನು ಸ್ಥಾಪಿಸಬಹುದಾಗಿದೆ.

ಈ ರೀತಿ ತ್ಯಾಜ್ಯ ಸಖಿಸ್ಕರಣೆ ಮಾಡುವ ತಖಿತ್ರಜ್ಞಾನವು ಪಟ್ಟಣ ಪ್ರದೇಶಗಳಲ್ಲಿ ಘನ ತ್ಯಾಜ್ಯ ನಿರ್ವಹಣೆ ಸಮಸ್ಯೆಗಳನ್ನು ಬಗೆಹರಿಸುವ ಅಧಿಕ ಸಾಮರ್ಥ್ಯ ಹೊಖಿದಿದ ಘಟಕವಾಗಿದ್ದು. ಇದು ಸಾವಖಿಯವ ಗೊಬ್ಬರವನ್ನು



* ಪ್ರಬಂಧಕರು, ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಶ್ರೀರಾಮಪುರ ಕ್ರಾಸ್, ಜಕ್ಕೂರು, ಬೆಂಗಳೂರು – 560 064.


ಖಿದಗಿಸುತ್ತದೆ ಮತ್ತು ಇಖಿಧನವಾಗಿ ಜೈವಾನಿಲ ವನ್ನು ಖಿದಗಿಸುತ್ತದೆ.

ವಿಶ್ವದಾದ್ಯಖಿತ ಎದುರಿಸುತ್ತಿರುವ ಬೃಹತ್ ಸಮಸ್ಯೆಗಳಲ್ಲಿ ತ್ಯಾಜ್ಯ ವಿಲೇವಾರಿಖಿಯುದೂ ಸಹ ಖಿಖಿದು ಬೃಹತ್ ಸಮಸ್ಯೆಖಿಯಾಗಿದೆ. ಪ್ರಕೃತಿಖಿಯ ಸಖಿರಕ್ಷಣೆಗಾಗಿ ಇರಬೇಕಾದ ಅತಿ ಪ್ರಮುಖವಾದ ಕಾನೂನೆಖಿದರೆ ಸಖಿರಕ್ಷಣಾ ಕಾನೂನು ಈ ಕಾನೂನಿನ ಪ್ರಕಾರ ತ್ಯಾಜ್ಯ ಖಿಖಿದು ಸಮಸ್ಯೆಖಿಯೇ ಅಲ್ಲ. ಈಗ ಇರುವ ಹಲವಾರು ಸಮಸ್ಯಾ ವೃತ್ತದ ಖಿಖಿದು ಭಾಗವಷ್ಟೆ.

ನಮ್ಮ ದೇಶದಲ್ಲಿ ದಿನಖಿಪ್ರತಿ ಪ್ರತಿ ಖಿಬ್ಬ ಮನುಷ್ಯನಿಖಿದ ಸುಮಾರು 300 ಗ್ರಾಖಿ.. ನಿಖಿದ 500 ಗ್ರಾಖಿ.. ತ್ಯಾಜ್ಯವು ಉತ್ಪಾದಿತವಾಗುತ್ತದೆ. ಈ ಬೃಹತ್ ಪ್ರಮಾಣದ ತ್ಯಾಜ್ಯದ ಬಗ್ಗೆ ಎಚ್ಚರಿಕೆಯಿಖಿದ ವಿಶ್ಲೇಷಿಸಿದರೆ, ಲೋಹ ಮತ್ತು ಕಾಗದದಖಿತಹ ತ್ಯಾಜ್ಯಗಳಿಖಿದ ಪುನರ್-ಉತ್ಪಾದನೆ ಸಾಧ್ಯವಿದೆ. ಜೈವಿಕ ತ್ಯಾಜ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಿದರೆ ಪ್ರಾಕೃತಿಕ ಸಮತೋಲನ ವನ್ನು ಕಾಪಾಡಿಕೊಳ್ಳಬಹುದು. ಈ ಮೂಲಕ ಪ್ರಕೃತಿಯಿಖಿದ ಹೆಚ್ಚಿನ ಕೊಡುಗೆಖಿಯನ್ನು ನಿರೀಕ್ಷಿಸಬಹುದಾಗಿದೆ.

ಜೈವಿಕವಾಗಿ ನಾಶಹೊಖಿದಿದಖಿತಹ ತ್ಯಾಜ್ಯಗಳ ವಿಲೇವಾರಿಖಿಯನ್ನು ದಹನಗೊಳಿಸುವುದು, ಗುಖಿಡಿಗೆ ತುಖಿಬುವುದು, ಸಮುದ್ರಕ್ಕೆ ಎಸೆಖಿಯುವುದು ಅಥವಾ ಇತರೆ ನೀರಿನ ಮೂಲಗಳಿಗೆ ಬಿಸಾಡುವುದು... ಈ ತರಹದ ವಿಧಾನಗಳಿಖಿದ ಮಾಡಬಹುದು ಸದರಿ ವಿಧಾನಗಳು ತಮ್ಮದೇ ಆದ ಅಪಾಖಿಯವನ್ನು ಹೊಖಿದಿವೆ. ದಹನಗೊಳಿಸುವಿಕೆಖಿಯ ಉಸಿರಾಡದ ಖಾಯಿಲೆಗೆ ದಾರಿ ಮಾಡಿಕೊಡುವುದು. ಈ ರೀತಿ ಅಪಾಖಿಯಗಳನ್ನು ತಪ್ಪಿಸುವ ನಿಟ್ಟಿನಲ್ಲಿ ಹಲವು ವಿಧಾನಗಳನ್ನು ಅನುಸರಿಸಲಾಗಿದೆ. ಅಖಿತಹ ಖಿಖಿದು ವಿಧಾನವೆಖಿದರೆ ARTI ಮಾದರಿಖಿಯ ಖಿಖಿದು ಜೈವಾನಿಲ ಘಟಕ. ಇದು ನಿರ್ವಹಣೆ ಮತ್ತು ಬಳಕೆ ವಿಷಖಿಯದಲ್ಲಿ ತುಖಿಬಾ ತೃಪ್ತಿಕರವಾಗಿ ಕೆಲಸ ನಿರ್ವಹಿಸುತ್ತಿರುವುದು ದೃಢಪಟ್ಟಿದೆ. ಇದಕ್ಕೆ ಮುಖ್ಯವಾಗಿ ಅಡುಗೆ ತ್ಯಾಜ್ಯವು ಕಚ್ಚಾ ಸಾಮಗ್ರಿಖಿಯಾಗಿ ಅವಶ್ಯವಿದ್ದು, ಈ ಘಟಕವನ್ನು ಪಟ್ಟಣ ಪ್ರದೇಶ/ಕಲ್ಯಾಣಮಖಿಟಪಗಳು/ಮನೆಗಳು/ ಅಪಾರ್ಟ್‌ಮೆಖಿಟ್‌ಗಳು ಮತ್ತು ಫಾರ್ಮ್ ಹೌಸ್‌ಗಳಲ್ಲಿ ಸ್ಥಾಪಿಸಬಹುದಾಗಿದೆ. ಖಿಯಖಿತ್ರರಚನೆ ಸರಳವಾಗಿದ್ದು ನಿರ್ವಹಣೆಖಿಯೂ ಸರಳ. ಖಿಖಿದೇ ಮಾತಿನಲ್ಲಿ ಹೇಳುವುದಾದರೆ ಖಿಯಖಿತ್ರ ಚಾಲನೆಖಿಯಲ್ಲಿ ಖಿಯಾವುದೇ ಅಡೆ-ತಡೆ ಇರುವುದಿಲ್ಲ.

ಈ ಜೈವಾನಿಲ ಘಟಕದಲ್ಲಿ ಬ್ಯಾಕ್ಟೀರಿಖಿಯಾ ಸಹಾಖಿಯದೊಖಿದಿಗೆ ಏರ್‌ಟೈಟ್ ಟ್ಯಾಖಿಕಿನಲ್ಲಿ ಸಾವಖಿಯವ ಪದಾರ್ಥಗಳನ್ನು/ತ್ಯಾಜ್ಯಗಳನ್ನು ಜೈವಾನಿಲ ಆಗಿ ವಿಘಟಿಸಬಹುದು. ಸಖಿಸ್ಕರಣಾ ಸಮಖಿಯದಲ್ಲಿ ಉತ್ಪಾದಿತ ಅನಿಲವು ಪ್ರಧಾನವಾಗಿ ಇಖಿಗಾಲದ-ಡೈ-ಆಕ್ಸೈಡ್ ಮಿಶ್ರಿತ ಆಗಿರುತ್ತದೆ ಮತ್ತು ಇದನ್ನು ಇನ್ನಿತರ ಉದ್ದೇಶಗಳಿಗಾಗಿ ಬಳಸಬಹುದು. ನಖಿತರ ಉಳಿಕೆಖಿಯಾಗುವ ಘನ ಶೇಷವನ್ನು ಸಾವಖಿಯವ ಗೊಬ್ಬರವಾಗಿ ಬಳಸಬಹುದು.






## ಮಹಾತ್ಮಗಾಂಧಿ ಸಂಸ್ಥೆಯಲ್ಲಿರುವ ಅಡುಗೆ ತ್ಯಾಜ್ಯ ಆಧಾರಿತ ಜೈವಾನಿಲ ಘಟಕ

ನಮ್ಮ ಮಹಾತ್ಮಗಾಖಿಧಿ ಸಖಿಸ್ಥೆಖಿುಲ್ಲಿ ಅಡುಗೆ ತ್ಯಾಜ್ಯ ಆಧಾರಿತ ಜೈವಾನಿಲ ಘಟಕವು ಖಿುಾವುದೇ ಹೊಗೆ ಅಥವಾ ಮಸಿಖಿುನ್ನು ಉತ್ಪಾದಿಸದೆ ಮಿಥೇನ್ ನೀಲಿ ಜ್ವಾಲೆಖಿುಾಗಿ ಉರಿಖಿುುತ್ತದೆ. ಹೀಗಾಗಿ ಇದೊಖಿದು ಪರಿಸರ-ಸ್ನೇಹಿ ಅಡುಗೆ ವ್ಯವಸ್ಥೆ. ಹೀಗೆ ಇದು ಪಟ್ಟಣ ಪ್ರದೇಶಗಳಲ್ಲಿ ವಾಸಿಸುವ ಸಖಿಸಾರಗಳು ಹಸಿ ತ್ಯಾಜ್ಯ ಬಳಕೆ ಮಾಡಲು ಉಪಖಿುೋಗಿ ಮಾತ್ರವಲ್ಲ : ಕಟ್ಟಿಗೆ ಉರಿಸುವುದ ರಿಖಿದ ಹೊರಹೊಮ್ಮುವ ಹೊಗೆ/ಕಪ್ಪು ಕಣ/ಧೂಳು ಇತ್ಯಾದಿ....ಗಳಿಖಿದ ಉಖಿಟಾಗುವ ರೋಗಗಳನ್ನು ತಡೆಗಟ್ಟಲೂ ಸಹ ಉಪಖಿುೋಗಿ ಖಿುಾಗಿದೆ. ಮುಖಿದುವರಿದಖಿತೆ ಮಾಲಿನ್ಯ ಕಡಿತ ಮತ್ತು ಇಖಿಧನ ಕ್ಷಮತೆ ಸಾಧ್ಯ. ಪಳೆಖಿುುಳಿಕೆ ಇಖಿಧನಗಳ ಬದಲಾಗಿ ಉಪಖಿುೋಗಿತ ಈ ವ್ಯವಸ್ಥೆಯಿಖಿದಾಗಿ ಹಸಿರುಮನೆ ಇಖಿಧನಗಳ ಹೊರಸೂಸುವಿಕೆ ಕಡಿತವಾಗುತ್ತದೆ. ಮುಖಿದುವರಿಖಿುುತ್ತಿರುವ ರಾಷ್ಟ್ರಗಳಲ್ಲಿನ ಅಖಿದಾಜಿನಖಿತೆ ಪಟ್ಟಣ ಪ್ರದೇಶಗಳಲ್ಲಿ ವಾಸಿಸುವ ಮನೆಗಳಲ್ಲಿ ಉತ್ಪಾದಿತ ಜೈವಾನಿಲವು 100 ಕಿ.ಗ್ರಾಖಿ. ನಷ್ಟು ಎಲ್.ಪಿ.ಜಿ ಅಥವಾ 250 ಲೀ.,ನಷ್ಟು ಸೀಮೆಎಣ್ಣೆಖಿುನ್ನು ಪ್ರತಿ ವರ್ಷ ಉಳಿಸುತ್ತದೆ. ಇದು ವಾರ್ಷಿಕ 300 ಕಿ.ಗ್ರಾಖಿ.ನಿಖಿದ 600 ಕಿ.ಗ್ರಾಖಿ.ನಷ್ಟು ಇಖಿಗಾಲದ ಡೈ ಆಕ್ಸೈಡ್‌ಗೆ ಸರಿಸಮವಾಗುತ್ತದೆ. ಗ್ರಾಮೀಣ ಸಖಿಸಾರ ಗಳು ಪ್ರತಿ ವರ್ಷ 3 ಟನ್ನಷ್ಟು ಕಟ್ಟಿಗೆಖಿುನ್ನು ಉಳಿಸ ಬಲ್ಲದಾಗಿದ್ದು, ಈ 3 ಟನ್ ಕಟ್ಟಿಗೆ ಉರಿದರೆ ಸುಮಾರು 5ಟನ್ನಷ್ಟು ಇಖಿಗಾಲದ-ಡೈ-ಆಕ್ಸೈಡ್ ಉತ್ಪಾದಿತವಾಗುತ್ತದೆ.

## ಇದು ಹೇಗೆ ಕೆಲಸ ಮಾಡುತ್ತದೆ?

ಈ ಚಿಕ್ಕ ಚೊಕ್ಕದಾದ ಘಟಕವನ್ನು ಅಧಿಕ ಸಾಖಿದ್ರತೆಖಿುುಳ್ಳ ಪಾಲಿಥಿನ್ ವಾಟರ್ ಟ್ಯಾಖಿಕುಗಳಿಖಿದ ನಿರ್ಮಿಸಲಾಗಿದೆ. ಈ ಮಾದರಿ ಘಟಕವು 2 ಟ್ಯಾಖಿಕು ಗಳನ್ನು ಹೊಖಿದಿದ್ದು. 0.75 M3 ಮತ್ತು 1M3 ಘನವುಳ್ಳದ್ದಾಗಿದೆ. ಚಿಕ್ಕ ಟ್ಯಾಖಿಕು ಗ್ಯಾಸ್ ಹೋಲ್ಡರ್ ಆಗಿದೆ ಮತ್ತು ಇದನ್ನು ದೊಡ್ಡ ಹೋಲ್ಡರ್ ಮೇಲೆ ಜೋರಲು ಹಾಕಲಾಗಿದೆ. ದೊಡ್ಡ ಟ್ಯಾಖಿಕು ವಿಘಟಿತ ಗೊಳ್ಳಬಲ್ಲ ಕಚ್ಚಾ ಮಿಶ್ರಣ ಮತ್ತು ನೀರು (ಸ್ಲರಿ) ಹೊಖಿದಿರುತ್ತದೆ. ಕಚ್ಚಾ ಸಾಮಾಗ್ರಿ ದೂಡಲು ಖಿಖಿದು ಖಿಳಮಾರ್ಗವನ್ನು ಖಿದಗಿಸಲಾಗಿದೆ ಮತ್ತು ಹೆಚ್ಚುವರಿ ಮಿಶ್ರಣವನ್ನು ಘಟಕದೊಳಗೆ ಪುನರ್ ದೂಡ ಲಾಗುವುದು. ಅನಿಲ ಉತ್ಪಾದಿತವಾದಖಿತೆಲ್ಲಾ ಗ್ಯಾಸ್ ಹೋಲ್ಡರ್ ಕ್ರಮೇಣ ಉಬ್ಬುವುದು ಮತ್ತು ಅನಿಲ ಉಪಖಿುೋಗಿಸಿದಖಿತೆಲ್ಲಾ ಹೋಲ್ಡರ್ ತಗ್ಗುವುದು. ಅನಿಲ ಭಾರವನ್ನು ಹೆಚ್ಚಿಸಲು ಗ್ಯಾಸ್ ಹೋಲ್ಡರ್ ಮೇಲೆ ಭಾರವನ್ನು ಇಡಲಾಗುವುದು.

| ಸಾಂಪ್ರದಾಯಿಕ ಜೈವಾನಿಲ ಅಡುಗೆ ತ್ಯಾಜ್ಯ ಜೈವಾನಿಲ ಘಟಕಗಳೊಂದಿಗೆ ಹೋಲಿಕೆ | ಸಾಂಪ್ರದಾಯಿಕ ಜೈವಾನಿಲ ವ್ಯವಸ್ಥೆ | ಅಡುಗೆ ತ್ಯಾಜ್ಯ ಜೈವಾನಿಲ ವ್ಯವಸ್ಥೆ |
|---|---|---|
| ಅಗತ್ಯವಿರುವ ಕಚ್ಚಾ ಪದಾರ್ಥಗಳ ಪ್ರಮಾಣ | 40 ಕಿ.ಗ್ರಾಂ ಸೆಗಣಿ+ 40ಲೀ.,ನೀರು | 1-1.5 ಕಿ.ಗ್ರಾಂ.+15ಲೀ.ನೀರು |
| ವಿಲೇವಾರಿಗೊಳಿಸಬೇಕಾದ ಸ್ಲರಿ ಪ್ರಮಾಣ ಮತ್ತು ಸಹಜಗುಣ | 80 ಲೀ.,ಸ್ಲಡ್ಜ್ | 15ಲೀ., ನೀರು |
| ಕಚ್ಚಾ ಸಾಮಗ್ರಿಯ ಪೂರ್ಣ ಬಳಕೆಗಾಗಿ ಪ್ರತಿಕ್ರಿಯಾ ಸಮಯ | 40 ದಿನಗಳು | 48 ಗಂಟೆಗಳು |
| ಮನೆ ಬಳಕೆಗೆ ಮಾದರಿ ಅಳತೆ | 4000ಲೀ., | 1000-1500 ಲೀ., |

ಅಡುಗೆ ತ್ಯಾಜ್ಯ ಜೈವಾನಿಲ-ವ್ಯವಸ್ಥೆಯಲ್ಲಿ, 1.5 ಕಿ.ಗ್ರಾಂ., ಕಚ್ಚಾ ಸಾಮಗ್ರಿಯು ಸುಮಾರು 500 ಗ್ರಾಂನಷ್ಟು ಮಿಥೇನ್ ಉತ್ಪಾದಿತವಾಗುವುದು ಮತ್ತು ಪ್ರತಿಕ್ರಿಯೆಯು 48 ಗಂಟೆಗಳಲ್ಲಿ ಮುಕ್ತಾಯವಾಗುವುದು. ಸಾಂಪ್ರದಾಯಿಕ ಜೈವಾನಿಲ ವ್ಯವಸ್ಥೆಯಲ್ಲಿ ದನಕರುಗಳ ಗೊಬ್ಬರ ಅಥವಾ ಮಾನವ ವಿಸರ್ಜಿತವನ್ನು ಉಪಯೋಗಿಸಲಾಗುವುದು ಮತ್ತು ಅಷ್ಟೇ ಪ್ರಮಾಣದ ಮಿಥೇನ್ ಉತ್ಪಾದಿಸಲು 40 ಕಿ.ಗ್ರಾಂ., ನಷ್ಟು ಕಚ್ಚಾ ಸಾಮಗ್ರಿ ಬೇಕಾಗುವುದು.

ಸಾಂಪ್ರದಾಯಿಕ ಜೈವಾನಿಲ ವ್ಯವಸ್ಥೆಯಲ್ಲಿ ಪ್ರತಿಕ್ರಿಯಾ ಅವಧಿಯು 40 ದಿನಗಳು.ಹೀಗೆ ಅಡುಗೆ ತ್ಯಾಜ್ಯ ಜೈವಾನಿಲ ವ್ಯವಸ್ಥೆಯು ಸಾಂಪ್ರದಾಯಿಕ ಜೈವಾನಿಲ ವ್ಯವಸ್ಥೆ ಪ್ರಕ್ರಿಯೆಗಿಂತ 800 ಪಟ್ಟು ಅಧಿಕ ಸಾಮರ್ಥ್ಯದ್ದಾಗಿದೆ.

**ಕಚ್ಚಾ ಸಾಮಗ್ರಿಗಳು :** ತ್ಯಾಜ್ಯ ಹಿಟ್ಟು, ತರಕಾರಿ ತ್ಯಾಜ್ಯಗಳು, ತ್ಯಾಜ್ಯ ಆಹಾರ, ಕೊಳೆತ ಹಣ್ಣುಗಳು, ಬಿಸಾಡಿದ ಆಹಾರ ಪದಾರ್ಥಗಳು ಬಿಳಗೊಂಡಂತೆ ಹೆಚ್ಚಿನ ಅಡುಗೆ ತ್ಯಾಜ್ಯಗಳನ್ನು ಚೆನ್ನಾಗಿ ಕೊಳೆಯಲು ಬಿಡಲಾಗುವುದು. ಹುಳಿ ಹಣ್ಣು ಹಾಗೂ ಆಹಾರ ಪದಾರ್ಥವನ್ನು ಹಾಕಬಾರದು.

**ಪ್ರಯೋಜನಗಳು :**

ಜೈವಾನಿಲ ಘಟಕವು ಅನೇಕ ಉದ್ದೇಶ್ಯಗಳನ್ನು ಪೂರೈಸುವುದಾಗಿದ್ದು ಅವೆಂದರೆ,

1. ತ್ಯಾಜ್ಯವನ್ನು ಪರಿಸರ-ಸ್ನೇಹಿಯಾಗಿ ವಿಲೇವಾರಿ ಮಾಡುತ್ತದೆ.
2. ಬಿಳ್ಳೆಯ ಜೈವಾನಿಲ ಉತ್ಪಾದನೆ ಮಾಡಬಲ್ಲುದು, ಇದು ಇಂಧನ ಸಂಪನ್ಮೂಲ ಉತ್ಪಾದನೆಗೆ ಬೆಂಬಲಿಸುವುದು.
3. ಅಧಿಕ ಗುಣಮಟ್ಟದ ಗೊಬ್ಬರ ಉತ್ಪಾದನೆ. ಅದು ಕಳೆಯಿಂದ ಹೊರತಾಗಿದ್ದು ಮಣ್ಣಿಗೆ ಸಾರಭರಿತ ಗೊಬ್ಬರವಾಗುವುದು.
4. ಕಸದ ತೊಟ್ಟಿಯಲ್ಲಿ ಇರುವ ತ್ಯಾಜ್ಯ ವಸ್ತುಗಳಿಂದ ಬೀದಿನಾಯಿಗಳ ಹಾಗೂ ಇನ್ನಿತರ ಪ್ರಾಣಿಗಳ ಹಾವಳಿ ಕಡಿಮೆಯಾಗುವುದು.
5. ಜೈವಾನಿಲವು ಬಣ್ಣರಹಿತ, ವಾಸನೆ ರಹಿತ ಮತ್ತು ದಹನಗೊಳ್ಳಬಲ್ಲ ಅನಿಲವಾಗಿದೆ. ಈ ಘಟಕದಲ್ಲಿ ಉತ್ಪಾದಿತ ಅನಿಲವನ್ನು ಸ್ವಾಭಾವಿಕ ಅನಿಲವಾಗಿ ಬಳಸಬಹುದು.ಜೈವಾನಿಲ ಘಟಕಗಳೆಂದರೆ,

| | | |
|---|---|---|
| ಮಿಥೇನ್ (CH4) | : | 70-75% |
| ಇಂಗಾಲದ ಡೈ ಆಕ್ಸೈಡ್ | : | 10-15% |
| ನೀರಿನ ಆವಿ | : | 5-10% |

**ಎಲ್ಲೆಲ್ಲಿ ಅನ್ವಯಿಸುವುದು :**

ಜೈವಾನಿಲ ಘಟಕದಲ್ಲಿ ತ್ಯಾಜ್ಯಗಳನ್ನು ಸಂಸ್ಕರಿಸಬಹುದಾಗಿದೆ. ಆ ತ್ಯಾಜ್ಯಗಳೆಂದರೆ ಜೈವಿಕ-ನಾಶಹೊಂದಬಲ್ಲ ಅಡುಗೆ ತ್ಯಾಜ್ಯ, ನಿರುಪಯೋಗಿ ಕಾಗದ, ಹಸಿರು-ಹುಲ್ಲು, ಕಸ-ಕಡ್ಡಿ, ಆಸ್ಪತ್ರೆ ತ್ಯಾಜ್ಯಗಳು, ಹಸಿರು ಗಿಡ ಮರಗಳ ತ್ಯಾಜ್ಯ, ಸೆಗಣಿ, ಉಳಿಕೆ ದವಸ ಧಾನ್ಯ, ಕಬ್ಬು ಇತ್ಯಾದಿ....

ಪೌರಡಳಿತ ನಿಗಮಗಳು,ಆಸ್ಪತ್ರೆಗಳು, ಹೋಟೆಲ್ಸ್, ಗೃಹ-ಸಂಸ್ಥೆಗಳು, ಸರ್ಕಾರಿ ಸಂಘ ಸಂಸ್ಥೆಗಳು, ನಗರಪಾಲಿಕೆಗಳು, ಗ್ರಾಮ ಪಂಚಾಯಿತಿಗಳು. ಫಾರ್ಮ ಹೌಸ್‌ಗಳು ಮುಂತಾದೆಡೆ ಉಪಯುಕ್ತ.

ಪ್ರತಿ ದಿನವೂ ಉತ್ಪತ್ತಿಯಾಗುವ ಅಪಾರ ಮೊತ್ತದ ಜೈವಿಕ ಅವನತಿ ಹೊಂದಬಲ್ಲಂತಹ ತ್ಯಾಜ್ಯಗಳ ನಿರ್ವಹಣೆಯನ್ನು ಮಾಡಬೇಕಾದ ನಿರ್ದಿಷ್ಟವಾದ ಅಗತ್ಯತೆ ಇದೆ. ಹೀಗೆ ಅಡುಗೆ ಮನೆಯಲ್ಲಿ ಉತ್ಪಾದಿತವಾಗುವ ತ್ಯಾಜ್ಯ ಪದಾರ್ಥಗಳನ್ನು ಮಾರ್ಪಾಟಿತ ಜೈವಾನಿಲ ಘಟಕದಲ್ಲಿ ಸಂಸ್ಕರಿಸಬಹುದಾಗಿದೆ.

**ಮುನ್ನೆಚ್ಚರಿಕೆ :**

ಜೈವಾನಿಲ ಘಟಕವು ಆಮ್ಲಯುಕ್ತಗೊಳ್ಳುವ ಸಾಧ್ಯತೆ ಇದೆ. ಹೀಗಾಗಿ ಇದಕ್ಕೆ ಅತೀ ಹೆಚ್ಚು ಕಚ್ಚಾ ಸಾಮಗ್ರಿಯನ್ನು ದೂಡಿದರೆ ಘಟಕದ ಕಾರ್ಯ ನಿರ್ವಹಣಾ ಸಾಮರ್ಥ್ಯವು ತಗ್ಗುವುದು.

**ಹೆಚ್ಚಿನ ಮಾಹಿತಿಗಾಗಿ**

ಶೀತಲ್ ಎನ್ ಸಿಂಗ್,ಪ್ರಬಂಧಕರು,
ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ,
ಶ್ರೀರಾಮಪುರ ಕ್ರಾಸ್, ಜಕ್ಕೂರು,
ಬೆಂಗಳೂರು-560064,
ದೂರವಾಣಿ ಸಂಖ್ಯೆ : 23626493
ಇ-ಮೇಲ್ ವಿಳಾಸ : mgrired@hotmail.com

## ಮೊಬೈಲ್ ಸಂಖ್ಯೆ ನಮೂದಿಸಿ ......

ಗ್ರಾಮೀಣಾಭಿವೃದ್ಧಿಯ ಬಗ್ಗೆ ಮತ್ತು ಸಂಬಂಧಿಸಿದಂತೆ ಆಸಕ್ತ ವಿಚಾರಗಳನ್ನು ಲೇಖಕರು ಹಾಗೂ ಆಸಕ್ತರು ಲೇಖನಗಳ ರೂಪದಲ್ಲಿ 'ಕರ್ನಾಟಕ ವಿಕಾಸ' ಪತ್ರಿಕೆಗೆ ತಲುಪಿಸುತ್ತಿದ್ದಾರೆ. ಪತ್ರಿಕೆಗೆ ಆಯ್ಕೆಯಾದ ಲೇಖನಗಳ ಕರಡನ್ನು ಪರಿಶೀಲಿಸುವಲ್ಲಿ ಲೇಖಕರಿಂದ ಕೆಲವೊಮ್ಮೆ ಸ್ಪಷ್ಟೀಕರಣವನ್ನು ಅಥವಾ ಅಧಿಕ ಮಾಹಿತಿಯನ್ನು ಪಡೆಯುವ ಸಂದರ್ಭವಿರುತ್ತದೆ,

**ಆದ್ದರಿಂದ ಲೇಖಕರು/ಆಸಕ್ತರು ಲೇಖನವನ್ನು ಪತ್ರಿಕೆಗೆ ತಲುಪಿಸುವಾಗ ಲೇಖಕರ ಸಂಪೂರ್ಣ ಅಂಚೆ ವಿಳಾಸ ಮತ್ತು ಮೊಬೈಲ್ ದೂರವಾಣಿ ಸಂಖ್ಯೆಯನ್ನು ತಪ್ಪದೇ ನಮೂದಿಸಲು ಕೋರಿದೆ.**

ಲೇಖನಗಳನ್ನು 'ನುಡಿ' ಉಚಿತ ತಂತ್ರಾಂಶವನ್ನು ಬಳಸಿ **karnatakavikasa@ymail.com** ವಿಳಾಸಕ್ಕೆ ಈ-ಮೇಲ್ ಮುಖಾಂತರವೂ ಕಳುಹಿಸಬಹುದಾಗಿದೆ. ಅಂಚೆಯ ಮೂಲಕ ತಲುಪಿಸಬಯಸುವವರು ಕೆಳಕಂಡ ವಿಳಾಸಕ್ಕೆ ತಲುಪಿಸಲು ಕೋರಿದೆ.

**ಮುಖ್ಯ ಸಂಪಾದಕರು**
**'ಕರ್ನಾಟಕ ವಿಕಾಸ'**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1, ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001. ದೂರವಾಣಿ : (080) 22353857
www.rdpr.kar.nic.in email:karnatakavikasa@ymail.com

# ರೆಡ್ ಕ್ರಾಸ್ ದಿನಾಚರಣೆ

– ರವಿ ಎಸ್. ಸೂರನ್ *



ರೆಡ್ ಕ್ರಾಸ್ ಒಂದು ಸ್ವಯಂ ಸೇವಾ ಸಂಸ್ಥೆ. 1910 ಅಕ್ಟೋಬರ್ 30ರಂದು ಸ್ವಿಸ್ ದೇಶದ ಹೆನ್ರಿಡ್ಯುನಾಂಟೊ ಈ ರೆಡ್ ಕ್ರಾಸ್ ಸಂಸ್ಥೆಯನ್ನು ಸ್ಥಾಪಿಸಿದರು. ಇವರು ನೊಂದವರ ನೋವು ನಿವಾರಿಸಲು ತನ್ನ ಜೀವನದ ಸರ್ವಸ್ವವನ್ನೇ ಮುಡುಪಾಗಿಟ್ಟಿದ್ದರು. ಹೆನ್ರಿಡ್ಯುನಾಂಟೊ ಹುಟ್ಟಿದ ದಿನ ಮೇ 8. ಆದುದರಿಂದ ಪ್ರತಿ ವರ್ಷವು ಈ ದಿನವನ್ನು 'ರೆಡ್ ಕ್ರಾಸ್ ದಿನ' ಎಂದು ಜಗತ್ತಿನಾದ್ಯಂತ ಆಚರಿಸುತ್ತಾರೆ. ಎಲ್ಲಾ ದೇಶದ ಎಲ್ಲಾ ರಾಜ್ಯಗಳ ಪ್ರತಿನಿಧಿಗಳನ್ನೊಳಗೊಂಡ ಒಂದು ಅಂತರರಾಷ್ಟ್ರೀಯ ಸಮ್ಮೇಳನ ಕರೆಯಬೇಕೆಂದು, ಸ್ವಿಜ್ವರ್‌ಲ್ಯಾಂಡ್ ದೇಶದ 5 ವ್ಯಕ್ತಿಗಳ ಸಮಿತಿ ಜಗತ್ತಿನ ಎಲ್ಲಾ ದೇಶಗಳನ್ನು ಪ್ರಾರ್ಥಿಸಿತ್ತು. ಆಗ ಇತರೆ ದೇಶದ ಪ್ರತಿನಿಧಿಗಳನ್ನು ಆಹ್ವಾನಿಸಿದ ಮೇಲೆ ರಾಷ್ಟ್ರೀಯ ಸಭೆ ಜನಿವಾದಲ್ಲಿ 1864 ಮೇ 8 ರಂದು ನಡೆಯಿತು. ಅಂದಿನ ಆ ಸಮಿತಿಯನ್ನೇ ರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆ ಎಂದು ಕರೆಯಲಾಗುತ್ತಿದೆ.

ಈ ರೆಡ್ ಕ್ರಾಸ್ ಸಂಸ್ಥೆಯು ರಣರಂಗದಲ್ಲಿ ಆಗಲಿ, ಕ್ಷಾಮಪೀಡಿತ ಪ್ರದೇಶದಲ್ಲಿಯೇ ಆಗಲಿ, ಪ್ರವಾಹ ಮತ್ತು ಭೂಕಂಪಪೀಡಿತ ಪ್ರದೇಶದಲ್ಲಿಯೇ ಆಗಲಿ, ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಜನ ಸಂಕಷ್ಟದಲ್ಲಿದ್ದಾಗ ಇವರೆಲ್ಲರಿಗೂ ಜಾತಿ ಭೇದವಿಲ್ಲದೆ, ದೇಶಭಾಷೆಗಳ ಸೊಂಕಿಲ್ಲದೇ ನೆರವು ನೀಡುವುದು ಮುಂತಾದ ಸಾಮಾಜಿಕ ಕಾರ್ಯಗಳನ್ನು ಮಾಡುತ್ತ ಬರುತ್ತಲಿದೆ.

ಇಂದು ಜಗತ್ತಿನ ಜನರೆಲ್ಲರೂ ಸಹೋದರರು ಎಂಬ ಭಾವನೆ ಬೆಳೆಸಿ, ಅಲ್ಲದೇ ರಾಷ್ಟ್ರಗಳ ನಡುವೆ ಯುದ್ಧ ಆಗದಂತೆ ಮಾಡಬೇಕೆಂಬುದೇ ಈ ರೆಡ್ ಕ್ರಾಸ್ ಸಂಸ್ಥೆಯ ಮೂಲ ಉದ್ದೇಶವಾಗಿದೆ. ಈ ಕನಸನ್ನು ನನಸು ಮಾಡಬೇಕೆಂದರೆ ನಾವೆಲ್ಲರೂ ರೆಡ್ ಕ್ರಾಸ ಸಂಸ್ಥೆಗೆ ಬೆಂಬಲ ಕೊಟ್ಟು ಹಾಗೂ ರೆಡ್ ಕ್ರಾಸ್ ತತ್ವಗಳಿಗನುಗುಣವಾಗಿ ನಡೆಯಬೇಕಾದದ್ದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಇಂದು ಶಾಲೆಗಳಲ್ಲಿ ಮಕ್ಕಳು ಹಾಗೂ ಪ್ರತಿ ಗ್ರಾಮಗಳಲ್ಲಿಯ ಜನರು ರೆಡ್ ಕ್ರಾಸ್ ಸಂಸ್ಥೆಯ ಗುರಿಯನ್ನು ಹಾಗೂ ಅದರ ಮಾನವೀಯ ಮೌಲ್ಯಗಳ ಕಾರ್ಯಚಟುವಟಿಕೆಗಳನ್ನು ಇಂದು ತಿಳಿದುಕೊಳ್ಳುವುದು ಅವಶ್ಯವಿದೆ.

* ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಯೋಜನಾ ಉಪ–ವಿಭಾಗ, ಜಿಲ್ಲಾ ಪಂಚಾಯತ್, ಬೆಂಗಳೂರು (ಗ್ರಾ), ಕೆಂಪೇಗೌಡ ರಸ್ತೆ, ಬೆಂಗಳೂರು.




ಈ ರೆಡ್ ಕ್ರಾಸ್ ಸಂಸ್ಥೆ ಯುದ್ಧ ಸನ್ನಾಹ ಮಾಡುತ್ತಿರುವ ರಾಷ್ಟ್ರಗಳ ಮನವೊಲಿಸಿ ಒಬ್ಬರನ್ನೊಬ್ಬರನ್ನು ಅರ್ಥ ಮಾಡಿಕೊಳ್ಳುವುದಕ್ಕೆ ದಾರಿ ಮಾಡಿಕೊಡುತ್ತದೆ. ಈ ಸಂಸ್ಥೆ ಪ್ರಕೃತಿ ಮುನಿಸಿಕೊಂಡು ಸಂಭವಿಸಿದಾಗ ಆಗುವ ಅನಾಹುತಗಳಿಗೆ ಕೂಡಲೇ ಸೂಕ್ತವಾದ ವಾತಾವರಣವನ್ನು ಕಲ್ಪಿಸುವುದರಲ್ಲಿ ಸಹಾಯ ಮಾಡುತ್ತದೆ. ಈ ಹಿಂದೆ ಹೈದ್ರಾಬಾದ್ ಕರ್ನಾಟಕ ಗಡಿ ಭಾಗದಲ್ಲಿ ಮಹಾರಾಷ್ಟ್ರ ರಾಜ್ಯದ ಕಿಲಾರಿ, ಲಾತೂರ, ಉಮರ್ಗಾಗಳಲ್ಲಿ ಭೀಕರ ಭೂಕಂಪ ಉಂಟಾದಾಗ, ಲಕ್ಷಾಂತರ ಜನರ ಸಾವು ನೋವು ಉಂಟಾದಾಗ, ಸಾವಿರಾರು ಜನ ಕಟ್ಟಡಗಳ ಅವಶೇಷದಲ್ಲಿ ಸಿಕ್ಕಿದಾಗ ಅವರನ್ನು ರಕ್ಷಿಸುವಲ್ಲಿ ರೆಡ್ ಕ್ರಾಸ್ ಸಂಸ್ಥೆ ಮುಂಚೂಣಿಯಲ್ಲಿತ್ತು. ಇತ್ತೀಚಿನ ವರ್ಷಗಳಲ್ಲಿ ನೆರೆಯ ರಾಜ್ಯಗಳಾದ ತಮಿಳುನಾಡು ಹಾಗೂ ಕೇರಳದಲ್ಲಿ ಸುನಾಮಿ ಅಲೆ ಸೃಷ್ಟಿಯಾದಾಗ ಅಲ್ಲಿಯ ಜನಕ್ಕೆ ಆಸರೆಯಾಗಿ ನಿಂತಿದ್ದು ಇದೇ ರೆಡ್ ಕ್ರಾಸ್ ಸಂಸ್ಥೆ. ರೆಡ್ ಕ್ರಾಸ್ ಸಂಸ್ಥೆ ಪ್ರಥಮ ಚಿಕಿತ್ಸೆ ಕ್ರಮದಲ್ಲಿ (First Aid) ತರಬೇತಿ ನೀಡುವುದು ಮತ್ತು ರೋಗಿಗಳಿಗೆ ಉಪಚಾರ ಮಾಡುವುದು ಇದರ ಮುಖ್ಯ ಕಾರ್ಯಗಳಲ್ಲೊಂದಾಗಿದೆ. ಇದಲ್ಲದೇ ರಾಷ್ಟ್ರ ರಾಷ್ಟ್ರಗಳ ನಡುವೆ ಇರುವ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಿ ಗೆಳೆತನವನ್ನು ಬೆಳೆಸಿ, ಶಾಂತಿ ಸ್ಥಾಪನೆಗೆ ಪ್ರಯತ್ನಿಸುತ್ತದೆ. ಈ ರೀತಿ ಸಹಾಯ ಸಹಕಾರ ಮಾಡಬೇಕೆಂಬುದು ಇಂದಿನ ಯುವಕರಲ್ಲಿ ಬರಬೇಕಾಗಿದೆ. ಅದಕ್ಕಾಗಿಯೇ ಶಾಲೆ ಕಾಲೇಜುಗಳಲ್ಲಿ ಜ್ಯೂನಿಯರ್ ರೆಡ್ ಕ್ರಾಸ್ ಮತ್ತು ಸೀನಿಯರ್ ರೆಡ್ ಕ್ರಾಸ್ ಸಂಸ್ಥೆ ಸ್ಥಾಪನೆ ಕಾರ್ಯಕ್ರಮಗಳಲ್ಲಿ ವಿಶ್ವ ಸೌಹಾರ್ದಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟಿರುತ್ತದೆ.

1971ರಲ್ಲಿ ಪಾಕಿಸ್ತಾನ ಭಾರತದ ಮೇಲೆ ಯುದ್ಧ ಮಾಡಿದಾಗ ಹಾಗೂ 1999 ರ ಕಾರ್ಗಿಲ್ ಯುದ್ಧದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯು ನೊಂದವರಿಗೆ ಸಹಾಯ ಮತ್ತು ಸಹಕಾರ ಮಾಡಬೇಕಾಯಿತು. ಅಲ್ಲಿ ಯುದ್ಧ ಪ್ರಾರಂಭವಾಗುವುದಕ್ಕೆ ಮೊದಲೇ ಪೂರ್ವ ಪಾಕಿಸ್ಥಾನದಿಂದ ಅನೇಕ ನಿರಾಶ್ರಿತರು ಪಶ್ಚಿಮ ಬಂಗಾಳಕ್ಕೆ ಬರಲಾರಂಭಿಸಿದರು. ಈ ಅಸಂಖ್ಯಾತ ಸಮಸ್ಯೆಗಳನ್ನು ರೆಡ್ ಕ್ರಾಸ್ ಸಂಸ್ಥೆ ಸಮರ್ಥವಾಗಿ ನಿಭಾಯಿಸಿತ್ತು. 1965 ಅಕ್ಟೋಬರ್ ತಿಂಗಳಲ್ಲಿ 20ನೆಯ ಅಂತರ್ ರಾಷ್ಟ್ರೀಯ ಸಮ್ಮೇಳನ ಎಲ್ಲಾ ರಾಷ್ಟ್ರಗಳು ಕೂಡಿ ಯುದ್ಧಕಾಲದಲ್ಲಿ, ಶಾಂತಿಕಾಲದಲ್ಲಿ ಆಚರಿಸಬೇಕಾದ ಮೂಲ ತತ್ವವನ್ನು ಅಂದರೆ ಮಾನವ ತತ್ವ ನಿಷ್ಪಕ್ಷಪಾತ ತಾಟಸ್ಥ್ಯ, ಸ್ವತಂತ್ರ, ಸ್ವಯಂ ಸೇವೆ, ಐಕ್ಯಮತ ಮತ್ತು ವಿಶ್ವ ವ್ಯಾಪಕತೆ ಇವೆಲ್ಲಾ ತತ್ವಗಳನ್ನು ಸೂಚಿಸಿತು. ಇಂದು ಶಾಲೆಗಳಲ್ಲಿ ಮಕ್ಕಳು ಹಾಗೂ ಪ್ರತಿ ಗ್ರಾಮಗಳಲ್ಲಿಯ ಜನರು ರೆಡ್ ಕ್ರಾಸ್ ಸಂಸ್ಥೆಯ ಗುರಿಯನ್ನು ಹಾಗೂ ಅದರ ಮಾನವೀಯ ಮೌಲ್ಯಗಳ ಕಾರ್ಯ ಚಟುವಟಿಕೆಗಳು ಹಿಂದೆಂದಿಗಿಂತಲು ಇಂದು ತಿಳಿದುಕೊಳ್ಳುವುದು ಅವಶ್ಯವಿದೆ. ರೆಡ್ ಕ್ರಾಸ್ ದಿನದಂದು ನಾವು "ನಾನು ಸೇವೆ ಮಾಡುತ್ತೇನೆ, ನಮ್ಮ ಇತರರ ಆರೋಗ್ಯ ರಕ್ಷಣೆಗೂ, ನೊಂದವರ ಹಾಗೂ ಅನಾರೋಗ್ಯದಿಂದ ನರಳುತ್ತಿರುವವರ ಸೇವೆಗೂ, ವೃದ್ಧರು, ನಿರಾಶ್ರಿತ ಮಕ್ಕಳ ಉಪಚಾರಕ್ಕೆ ಮುಡುಪಾಗಿಡುತ್ತೇವೆ. ಜಗತ್ತಿನ ಸಮಸ್ತ ಮಕ್ಕಳನ್ನು ನಮ್ಮ ಗೆಳೆಯ ಬಳಗದವರಂತೆ ಭಾವಿಸುತ್ತೇವೆ" ಎಂದು ನಾವೆಲ್ಲರೂ ಇಂದು ಪ್ರತಿಜ್ಞೆ ಮಾಡಬೇಕು.

ಅಂದಾಗ ಮಾತ್ರ ಈ ರೆಡ್ ಕ್ರಾಸ್ ಸಂಸ್ಥೆ ಮೇ 8 ರಂದು ಆಚರಿಸುವ 'ರೆಡ್ ಕ್ರಾಸ್ ದಿನಾಚರಣೆ' ನಿಜಕ್ಕೂ ಸಾರ್ಥಕವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ.

❑

*'ರಾಜಕಾರಣಿಯೇ ಆಗು*
*ರಾಷ್ಟ್ರಭಕ್ತನೇ ಆಗು*
*ವಿಜ್ಞಾನಿಯೇ ಆಗು*
*ವ್ಯಾಪಾರಿಯೇ ಆಗು*
*ನೀ ಬಯಸಿದಂತಾಗು*
*ಏನಾದರೂ ಸರಿಯೇ ಮೊದಲು ನೀ ಮಾನವನಾಗು'*

– ಸಿದ್ಧಯ್ಯ ಪುರಾಣಿಕ

# ದೇಹಕ್ಕೆ ಬೇಕು ನೀರು



ಸುಶೀಲಾ ಸದಾಶಿವಯ್ಯ *

ಮೊಬೈಲ್ : 9242356001

'ನೀರು' ದೇಹದ ಆರೋಗ್ಯವನ್ನು ಕಾಪಾಡುವ ಸಂಜೀವಿನಿ. ಘನ ಆಹಾರಕ್ಕಿಂತ ಸುಮಾರು ಮುಕ್ಕಾಲು ಭಾಗದಷ್ಟು ನೀರು ದೇಹಕ್ಕೆ ಅವಶ್ಯಕವಿರುತ್ತದೆ. ಕ್ರಮಬದ್ಧವಾದ ಹೆಚ್ಚು ಭಾಗ ನೀರಿನ ಸೇವನೆಯಿಂದ ಉತ್ತಮ ಆರೋಗ್ಯ ನಮ್ಮದಾಗುತ್ತದೆ.

'ನೀರು' ಜೀವಿಗಳಿಗೆ ಸಿಕ್ಕಿರುವ ಒಂದು ವರ. ಪಂಚಭೂತಗಳಾದ ಆಕಾಶ, ಭೂಮಿ, ಜಲ, ಅಗ್ನಿ, ಗಾಳಿ, ಇವುಗಳಲ್ಲಿ ನೀರು ಒಂದು ಜೀವ ಚೈತನ್ಯದಾಯಿನಿ, ನಿಸರ್ಗದತ್ತವಾದ ನೀರಿಗೆ ಬಣ್ಣವಿಲ್ಲ, ಆಕಾರವಿಲ್ಲ. ಜೀವಿಗಳಿಗೆ ಜೀವ ರಕ್ಷಕವಾದ ನೀರು ಮನುಷ್ಯನ ಅನೇಕ ಕಾಯಿಲೆಗಳಿಗೆ ಔಷಧಿಯಂತೆ ಕೆಲಸಮಾಡುತ್ತದೆ. ಅಮೃತ ಸಮಾನವಾದ ನೀರಿನ ಬಳಕೆಯಿಂದ ಹೆಚ್ಚು ಆರೋಗ್ಯವಂತರಾಗಿ ಬದುಕಿ ಬಾಳಬಹುದು. ಒಂದು ಪಕ್ಷ ಭೂಮಿಯ ಮೇಲೆ ನೀರೇ ಇಲ್ಲದಿದ್ದರೆ ಮನುಷ್ಯನ ಸ್ಥಿತಿ ಹೇಗಿರುತ್ತಿತ್ತು ಎಂಬುದನ್ನು ಕಲ್ಪನೆ ಮಾಡಿಕೊಳ್ಳಲು ಸಾಧ್ಯವಿಲ್ಲ. ಭೂಮಿಯ ಮೇಲಿನ ಸಕಲ ಜೀವರಾಶಿಗೂ ನೀರೇ ಆಧಾರ ರೂಪವಾದದ್ದು.

ಭೂಮಿಯ ಮೇಲೆ ದ್ರವರೂಪದ ವಸ್ತುಗಳು ಹೇರಳವಾಗಿದೆ. ಅವುಗಳಿಂದ ಸಿಗದೆ ಇರುವ ಆನಂದಾನುಭ ನೀರಿನಿಂದ ಸಿಗುತ್ತದೆ. ಭೂಮಿಯ ಮೇಲೆ ಶೇ. 78ರಷ್ಟು ನೀರಿದೆ. ಇನ್ನು ಉಳಿದ ಭಾಗ ಶೇ. 22ರಷ್ಟು ಭೂಮಿ ಇದೆ. ಭೂಮಿಯ ಮೇಲಿರುವ ಒಟ್ಟು ನೀರಿನ ಶೇ. 97ರಷ್ಟು ಉಪ್ಪು ನೀರು, ಶೇ. 7ರಷ್ಟು ಮಂಜುಗಡ್ಡೆ ಮತ್ತು ಮೋಡದ ರೂಪದಲ್ಲಿ ಘನೀಭವಿಸಿದ ನೀರು ಇನ್ನು ಶೇ. 1ರಷ್ಟು ಮಾತ್ರ ಕುಡಿಯಲು ಯೋಗ್ಯವಾದ ನೀರು ಅಂದರೆ ನಾವು ಕುಡಿಯುವ ನೀರಿನ ಪ್ರಮಾಣವಿರುವುದು ಅತ್ಯಲ್ಪ. ಅದನ್ನು ಹೇಗೆ ಮಿತವಾಗಿ ಹಿತವಾಗುವಂತೆ ಬಳಸಿಕೊಳ್ಳಬೇಕು ಎಂಬ ಜಾಗೃತಿ ಜನರಲ್ಲಿ ಮೂಡಿದರೆ ಮುಂದೆ ನಾವೆಲ್ಲ ನೀರಿನ ಕೊರತೆಯನ್ನು ಎದುರಿಸುವ ಸಮಸ್ಯೆ ಉದ್ಭವಿಸುವುದಿಲ್ಲ.

ಉತ್ತಮ ಆರೋಗ್ಯಕ್ಕೆ ಆಧಾರರೂಪವಾದ ನೀರು, ಹಸಿವಾದಾಗ, ಬಾಯಾರಿಕೆಯಾದಾಗ, ಅರೆ ಪ್ರಜ್ಞಾವಸ್ಥೆಯಲ್ಲಿದ್ದಾಗ ನೀರು ಔಷಧ ರೂಪದಲ್ಲಿ ಕೆಲಸ ಮಾಡುತ್ತದೆ. ಊಟವಿಲ್ಲದೆ ಬದುಕುಬಹುದು, ಆದರೆ ನೀರಿಲ್ಲದೆ ಅರೆಕ್ಷಣ ಬದುಕುವುದು ಅಸಾಧ್ಯ. ದಣಿವಾದಾಗ ನೀರನ್ನು ಕುಡಿಯುವುದರಿಂದ ದೇಹದಲ್ಲಿ ಚೈತನ್ಯ, ಗೆಲುವು, ಉತ್ಸಾಹ



* 'ಪ್ರಣವಂ' ಟೂಡಾ ಕಛೇರಿ ಹಿಂಭಾಗ, ಕುವೆಂಪು ನಗರ, ತುಮಕೂರು – 572 102.

ಮೂಡುತ್ತದೆ. ಬಳಲಿಕೆಯಿಂದ ನಿತ್ರಾಣವಾದ ದೇಹ ಮೊದಲು ಬೇಡುವುದು ನೀರನ್ನು, ಆರೋಗ್ಯವನ್ನು ತಂದುಕೊಡುತ್ತದೆ. ಹೋದ ಜೀವವನ್ನು ಮರಳಿ ದಯಪಾಲಿಸುವ ಶಕ್ತಿ ನೀರಿನಲ್ಲಿದೆ. ಹೀಗೆ ಅಮೃತದೋಪಾದಿಯಲ್ಲಿ ಕೆಲಸ ಮಾಡುವ ನೀರು ಭೂಲೋಕದ 'ಅಮೃತ' ಎಂದು ಪರಿಗಣಿತವಾಗಿದೆ.

ಎಂತಹ ನೀರನ್ನು ಕುಡಿಯಬೇಕು? ರುಚಿಯಾದ ಶುಚಿಯಾದ ಕಾದು ಆರಿದ ನೀರನ್ನು ಹಿತವಾಗುವಂತೆ ಚಪ್ಪರಿಸಿ ಕುಡಿಯಬೇಕು. ಇತ್ತೀಚೆಗೆ ನೀರನ್ನು ಶುಚಿಗೊಳಿಸುವ ಹಲವು ಆಧುನಿಕ ಪದ್ಧತಿಯ ಯಂತ್ರಗಳು ಮಾರುಕಟ್ಟೆಯಲ್ಲಿ ಸಿಗುತ್ತವೆ. ಇವೆಲ್ಲಕ್ಕಿಂತ ಕುದಿಸಿ ಆರಿಸಿದ ನೀರು ಅತ್ಯುತ್ತಮ. ಹಿತವಾದ ಬಿಸಿ ನೀರಿನ ಸೇವನೆಯಿಂದ ತೂಕವನ್ನು ಕಡಿಮೆ ಮಾಡಿಕೊಳ್ಳಬಹುದು. ಮಳೆ ನೀರನ್ನು ಸಂಗ್ರಹಿಸಿ ಕುಡಿಯುವ ನೀರು ಆರೋಗ್ಯಕ್ಕೆ ಉತ್ತಮ. ಅತ್ಯಂತ ಉಷ್ಣ ಪ್ರದೇಶಗಳಲ್ಲಿ ಕುಡಿಯುವ ನೀರಿನಲ್ಲಿ ಜೀರಿಗೆ, ಧನಿಯಾ ಹಾಕಿ ಕುದಿಸಿದ ನೀರನ್ನು ಉಪಯೋಗಿಸುತ್ತಾರೆ. ಇದರಿಂದ ಪಿತ್ತದ ನಿವಾರಣೆಯಾಗುತ್ತದೆ. ಜೀರ್ಣಶಕ್ತಿ ಹೆಚ್ಚಾಗಲು ಮೆಂತ್ಯ ಬೀಜ, ಪುದೀನಾ, ಹಸಿ ಶುಂಠಿ ಹಾಕಿ ಕುದಿಸಿದ ನೀರು ಒಳ್ಳೆಯದು.

ಮುಂಜಾನೆ ಎದ್ದ ತಕ್ಷಣ ಕುಡಿಯುವ ನೀರು ಅಮೃತದಂತೆ. ನಮ್ಮ ಹಿಂದಿನವರು, ತಾವು ಮಲಗುವ ಮುನ್ನ ತಾಮ್ರದ ಚೆಂಬಿನಲ್ಲಿ ನೀರನ್ನು ತುಂಬಿಸಿಟ್ಟು ಬೆಳಗ್ಗೆ ಎದ್ದ ತಕ್ಷಣ ಕುಡಿಯುವ ಪದ್ಧತಿ ಇತ್ತು. ಎದ್ದ ತಕ್ಷಣ ಕಾಫಿ, ಟೀ, ಕುಡಿಯುವ ಬದಲು ಶುಚಿಯಾದ ನೀರನ್ನು ಸುಮಾರು 1 ಲೀಟರಿನಷ್ಟು ಕುಡಿಯುವುದರಿಂದ ದೇಹದ ಉಷ್ಣದ ಪ್ರಮಾಣ ತಗ್ಗುತ್ತದೆ. ಜೀರ್ಣವಾಗದೆ ಉಳಿದ ಆಹಾರ ಜೀರ್ಣವಾಗುವಂತೆ ಸಹಕರಿಸುತ್ತದೆ. ಬಹಳಷ್ಟು ಕಾಯಿಲೆಗಳನ್ನು ನಿರ್ಮೂಲ ಮಾಡುವ ಶಕ್ತಿ ಮುಂಜಾನೆ ಕುಡಿಯುವ ನೀರಿನಲ್ಲಿದೆ. ನಂತರ ಬೆಚ್ಚಗಿನ ನೀರಿಗೆ ನಿಂಬೆಹಣ್ಣು, ಜೇನುತುಪ್ಪ ಬೆರೆಸಿ ಕುಡಿಯುವುದರಿಂದ ದೇಹದಲ್ಲಿರುವ ಅನಾವಶ್ಯಕ ಕೊಬ್ಬು ಕಡಿಮೆಯಾಗುತ್ತದೆ. ಸ್ವಲ್ಪ ಪ್ರಮಾಣದಲ್ಲಿ 1–2 ಕಪ್‌ನಷ್ಟು ನೀರನ್ನು ಕುಡಿಯುವುದರಿಂದ ಯಾವುದೇ ಪ್ರಯೋಜನವಿಲ್ಲ. ದಿನನಿತ್ಯದ ಅಭ್ಯಾಸದಿಂದ 1 ಲೀಟರ್‌ನಿಂದ $1^1/_2$ ಲೀಟರ್ ವರೆಗೆ ನೀರನ್ನು ಕುಡಿಯಬಹುದು.

ನಾವು ದಿನ ನಿತ್ಯ ಸೇವಿಸುವ ಘನ ಆಹಾರವನ್ನು ನುರಿಸಲು ಸಾಕಷ್ಟು ನೀರು ದೇಹಕ್ಕೆ ಬೇಕಾಗುತ್ತದೆ. ದೇಹದಿಂದ ಹೊರ ಹೋಗುವ ನೀರಿನ ಪ್ರಮಾಣ, ದೇಹದ ಅವಶ್ಯಕತೆಯ ಸಮಸ್ಥಿತಿಯನ್ನು ಕಾಯ್ದುಕೊಳ್ಳಲು ನಾವು ದೇಹಕ್ಕೆ ಹೆಚ್ಚು ನೀರನ್ನು ಪೂರೈಸಬೇಕಾಗುತ್ತದೆ. ದೇಹದಲ್ಲಿ ಬೇಡವಾದ ವಸ್ತುವನ್ನು ಹೊರಹಾಕಲು ನೀರಿನ ಪಾತ್ರ ಪಾತ್ರ ಮಹತ್ವದ್ದು.

ಒಂದು ದಿನಕ್ಕೆ ದೇಹಕ್ಕೆ ಎಷ್ಟು ನೀರು ಬೇಕಾಗುತ್ತದೆ ಎಂಬುದು ಚರ್ಚೆಯ ವಿಷಯ. ಒಬ್ಬೊಬ್ಬರು ಒಂದೊಂದು ವಿಧವಾಗಿ ಹೇಳುತ್ತಾರೆ. ದೇಹಕ್ಕೆ ಅವಶ್ಯಕತೆ ಎನಿಸಿದಷ್ಟು ನೀರನ್ನು ಸೇವಿಸಲೇಬೇಕು. ಬಾಯಾರಿಕೆಯ ಮೂಲಕ ನಮ್ಮ ದೇಹ ಕೇಳುವಷ್ಟು ಪ್ರಮಾಣದಲ್ಲಿ ನೀರನ್ನು ಕುಡಿಯಬಹುದು. ಅವರವರ ದೇಹ ಪ್ರಕೃತಿಯನ್ನು ಅನುಸರಿಸಿ ದಿನಕ್ಕೆ ಬೇಸಿಗೆಯಲ್ಲಿ ಸುಮಾರು ಮೂರು ಲೀಟರ್‌ನಿಂದ ನಾಲ್ಕು ಲೀಟರ್‌ವರೆಗೆ ನೀರು ಬೇಕಾಗತ್ತದೆ. ಅಮೃತದಂತೆ ಕೆಲಸ ಮಾಡುವ ನೀರನ್ನು ಒಳ್ಳೆಯದೆಂದು ಅತಿಯಾಗಿ ಸೇವಿಸಿದರೆ ದೇಹಕ್ಕೆ ವಿಷವಾಗ ಬಹುದು. ಋತುಗಳ ಬದಲಾವಣೆಗೆ ಅನುಗುಣವಾಗಿ ದೇಹಕ್ಕೆ, ಮನಸ್ಸಿಗೆ ತೃಪ್ತಿಯಾಗುವಷ್ಟು ನೀರನ್ನು ಇಷ್ಟಪಟ್ಟು ಅದರ ಸ್ವಾದವನ್ನು ಅನುಭವಿಸುತ್ತಾ ಕುಡಿಯಿರಿ.

ಹೆಚ್ಚು ನೀರನ್ನು ಕುಡಿಯುವುದರಿಂದ ಘನ ಆಹಾರದ ಸೇವನೆ ಕಡಿಮೆಯಾಗುತ್ತದೆ. ಉಪವಾಸ ಕ್ರಮವನ್ನು ಅನುಸರಿಸಿ ದಿನಕ್ಕೆ ಮೂರು ಲೀಟರ್‌ನಷ್ಟು ನೀರನ್ನು ಲಿಂಬೆಹಣ್ಣು, ಜೇನುತುಪ್ಪ ಬೆರಸಿ ಕುಡಿಯುವುದರಿಂದ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬಹುದು. ಮಧ್ಯದಲ್ಲಿ ಧಾರಾಳವಾಗಿ ಹೆಚ್ಚಿನ ನೀರನ್ನು ಕುಡಿಯಬಹುದು. ಈ ರೀತಿಯ ಕ್ರಮದಲ್ಲಿ 1 ವಾರ ಕಾಲ ಇರುವುದರಿಂದ ದೇಹದಲ್ಲಿ ವಿಷಯುಕ್ತ ಅನಾರೋಗ್ಯಕರ ಅಂಶಗಳು ತೊಲಗಿ, ದೇಹದಲ್ಲಿ ಉತ್ಸಾಹ, ಚೈತನ್ಯ, ಆರೋಗ್ಯ ದೊರಕುತ್ತದೆ.

'ನೀರು' ದೇಹದ ಆರೋಗ್ಯವನ್ನು ಕಾಪಾಡುವ ಸಂಜೀವಿನಿ. ಘನ ಆಹಾರಕ್ಕಿಂತ ಸುಮಾರು ಮುಕ್ಕಾಲು ಭಾಗದಷ್ಟು ನೀರು ದೇಹಕ್ಕೆ ಅವಶ್ಯಕವಿರುತ್ತದೆ. ಕ್ರಮಬದ್ಧವಾದ ಹೆಚ್ಚು ಭಾಗ ನೀರಿನ ಸೇವನೆಯಿಂದ ಉತ್ತಮ ಆರೋಗ್ಯ ನಮ್ಮದಾಗುತ್ತದೆ.

❑



**ಚಂದ್ರಶೇಖರ ಎಂ.ಹೆಚ್. ***

'ಗ್ರಾಮ ಸ್ವರಾಜ್' ಯೋಜನೆಯು ಅನುಷ್ಠಾನಕ್ಕೆ ಬಂದ ಪ್ರಾರಂಭದ ದಿನಗಳಲ್ಲಿ ಹೇಗಿತ್ತು, ಸದರಿ ಯೋಜನೆಯು ಅನುಷ್ಠಾನಗೊಂಡು 5 ವರ್ಷಗಳ ನಂತರ ಪ್ರಸ್ತುತ ಪರಿಸ್ಥಿತಿ ಬಗ್ಗೆ ಈ ಕೆಳಕಂಡಂತೆ ಬೆಳಕು ಚೆಲ್ಲಲು ಈ ಲೇಖನ.

# ಅಂದು–ಇಂದು

ಗ್ರಾಮ ಸ್ವರಾಜ್ ಯೋಜನೆಯ ಆಶಯದಂತೆ ಪಂಚಾಯತ್ ರಾಜ್ ವ್ಯವಸ್ಥೆಯ ತಳಹದಿಯಿಂದ (ಗ್ರಾಮ ಪಂಚಾಯ್ತಿ) ಉತ್ತಮವಾದಂತಹ ಕಾರ್ಯನಿರ್ವಹಣೆಯನ್ನು ನಿರೀಕ್ಷಿಸಿ ಅಂತಹ ನಿರ್ವಹಣೆಯಲ್ಲಿ ಹೆಚ್ಚಿನ ಪಾರದರ್ಶಕತೆ ಹಾಗೂ ಕಾರ್ಯದಕ್ಷತೆಯನ್ನು ಮೂಡಿಸಬೇಕು ಎಂಬ ಮೂಲ ಉದ್ದೇಶದಿಂದ ಗ್ರಾಮ ಪಂಚಾಯ್ತಿಗಳಲ್ಲಿನ ಕಡತ ನಿರ್ವಹಣೆ, ಆಸ್ತಿ ತೆರಿಗೆಗೆ ಸಂಬಂಧಿಸಿದಂತೆ ರಸೀದಿ ಪುಸ್ತಕ, ದಿನವಹಿ ಪುಸ್ತಕ, ನಗದು ಪುಸ್ತಕ, ಜಮಾ ದಾಖಲೆ ಪುಸ್ತಕ, ಪರವಾನಿಗೆ ಶುಲ್ಕವನ್ನು ನೀಡಿರುವ ವಿವರಗಳ ದಾಖಲೆ ಪುಸ್ತಕಗಳು, ಅವುಗಳನ್ನು ನವೀಕರಿಸಿದ ದಾಖಲೆಗಳು, ಸಂಗ್ರಹಿಸಿದ (ಸೆಸ್) ಹಣವನ್ನು ನಿರ್ದಿಷ್ಟ ಸಮಯದೊಳಗೆ ಜಮಾ ಮಾಡಿರುವುದು, ಡಿ.ಸಿ.ಬಿ ಗೆ ಸಂಬಂಧಿಸಿದಂತೆ ವಸೂಲಿಯ ದಾಖಲೆಗಳು, ವಸೂಲಿಯಲ್ಲಿ ಶೇಕಡಾವಾರು ಹೆಚ್ಚಿಸಿರುವ ದಾಖಲೆಗಳು, ಆಸ್ತಿ ದಾಖಲೆಗಳಿಗೆ ಸಂಬಂಧಿಸಿದಂತೆ, ಖಾತಾ ಬದಲಾವಣೆ ವಿವರಗಳು, ಖಾತಾ ದಾಖಲೆ ಪುಸ್ತಕ, ಪರಿವರ್ತನೆ (ಮ್ಯುಟೇಷನ್) ದಾಖಲೆ ಪುಸ್ತಕ.ವಿವಿಧ ಯೋಜನೆಗಳಿಗೆ ಸಂಬಂಧಿಸಿದ, ಅನುದಾನ ವಿವರದ ದಾಖಲೆ, ಪಾಸ್‌ಬುಕ್ ದಾಖಲೆ, ಕ್ರಿಯಾ ಯೋಜನೆಯ ದಾಖಲೆ, ಹಣಕಾಸು ಆಯೋಗದ ನೆರವಿನ ಬಗ್ಗೆ ಸೂಕ್ತ ದಾಖಲೆಗಳು. ಆಸ್ತಿ ದಾಖಲೆ ಪುಸ್ತಕ, ಬಿ.ಪಿ.ಎಲ್ ಪಟ್ಟಿ, ಮನೆ/ ನಿವೇಶನ ಇಲ್ಲದ ಜನರ ವಿವರಗಳ ದಾಖಲೆ, ದಾಸ್ತಾನು ಪುಸ್ತಕ, ವಿತರಣಾ ದಾಖಲೆ ಪುಸ್ತಕ , ವೇತನ ವಿದ್ಯುಚ್ಛಕ್ತಿ ಬಿಲ್ಲು ಪಾವತಿ ಪುಸ್ತಕ. ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಅಂದಾಜು ಮಂಜೂರಾತಿ ದಾಖಲೆ, ಅಳತೆ ಪುಸ್ತಕ, ಕಾಮಗಾರಿ ಮುಕ್ತಾಯದ ವರದಿ ಮತ್ತು ಬಿಲ್ಲುಗಳು. ಖರೀದಿಸಿದ ಸಾಮಗ್ರಿಗಳ, ಟ್ಯೂಬ್ ಲೈಟ್, ನೀರಿನ ಸರಬರಾಜುಗೆ ಸಂಬಂದಿಸಿದ ಬಿಡಿ ಭಾಗಗಳ ಬಗ್ಗೆ ದಾಖಲೆ. ಸಾಮಗ್ರಿಗಳ ದಾಸ್ತಾನಿನ ಭೌತಿಕ ಪರಿಶೀಲನೆ. ಸಿಬ್ಬಂದಿಗಳಿಗೆ ಸಂಬಂಧಿಸಿದ ರಿಜಿಸ್ಟರ್, ಗ್ರಾಮ ಪಂಚಾಯ್ತಿಯ ಆಯವ್ಯಯ ಹಾಗೂ ಅದು ಅಂಗೀಕಾರವಾದ ದಾಖಲೆ. ಲೆಕ್ಕಗಳ ಕ್ರೋಢಿಕರಣ ಲೆಕ್ಕಪರಿಶೋದನೆಯ ವರದಿ ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳಿಗೆ ಸಂಬಂದಿಸಿದ ಠರಾವು ಮತ್ತು ಇನ್ನಿತರ ದಾಖಲೆಗಳು. ಎಲ್ಲವನ್ನು ಕ್ರಮಬದ್ದವಾಗಿ ನಿರ್ವಹಿಸಿ ಗ್ರಾಮಗಳ ಅಭಿವೃದ್ಧಿಯಲ್ಲಿ



ಗ್ರಾಮ ಪಂಚಾಯತ್ ಕಾರ್ಯದರ್ಶಿಗಳಿಗೆ ತರಬೇತಿ

* ಲೆಕ್ಕಪತ್ರ ಸಮಾಲೋಚಕ, ತಾಲ್ಲೂಕು ಸಂಪನ್ಮೂಲ ಕೋಶ, ಮಾಗಡಿ, ರಾಮನಗರ ಜಿಲ್ಲೆ.

ಪಂಚಾಯ್ತಿಗಳ ಲೆಕ್ಕ ಹಾಗೂ ಅವುಗಳ ತಂತ್ರದ ಬಗ್ಗೆ ಯೋಜನೆಯು ಅನುಷ್ಠಾನಕ್ಕೆ ಬಂದ ಪ್ರಾರಂಭದ ದಿನಗಳಲ್ಲಿ ಹೇಗಿತ್ತು, ಸದರಿ ಯೋಜನೆಯು ಅನುಷ್ಠಾನಗೊಂಡು 5 ವರ್ಷಗಳ ನಂತರ ಪ್ರಸ್ತುತ ಪರಿಸ್ಥಿತಿ ಬಗ್ಗೆ ಈ ಕೆಳಕಂಡಂತೆ ಬೆಳಕು ಚೆಲ್ಲಲು ಈ ಲೇಖನ.

| ಗ್ರಾಮ ಸ್ವರಾಜ್ ಯೋಜನೆಯ ಅನುಷ್ಠಾನದ ಮುಂಚೆ | ಗ್ರಾಮ ಸ್ವರಾಜ್ ಯೋಜನೆಯ ಅನುಷ್ಠಾನದ ನಂತರ |
|---|---|
| **1. ಗ್ರಾಮ ಪಂಚಾಯ್ತಿಗಳ ಪಾತ್ರ :** ಯೋಜನೆಯ ಪ್ರಾರಂಭದ ದಿನಗಳಲ್ಲಿ ಗ್ರಾಮ ಪಂಚಾಯ್ತಿಗಳು ತಮ್ಮ ಸ್ವಂತಿಕೆ ಹಾಗೂ ದೇಶದ/ಗ್ರಾಮಗಳ ಅಭಿವೃದ್ಧಿಗಳಲ್ಲಿ ಯಾವ ರೀತಿಯಾದಂತಹ ನಿರ್ಧಾರಗಳನ್ನು ಕಾನೂನಿನ ಚೌಕಟ್ಟಿನ ಅಡಿಯಲ್ಲಿ ಸ್ವತಂತ್ರವಾಗಿ ಕೈಗೊಳ್ಳಬೇಕು ಎಂಬ ಬಗ್ಗೆ ಕೇವಲ ಅನುಕರಣೀಯವಾಗಿ ವರ್ತಿಸುತ್ತಿದ್ದವು. | **1. ಗ್ರಾಮ ಪಂಚಾಯ್ತಿಗಳ ಪಾತ್ರಗಳ ಅರಿವು:** ಯೋಜನೆಯು ಜಾರಿಗೆ ಬಂದ ಪ್ರಾರಂಭದಲ್ಲಿಯೇ ಗ್ರಾಮ ಪಂಚಾಯ್ತಿಗಳು ಅನುಕರಣೀಯವಾಗಿ ಇರದೇ ಗ್ರಾಮಗಳ/ ದೇಶದ ಅಭಿವೃದ್ಧಿಯಲ್ಲಿ ತಮ್ಮದೇ ಆದಂತಹ ಗುರಿಗಳನ್ನು ಹೊಂದಬೇಕಾಗಿರುವುದು ಅತ್ಯಂತ ಮಹತ್ವದ ವಿಷಯ ಎಂಬುದನ್ನು ಮನಗಾಣುವಂತಾಯಿತು ಅಥವಾ ಆ ನಿಟ್ಟಿನಲ್ಲಿ ಆಲೋಚನೆ ಮಾಡುವಷ್ಟರ ಮಟ್ಟಿಗೆ ಮೊದಲನೇ ಹೆಜ್ಜೆಯನ್ನು ಇಡುವಂತಾಯಿತು. |
| **2. ಗ್ರಾಮ ಪಂಚಾಯ್ತಿಗಳ ಅಧಿಕಾರಿಗಳಲ್ಲಿನ ಮಂಕುಕವಿದ ಸ್ವಭಾವ** ಗ್ರಾಮ ಪಂಚಾಯ್ತಿ ಎಂಬುದು ಕೇವಲ ಸರ್ಕಾರ ಒದಗಿಸುವ ಅನುದಾನವನ್ನು ಸಾರ್ವಜನಿಕರಿಗೆ ಹಂಚುವ ಒಂದು ರೀತಿ ಅನುದಾನದ ಸಾಗಣೆ ವ್ಯವಸ್ಥೆಯ ಒಂದು ಭಾಗವಷ್ಟೆ ಎಂಬ ಅಧಿಕಾರಿಗಳಲ್ಲಿನ ಜಟಿಲತೆ ಅಗಾಧವಾಗಿತ್ತು. | **2. ಗ್ರಾಮ ಪಂಚಾಯ್ತಿಗಳ ಅಧಿಕಾರಿಗಳಲ್ಲಿ ಉತ್ಸಾಹದ ಚಿಲುಮೆ :** ಯೋಜನೆಯು ಪ್ರಾರಂಭದಲ್ಲಿಯೇ ಒಂದು ಮಾದರಿ ಕ್ರಿಯಾ ಯೋಜನೆಯನ್ನು ತಯಾರಿಸುವ ಸಲಹೆಯನ್ನು ನೀಡಿತೋ! ಆಗ ತಮ್ಮ ಜಟಿಲತೆಯನ್ನು ತೊರೆದು ಅಧಿಕಾರಿವರ್ಗದವರು ತಮಗೂ ಈ ವ್ಯವಸ್ಥೆಯಲ್ಲಿ ಉತ್ತಮ ಅವಕಾಶಗಳು ಇವೇ ಇಲ್ಲಿ ನಾವುಗಳೂ ಸಹ ಪ್ರಮುಖ ರೂವಾರಿಗಳಾಗಿದ್ದೇವೆ ಎಂಬ ಮನೋಭಾವನೆಯಿಂದ ಕ್ರಿಯಾ ಯೋಜನೆಯನ್ನು ತಯಾರಿಸಲು ಸರ್ಕಾರದ ಎಲ್ಲಾ ಮಾರ್ಗಸೂಚಿಗಳನ್ನು ಅಭ್ಯಯಿಸಲು ಪ್ರಾರಂಭಿಸಿದರು. |
| **3. ವಿಚಾರ ಮಂಥನದ ಕೊರತೆ :** ಗ್ರಾಮ ಪಂಚಾಯ್ತಿಗಳು ಹಲವಾರು ವರ್ಷಗಳ ಮೊದಲಿನಿಂದಲೂ ಅಸ್ತಿತ್ವದಲ್ಲಿದರೂ ಸಹ, ಅಲ್ಲಿ ಕೇವಲ ಅಧಿಕಾರಿ ವರ್ಗದವರೂ ಮಾತ್ರ ಇರದೇ ಚುನಾಯಿತ ಜನಪ್ರತಿನಿಧಿಗಳೂ ಸಹ ಇದ್ದರೂ ಇವರುಗಳ ನಡುವೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಯ ದೃಷ್ಟಿಯಿಂದ ತೆಗೆದುಕೊಳ್ಳಬೇಕಾದ ನಿರ್ಣಯಗಳ ಬಗ್ಗೆ ವಿಚಾರ ವಿನಿಮಯ ವ್ಯವಸ್ಥೆಯೇ ಇರಲಿಲ್ಲ ಅಥವಾ ಇದ್ದರೂ ಕೇವಲ ಶೇ 10 ರಷ್ಟು ಮಾತ್ರ ಚಾಲ್ತಿಯಲ್ಲಿತ್ತು ಎಂದು ಹೇಳಬಹುದು. | **3. ವಿಚಾರ ಮಂಥನಕ್ಕೆ ಪ್ರಾಶಸ್ತ್ಯ:** ಯೋಜನೆಯು ಜಾರಿಗೊಂಡು ಮಾದರಿ ಕ್ರಿಯಾ ಯೋಜನೆಯ ತಯಾರಿಯ ಸಂಧರ್ಭದಲ್ಲಿ ತಮ್ಮ ಆಲೋಚನಾ ಕ್ರಿಯೆಗಳಿಗೆ ಚುರುಕುತನವನ್ನು ಮುಟ್ಟಿಸಿಕೊಂಡು ಅಭಿವೃದ್ಧಿಯ ಮುನ್ನೋಟದ ಹಾದಿಯಲ್ಲಿ ಹಲವಾರು ವಿಚಾರ ವಿನಿಮಯ ಮಾಡಿಕೊಳ್ಳುವ ಕ್ರಿಯೆಯೂ ಪ್ರಾರಂಭವಾಯಿತು. ಹಾಗೂ ಈಗ ಶೇ. 100 ರಷ್ಟು ಭಾಗ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಜರುಗುವ ಪ್ರತಿಯೊಂದು ಕ್ರಿಯೆಗಳ ಸಂಪೂರ್ಣ ಚರ್ಚೆಗಳು ಜರುಗುತ್ತಿವೆ. |
| **4. ಗ್ರಾಮ ಪಂಚಾಯ್ತಿಗಳ ಅಧಿಕಾರಗಳು :** ಗ್ರಾಮ ಪಂಚಾಯ್ತಿಗಳಿಗೆ ಕಾನೂನು ಬದ್ಧವಾಗಿ ಇರುವಂತಹ ಅಧಿಕಾರಗಳ ಅರಿವು ಇಲ್ಲದಿರುವುದು ಹಾಗೂ ಕೆಲವೊಂದು ಅಧಿಕಾರಗಳ ಬಗ್ಗೆ ಸಂದೇಹಗಳಿರುವುದು ಕಂಡುಬರುತ್ತಿದ್ದವು. | **4. ಗ್ರಾಮ ಪಂಚಾಯ್ತಿಗಳ ಅಧಿಕಾರಗಳು :** ಗ್ರಾಮ ಪಂಚಾಯ್ತಿಗಳಿಗೆ ಇರುವಂತಹ ಅಧಿಕಾರಗಳನ್ನು ಗ್ರಾಮ ಪಂಚಾಯ್ತಿಗಳ ಮನಗಂಡು ಆ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲು ಹಾಗೂ ಅಧಿಕಾರದ ಸ್ವರೂಪ, ಮಾನದಂಡಗಳ ಬಗ್ಗೆ ಸಂಪೂರ್ಣ ಅರಿವಿನೊಂದಿಗೆ ಅವಕಾಶಗಳ ಬಗ್ಗೆ ಮಾಹಿತಿಯನ್ನು ಹೊಂದಿ ಅಭಿವೃದ್ಧಿಯತ್ತ ಗಮನ ಹರಿಸುವಂತಾಗಿದೆ. |
| **5. ಗ್ರಾಮ ಪಂಚಾಯ್ತಿಗಳಿಗೆ ಇರುವಂತಹ ಜವಾಬ್ದಾರಿಯ ಅರಿವಿನ ಕೊರತೆ.** ಗ್ರಾಮ ಪಂಚಾಯ್ತಿಗಳು ಕಾನೂನು ಬದ್ದವಾಗಿ ಹಾಗೂ ಅದಕ್ಕೂ ಮೀರಿದಂತೆ ಇರುವ ತಮ್ಮ ಅಮೂಲ್ಯವಾದ ಜವಾಬ್ದಾರಿಗಳ ಬಗ್ಗೆ ಯಾವುದೇ ಮಾಹಿತಿ ಇರದ ಮೌಢ್ಯರಂತೆ ವರ್ತಿಸುತ್ತಿದ್ದ ಪ್ರಸಂಗಗಳು ಕಂಡು ಬರುತ್ತಿದ್ದವು. | **5. ಗ್ರಾಮ ಪಂಚಾಯ್ತಿಗಳಿಗೆ ಇರುವಂತಹ ಜವಾಬ್ದಾರಿಯ ಅರಿವು.** ಯೋಜನೆಯು ಪಂಚಾಯ್ತಿಗಳ ಚುನಾಯಿತ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸೂಕ್ತ ಮಾರ್ಗಸೂಚಿಗಳನ್ನು ನೀಡುವುದರ ಮೂಲಕ ಹಾಗೂ ಮೇಲಧಿಕಾರಿಗಳಿಂದ ಸೂಕ್ತ ಸಮಯಕ್ಕೆ ಖುದ್ದಾಗಿ ಮಾರ್ಗದರ್ಶನ ದೊರಕುವಂತೆ ಮಾಡಿದ್ದರಿಂದ ಮೌಢ್ಯತೆಯ ಪ್ರಸಂಗಗಳು ಕಂಡುಬರುತ್ತಿಲ್ಲ. |

| | |
|---|---|
| **6. ಗ್ರಾಮ ಪಂಚಾಯ್ತಿಗಳ ಸಿಬ್ಬಂದಿಗಳಿಗೆ ತರಬೇತಿಯ ಕೊರತೆ.**<br>ಗ್ರಾಮ ಪಂಚಾಯ್ತಿಯ ಜವಾಬ್ದಾರಿಗಳಿಗೆ ತಕ್ಕಂತೆ ಅವುಗಳನ್ನು ಜಾರಿಗೊಳಿಸಲು ಸಿಬ್ಬಂದಿಗಳಿಗೆ ಸೂಕ್ತವಾದ ತರಬೇತಿಯ ಕೊರತೆಯಿಂದ ಅನೇಕ ಕಾರ್ಯಗಳು ಸ್ಥಗಿತಗೊಂಡು ತೊಂದರೆ ಆಗುತ್ತಿದ್ದವು. | **6. ಗ್ರಾಮ ಪಂಚಾಯ್ತಿಗಳ ಸಿಬ್ಬಂದಿಗಳಿಗೆ ಸೂಕ್ತ ತರಬೇತಿ.**<br>ಯೋಜನೆಯು ಜಾರಿಗೆ ಬಂದ ನಂತರ ಗ್ರಾಮ ಪಂಚಾಯ್ತಿಗಳ ಸಿಬ್ಬಂದಿಗಳಿಗೆ ಅವಶ್ಯವಾದ ತರಬೇತಿಯನ್ನು ನೀಡುವುದರ ಮೂಲಕ ತ್ವರಿತಗತಿಯಲ್ಲಿ ಕೆಲಸ ಕಾರ್ಯಗಳು ನಿರ್ವಹಿಸುವಂತೆ ಮಾಡಿ ಗ್ರಾಮದ ಅಭಿವೃದ್ದಿಗೆ ಕೈಗಳ ಬಲಪಡಿಸಲಾಯಿತು. |
| **7. ಗ್ರಾಮ ಪಂಚಾಯ್ತಿಗಳಿಗೆ ಸಾರ್ವಜನಿಕರ ನಿರಸ ಪ್ರತಿಕ್ರಿಯೆ :**<br>ಗ್ರಾಮ ಪಂಚಾಯ್ತಿಗಳಿಗೆ ಸದಸ್ಯರುಗಳನ್ನು ಚುನಾಯಿಸುವ ನಿಟ್ಟಿನಲ್ಲಿ ಆಗಲೀ ಅಥವಾ ತಮ್ಮ ಗ್ರಾಮ ಗಳ ಅಭಿವೃದ್ಧಿಗೆ ಸಲಹೆ ಸೂಚನೆಗಳನ್ನು ನೀಡುವುದಾಗಲಿ ಹಾಗೂ ಮೂಲಭೂತ ಹಕ್ಕುಗಳನ್ನು ಪಡೆಯುವಲ್ಲಿಯೂ ಹಿಂದೆ ಬೀಳುತ್ತಿದ್ದರು. | **7. ಗ್ರಾಮ ಪಂಚಾಯ್ತಿಗಳಿಗೆ ಸಾರ್ವಜನಿಕರ ಪ್ರತಿಕ್ರಿಯೆ :**<br>ಯೋಜನೆಯ ಮೂಲ ಆಶಯದಂತೆ ಸಾರ್ವಜನಿಕರು/ಗ್ರಾಮಸ್ಥರು ಗ್ರಾಮ ಪಂಚಾಯ್ತಿಗಳಿಗೆ ಧಾವಿಸಿ ತಮ್ಮ ಸೌಕರ್ಯಗಳಿಗೆ ಬೇಡಿಕೆಗಳನ್ನು ಸಲ್ಲಿಸುತ್ತಾ, ಅಲ್ಲಿನ ಎಲ್ಲಾ ವಿದ್ಯಮಾನಗಳ ಮೇಲೆ ಸೂಕ್ಷ್ಮವಾಗಿ ನಿಗಾವಿಡುತ್ತಾ ಅವ್ಯವಹಾರ ನಡೆದರೆ ಪ್ರತಿಭಟಿಸುವ ಮಟ್ಟಿಗೆ ಜಾಗೃತರಾಗಿ ಗ್ರಾಮ ಪಂಚಾಯಿತಿಗಳ ಒಡನಾಟವನ್ನು ಹೆಚ್ಚಿಸಿಕೊಂಡಿದ್ದಾರೆ. |
| **8. ಗ್ರಾಮ ಪಂಚಾಯ್ತಿಗಳ ವಾರ್ಡ್‌ಸಭೆ ಮತ್ತು ಗ್ರಾಮಸಭೆ ಕಾರ್ಯಕ್ರಮಗಳ ಆಯೋಜನೆಯಲ್ಲಿಯ ಕೊರತೆ.**<br>ಗ್ರಾಮ ಪಂಚಾಯ್ತಿಗಳು ಕಡ್ಡಾಯವಾಗಿ ಆಯೋಜಿಸಬೇಕಾಗಿದ್ದ ವಾರ್ಡ್ ಮತ್ತು ಗ್ರಾಮಸಭೆಗಳ ಬಗ್ಗೆ ವಿಮುಖ ವರ್ತನೆಯಿಂದ ಕೇಲವೇ ವ್ಯಕ್ತಿಗಳಿಂದ ಕೂಡಿದ ಗುಂಪುಗಳಿಂದ ಮಹತ್ವದ ನಿರ್ಧಾರಗಳು ಹೊರಬಂದು ಅವುಗಳು ಸಂಪೂರ್ಣವಾಗಿ ವ್ಯಕ್ತಿಗತವಾದ ಹಿತಾಸಕ್ತಿಯಿಂದ ಕೂಡಿರುತ್ತಿದ್ದವು. | **8. ನಿಯಮಾನುಸಾರ ಹಾಗೂ ನಿಗದಿತ ಸಮಯದಲ್ಲಿ ಜರುಗುತ್ತಿರುವ ವಾರ್ಡ್ ಸಭೆ ಹಾಗೂ ಗ್ರಾಮ ಸಭೆಗಳು.**<br>ಯೋಜನೆಯು ಜಾರಿಗೊಂಡಾಗಿನಿಂದ ಗ್ರಾಮ ಪಂಚಾಯಿತಿಗಳು ನಿಯಮಾನುಸಾರ ಹಾಗೂ ನಿಗದಿತ ಸಮಯದಲ್ಲಿ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳ ಆಯೋಜಿಸಿ ಹಲವಾರು ಅಭಿವೃದ್ಧಿಪರ ವಿಚಾರಗಳನ್ನು ಮಂಡಿಸಿ ಸಾರ್ವಜನಿಕರಿಗೆ ಮಾಹಿತಿ ನೀಡುವ ವ್ಯವಸ್ಥೆಯನ್ನು ಮೈಗೂಡಿಸಿಕೊಂಡು ನಡೆಯುತ್ತಿವೆ. |
| **9. ಗ್ರಾಮ ಪಂಚಾಯ್ತಿಗಳಲ್ಲಿ ನಿರ್ವಹಿಸಬೇಕಾದಂತ ಕಡತಗಳ ಬಗ್ಗೆ ಅರಿವಿನ ಕೊರತೆ**<br>ಗ್ರಾಮ ಪಂಚಾಯ್ತಿಗಳು ತಮ್ಮ ವ್ಯಾಪ್ತಿಯಲ್ಲಿ ಇರುವಂತಹ ಎಲ್ಲಾ ಗ್ರಾಮಗಳಿಗೆ ಸಂಬಂದಿಸಂತಹ ಸಾಮಾಜಿಕ, ಸಾಂಸ್ಕೃತಿಕ, ಐತಿಹಾಸಿಕ ಮತ್ತು ಸಾಮಾನ್ಯ ಮಾಹಿತಿಗಳನ್ನು ಸಂಗ್ರಹಿಸಿಡುವಲ್ಲಿ ಹಾಗೂ ನಿಯಮಾನುಸಾರ ನಿರ್ವಹಸಿಸಬೇಕಾದ ಕಡತಗಳ ಬಗ್ಗೆ ಸಾಕಷ್ಟು ಅರಿವಿನ ಕೊರತೆ ಕಾಣುತ್ತಿತ್ತು. | **9. ಗ್ರಾಮ ಪಂಚಾಯ್ತಿಯಲ್ಲಿ ಸಂದರ್ಶಕರ ವಹಿಯಿಂದ ಹಿಡಿದು ಬ್ಯಾಲೆನ್ಸ್ ಶೀಟ್ ವರೆವಿಗೂ ಕಡತಗಳ ನಿರ್ವಹಣೆ.**<br>ಗ್ರಾಮ ಪಂಚಾಯ್ತಿಗಳಲ್ಲಿ ತಮ್ಮ ವ್ಯಾಪ್ತಿಯ ಗ್ರಾಮಗಳ ಸಮಗ್ರ ಚಿತ್ರಣದ ಮಾಹಿತಿ ಅಂದರೆ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ಐತಿಹಾಸಿಕವಾಗಿ ಹಾಗೂ ಸಾಮಾನ್ಯ ಮಾಹಿತಿಯನ್ನೊಳಗೊಂಡ ಮತ್ತು ನಿಯಮಾನುಸಾರ ಕಡ್ಡಾಯವಾಗಿ ನಿರ್ವಹಿಸಬೇಕಾಗಿರುವ 62 ಕಡತಗಳನ್ನು ಸಾದ್ಯವಾದಷ್ಟು ಮಟ್ಟಿಗೆ ಪ್ರಮಾಣಿಕವಾಗಿ ನಿರ್ವಹಿಸುತ್ತಿವೆ. |
| **10. ಏಕನಮೂದು ಲೆಕ್ಕಪದ್ದತಿ ಹಾಗೂ ಅದರಲ್ಲಿನ ಲೋಪದೋಷಗಳು.**<br>ಗ್ರಾಮಪಂಚಾಯಿತಿಗಳಲ್ಲಿ ಮೊದಲಿನಿಂದಲೂ ಲೆಕ್ಕವನ್ನು ಇಡುವ ಪದ್ಧತಿಯು ಜಾರಿಯಲ್ಲಿತ್ತಾದರೂ, ಅದು ಸಮರ್ಪಕವಾಗಿರದೇ ಪೂರಕವಾದ ದಾಖಲೆಗಳು ಇಲ್ಲದೇ ಅಸ್ಪಷ್ಟವಾದ ಮಾಹಿತಿಯಿಂದ ಕೂಡಿರುತ್ತಿತ್ತು. ಹಾಗೂ ಏಕ ನಮೂದು ಪದ್ದತಿಯಲ್ಲಿ ಕೇವಲ ಕೆಲವೇ ಕಡತಗಳನ್ನು ನಿರ್ವಹಿಸುತ್ತಿದ್ದು ಇದರಿಂದ ಪಾರದರ್ಶಕತೆಯನ್ನು ಪಂಚಾಯ್ತಿಗಳ ಲೆಕ್ಕಪತ್ರ ನಿರ್ವಹಣೆಯಲ್ಲಿ ಕಾಯ್ದುಕೊಳ್ಳಲು ಸಾದ್ಯವಾಗಿರಲಿಲ್ಲ. | **10. ಜೋಡಿನಮೂದು ಲೆಕ್ಕಪದ್ದತಿ ಅಳವಡಿಕೆ :**<br>ಗ್ರಾಮಸ್ವರಾಜ್ ಯೋಜನೆಯಡಿ ಗ್ರಾಮಪಂಚಾಯ್ತಿಗಳಲ್ಲಿ ಹೊಸದಾಗಿ ಜಾರಿಗೆತಂದಿರುವ ಜೋಡಿನಮೂದು ಲೆಕ್ಕಪದ್ದತಿಯನ್ವಯ ಗ್ರಾಮ ಪಂಚಾಯ್ತಿಗಳ ಎಲ್ಲಾ ಲೆಕ್ಕಗಳನ್ನು ಸ್ಪಷ್ಟವಾದ ಹಾಗೂ ಅಗತ್ಯವಿರುವ ಎಲ್ಲಾ ಪೂರಕ ದಾಖಲೆಗಳನ್ನು ಸರ್ಕಾರದ ನಿಯಮಾನುಸಾರ ನಿಗದಿಗೊಳಿಸಿರುವ ನಮೂನೆಗಳಲ್ಲಿ ನಿರ್ವಹಿಸಿ ಪಾರದರ್ಶಕತೆಯನ್ನು ಕಾಪಾಡಿಕೊಂಡು ಬರುವುದರ ಜೊತೆಗೆ ಯಾವುದೇ ರೀತಿಯಾದಂತಹ ಮಾಹಿತಿಯನ್ನು ತಕ್ಷಣವೇ ಹಾಜರುಪಡಿಸುವಂತಾಗಿದೆ. |

| | |
|---|---|
| **11. ಗ್ರಾಮ ಪಂಚಾಯ್ತಿಗಳಲ್ಲಿ ಕಂದಾಯ ವಸೂಲಾತಿಯ ಕೊರತೆ.**<br>ಗ್ರಾಮ ಪಂಚಾಯ್ತಿಗಳಿಗೆ ತನ್ನ ಸ್ವಂತ ಆದಾಯ ಮೂಲ ಇರುವುದು ಕಂದಾಯ ವಸೂಲಾತಿಯಲ್ಲಿ. ಆದರೆ ಕಂದಾಯ ಪಾವತಿಸುವಲ್ಲಿ ಗ್ರಾಮಸ್ಥರು ನಿರಾಸಕ್ತಿ ತೋರಿ ಕೇವಲ ಸರ್ಕಾರದ ಅನುದಾನದಲ್ಲಿ ಮಾತ್ರ ಅಭಿವೃದ್ಧಿ ಕೆಲಸಗಳನ್ನು ಮಾಡಿಕೊಡುವಂತೆ ಆಗ್ರಹಿಸುತ್ತಿದ್ದರು. ಹಾಗೂ ತಮಗೆ ಅಗತ್ಯವಿರುವ ಕೆಲಸಗಳನ್ನು ಮಾಡುವುದರ ಬದಲಾಗಿ ಅನಗತ್ಯಕೆಲಸಗಳನ್ನು ಮಾಡುವಿರಿ ಎಂದು ಗ್ರಾಮ ಪಂಚಾಯ್ತಿಗಳನ್ನು ದೂರುತ್ತಿದ್ದರು, | **11. ಗ್ರಾಮ ಪಂಚಾಯ್ತಿಗಳಲ್ಲಿ ಕಂದಾಯ ವಸೂಲಾತಿಯು ಕ್ರಮೇಣ ಹೆಚ್ಚಾಗುತ್ತಿದೆ.**<br>ಸದರಿ ಯೋಜನೆಯಿಂದ ಬಿಡುಗಡೆಯಾದ ಮುಕ್ತ ಅನುದಾನದಿಂದ ಗ್ರಾಮಸ್ಥರು ವಾರ್ಡ್ ಹಾಗೂ ಗ್ರಾಮ ಸಭೆಗಳಲ್ಲಿ ಭಾಗವಹಿಸಿ ತಮ್ಮ ಗ್ರಾಮಗಳ ಮೂಲಭೂತ ಸೌಕರ್ಯಗಳನ್ನು ಅಧ್ಯತೆಗನುಗುಣವಾಗಿ ತಾವೇ ಆಯ್ಕೆ ಮಾಡಿಕೊಂಡು ಅಂತಹ ಕಾಮಗಾರಿಗಳನ್ನು ತ್ವರಿತಗತಿಯಾಗಿ ಗ್ರಾಮ ಪಂಚಾಯ್ತಿಗಳು ಅನುಷ್ಠಾನಗೊಳಿಸಿದರ ಸಲುವಾಗಿ ಗ್ರಾಮಸ್ಥರು ಸಹ ಕಂದಾಯ ಕಟ್ಟುವಲ್ಲಿಯ ಗಂಟು ತನವನ್ನು ಸಡಿಲಗೊಳಿಸಿ ಪಂಚಾಯ್ತಿ ಆದಾಯವು ಹೆಚ್ಚಾಗುವಂತೆ ಮಾಡಿದೆ. |
| **12. ಪ್ರಚಾರದ ಕೊರತೆ :**<br>ಗ್ರಾಮ ಪಂಚಾಯ್ತಿಗಳು ಅನುಷ್ಠಾನಗೊಳಿಸುವ ಜನಪರ ಕಾರ್ಯಕ್ರಮಗಳ ಬಗ್ಗೆ ವಾರ್ಡ್ ಸಭೆ ಹಾಗೂ ಗ್ರಾಮ ಸಭೆಗಳ ಮೂಲಕ ಗ್ರಾಮಸ್ಥರಿಗೆ ಸಾಕಷ್ಟು ಮಾಹಿತಿಯನ್ನು ನೀಡಿದರೂ ಸಹ ಅಂತಹ ಸಭೆಗಳಲ್ಲಿ ಸಾರ್ವಜನಿಕರು ಹೆಚ್ಚಾಗಿ ಪಾಲ್ಗೊಳುವ ರೀತಿ ಮಾಡಲು ಸಫಲರಾಗಿರಲಿಲ್ಲ. ಇದರಿಂದ ಅನೇಕ ನಿರ್ಣಯಗಳಲ್ಲಿ ಹೆಚ್ಚಾಗಿ ಲೋಪದೋಷಗಳು ಕಂಡುಬರುತ್ತಿದ್ದವು. | **12. ಪ್ರಚಾರದ ಕಾರ್ಯಕ್ಕೆ ಆದ್ಯತೆ ನೀಡಿ ಗ್ರಾಮಸ್ಥರ ಗಮನ ಸೆಳೆಯಲಾಯಿತು.**<br>ಯೋಜನೆಯಡಿ ಪಂಚಾಯ್ತಿಯಲ್ಲಿ ನಡೆಯುವ ಯಾವುದೇ ಸಭೆ–ಸಮಾರಂಭಗಳಿಗೆ ಹೆಚ್ಚಿನ ಪ್ರಚಾರವನ್ನು ನೀಡಿ ಆ ಪ್ರಚಾರದ ಮೂಲಕ ಗ್ರಾಮಸ್ಥರು ಹೆಚ್ಚಾಗಿ ವಾರ್ಡ್/ಗ್ರಾಮ ಸಭೆಗಳಲ್ಲಿ ಮತ್ತು ವಿಶೇಷ ಗ್ರಾಮ ಸಭೆಗಳಲ್ಲಿ ಭಾಗವಹಿಸುವಂತೆ ಮಾಡಲಾಯಿತು. ಹಾಗೂ ಪ್ರಚಾರದ ವಿವಿದ ರೀತಿಯಾಗಿ ಕಲಾಜಾಥ, ಬೀದಿನಾಟಕ, ಮೈಕ್ ಸೆಟ್‌ನಲ್ಲಿ ಪ್ರಚುರಪಡಿಸುವಿಕೆ, ಟಾಂ.ಟಾಂ ಸಾರಿಸುವುದು, ಬಿತ್ತಿಪತ್ರಗಳನ್ನು ಹಂಚುವುದು, ಗೋಡೆ ಬರಹಗಳನ್ನು ಬರೆಯಿಸುವುದು, ಕಾಮಗಾರಿಗಳ ಮುಂದೆ ನಾಮಫಲಕಗಳನ್ನು ಬರೆಯಿಸುವುದು, ನಾಮಫಲಕದಲ್ಲಿ ಕಾಮಗಾರಿಗಳ ಹೆಸರು, ಅಂದಾಜು ಮೊತ್ತ, ಗುತ್ತಿಗೆದಾರರ ಹೆಸರು, ಕಾಮಗಾರಿಯನ್ನು ಪ್ರಾರಂಭವಾದ ದಿನಾಂಕ, ಕಾಮಗಾರಿ ಮುಕ್ತಾಯವಾದ ದಿನಾಂಕ ಮುದ್ರಿಸುವುದು. |
| **13. ಗಣಕೀಕರಣಗೊಳ್ಳದ ಗ್ರಾಮ ಪಂಚಾಯ್ತಿಗಳು :**<br>ಗ್ರಾಮ ಪಂಚಾಯ್ತಿಗಳಲ್ಲಿ ಕೆಲಸದ ಒತ್ತಡವು ಹೆಚ್ಚಾಗಿರುವುದು ಎಲ್ಲರಿಗೂ ತಿಳಿದ ವಿಷಯ ಇಂತಹ ಸಮಯದಲ್ಲಿ ಗ್ರಾಮಪಂಚಾಯ್ತಿಗಳು ಕಂಪ್ಯೂಟರ್ ಪರಿಕರಗಳನ್ನು ಖರೀದಿಸಿದ್ದರೂ ಸಹ ಅವುಗಳನ್ನು ಬಳಕೆಮಾಡದೇ ಸುಮಾರು 1 ವರ್ಷಗಳ ಕಾಲ ಪೆಟ್ಟಿಗೆಯಲ್ಲಿಯೇ ಇಡಲಾಗಿತ್ತು. | **13. ಪೂರ್ಣ ಗಣಕೀಕರಣಗೊಂಡ ಗ್ರಾಮ ಪಂಚಾಯ್ತಿಗಳು :**<br>ಯೋಜನೆಯ ನಿರ್ದೇಶನದಂತೆ ಗ್ರಾಮ ಪಂಚಾಯ್ತಿಗಳ ಗಣಕಯಂತ್ರಗಳಲ್ಲಿ ಮಾಹಿತಿಯನ್ನು ತುಂಬಲು ಕಂಪ್ಯೂಟರ್ ಆಪರೇಟರ್‌ಗಳನ್ನು ನೇಮಕ ಮಾಡಿಕೊಂಡಿದ್ದಲ್ಲದೇ, ಎಲ್ಲಾ ಪಂಚಾಯ್ತಿಗಳಿಗೆ ಇಂಟರ್ ನೆಟ್ ಸೌಲಭ್ಯಗಳನ್ನು ಅಳವಡಿಸಿ ಮಾಹಿತಿಗಳನ್ನು ಅಳವಡಿಸಲು ಕ್ರಮವಹಿಸಿ ಅದರಲ್ಲಿ ಸಫಲತೆಯನ್ನೂ ಸಹ ಕಾಣಲಾಗಿದೆ. |
| **14. 2006ರ ನಿಯಮದಲ್ಲಿಯೇ ಗ್ರಾಮ ಪಂಚಾಯ್ತಿಗಳಲ್ಲಿ ಜೋಡಿ ನಮೂದು ಲೆಕ್ಕ ಪದ್ಧತಿಯ ನಿರ್ವಹಣೆಯನ್ನು ಕಡ್ಡಾಯಗೊಳಿಸಿದರೂ ಸಹ ಪಂಚಾಯ್ತಿಯಲ್ಲಿ ತಾಂತ್ರಿಕ ಪರಿಣಿತರ ಕೊರತೆ :** | **14. ಜೋಡಿ ನಮೂದು ಲೆಕ್ಕಪದ್ಧತಿಯನ್ನು ನಿರ್ವಹಿಸಲು ಸನ್ನದು ಲೆಕ್ಕಿಗರ ಸೇವೆ ಎರವಲು :**<br>ಗ್ರಾಮ ಪಂಚಾಯ್ತಿಗಳಲ್ಲಿ ಮೆಟ್ರಿಕ್ ಪೂರೈಸಿದ ಕಾರ್ಯದರ್ಶಿಗಳು ಮಾತ್ರ ಇದ್ದು ಅವರುಗಳಿಗೆ ಸೂಕ್ತ ತರಬೇತಿಯನ್ನು ನೀಡುವುದರ ಜೊತೆಗೆ ಅದೇ ಸಮಯದಲ್ಲಿ ಲೆಕ್ಕ ಪತ್ರಗಳನ್ನು ಜೋಡಿ ನಮೂದು ಲೆಕ್ಕ ಪದ್ಧತಿಯಲ್ಲಿ ನಿರ್ವಹಣೆಯನ್ನು ಸಹ ಮಾಡಿಸಲಾಯಿತು. ಹಾಗೂ ಈ ನಿಟ್ಟಿನಲ್ಲಿ ಗ್ರಾಮ ಪಂಚಾಯ್ತಿ ಕಾರ್ಯದರ್ಶಿಗಳು, ಬಿಲ್‌ಕಲೆಕ್ಟರ್‌ಗಳು, ಹಾಗೂ ಕ್ಲರ್ಕ್ ಗಳಿಗೆ ತರಬೇತಿಯನ್ನು ನೀಡಿ ಆಯಾ ವರ್ಷಗಳ ಲೆಕ್ಕಗಳನ್ನು ಆಯಾ ವರ್ಷಗಳಲ್ಲಿಯೇ ಪೂರ್ಣಗೊಳಿಸಿ ಬ್ಯಾಲೆನ್ಸ್ ಶೀಟ್ ತಯಾರು ಮಾಡುವ ರೀತಿಯಲ್ಲಿ ತರಬೇತಿ ನೀಡಲಾಗಿರುತ್ತದೆ. |

| | |
|---|---|
| **15. ಗ್ರಾಮ ಪಂಚಾಯ್ತಿಗಳಲ್ಲಿ ಮಂಡಿಸುತ್ತಿದ್ದ ಆಯವ್ಯಯವು ಅವೈಜ್ಞಾನಿಕವಾಗಿರುತ್ತಿದ್ದು ಕೆಲವೇ ಕಡತಗಳನ್ನು ನಿರ್ವಹಿಸಲಾಗಿರುತ್ತಿತ್ತು.**<br>ಪಂಚಾಯ್ತಿಗಳಲ್ಲಿ ಕೇವಲ ಬ್ಯಾಂಕ್ ಪಾಸ್ ಬುಕ್, ಡಿಮ್ಯಾಂಡ್ ರಿಜಿಸ್ಟರ್, ಕಂದಾಯ ವಸೂಲಾತಿ ರಸೀದಿ ಪುಸ್ತಕ, ಯೋಜನೆಗಳಿಗೆ ಸಂಬಂದಿಸಿದಂತೆ ನಗದು ಪುಸ್ತಕ ಮಾತ್ರ ಪ್ರಮುಖವಾಗಿ ನಿರ್ವಹಿಸುತ್ತಿದ್ದರು. | **15. ಗ್ರಾಮ ಪಂಚಾಯ್ತಿಗಳಲ್ಲಿ ಸಮಗ್ರ ಮಾಹಿತಿಗಳ ಕಡತಗಳು ನಿರ್ವಹಿಸಿ ಸೂಕ್ತ ರೀತಿಯಲ್ಲಿ ಆಯವ್ಯಯವನ್ನು ಮಂಡಿಸಲಾಗುತ್ತಿದೆ.**<br>ಯೋಜನೆಯ ಮುಖ್ಯ ಭಾಗವಾದ ಲೆಕ್ಕಪತ್ರ ನಿರ್ವಹಣೆ, ಆಯವ್ಯಯ ಹಾಗೂ ಅನುದಾನಕ್ಕೆ ಸಂಬಂದಿಸಿದ ಪೂರಕ ದಾಖಲೆಗಳನ್ನು 1ಎ ಇಂದ 1ಜಿ ಗ್ರಾಮ ಪಂಚಾಯ್ತಿ ರಾಜಸ್ವ ಮತ್ತು ವೆಚ್ಚಗಳು, ಆಯವ್ಯಯ ನಿಯಂತ್ರಣ, ಚರಾಸ್ತಿಗಳ ಹಾಗೂ ಸ್ಥಿರಾಸ್ತಿ ರಿಜಿಸ್ಟರ್, ಮುಂತಾದವುಗಳು ಗ್ರಾಮ ಪಂಚಾಯ್ತಿಗಳಲ್ಲಿ ನಿರ್ವಹಿಸಲಾಗಿದೆ. |
| **16. ಸಂಗ್ರಹಣಾ ವಿಧಾನದಲ್ಲಿನ ಲೋಪದೋಷಗಳು :**<br>ಗ್ರಾಮ ಪಂಚಾಯ್ತಿಗಳಲ್ಲಿ ಅನುಷ್ಠಾನಗೊಳಿಸುವ ಎಲ್ಲಾ ಯೋಜನೆಗಳಲ್ಲಿನ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವಾಗ ಹಾಗೂ ಗ್ರಾಮ ಪಂಚಾಯ್ತಿಗಳಿಗೆ ವಸ್ತುಗಳನ್ನು ಖರೀದಿಸುವಾಗ ನಿಯಮಾನುಸಾರ ಸಂಗ್ರಹಣಾವಿಧಾನಗಳನ್ನು ಪಾಲಿಸದೇ ನಿರ್ವಹಿಸುತ್ತಿದ್ದರು. | **16. ಸಂಗ್ರಹಣಾ ವಿಧಾನದಲ್ಲಿ ಕಾಯ್ದುಕೊಂಡ ಪಾರದರ್ಶಕತೆ :**<br>ಪಂಚಾಯ್ತಿಗಳಲ್ಲಿ ಯೋಜನೆ ಜಾರಿಗೆ ಬಂದ ನಂತರವೇ ಸಂಗ್ರಹಣಾವಿಧಾನದಲ್ಲಿ ಗಮನಾರ್ಹವಾದ ಬದಲಾವಣೆಯ ಗಾಳಿ ಬೀಸತೊಡಗಿತು. ಕೆ.ಟಿ.ಟಿ.ಪಿ ಕಾಯ್ದೆಯನ್ನು ಚಾಚೂ ತಪ್ಪದೇ ಪಾಲಿಸಲು ಕ್ರಮವಹಿಸಿ ಯಾವುದೇ ಸಣ್ಣ ಮೊತ್ತದ ಕಾಮಗಾರಿಯಾಗಲೀ , ವಸ್ತುವನ್ನು ಖರೀದಿಸುವಾಗಲೀ ಹಾಗೂ ಸೇವೆಯನ್ನು ಪಡೆಯುವುದಾಗಲೀ ಕಾಯ್ದೆಯ ಎಲ್ಲಾ ನಿಯಮಗಳನ್ನು ಪಾಲಿಸಲು ಕಟ್ಟು ನಿಟ್ಟಾದ ಆದೇಶವನ್ನು ನೀಡಿದ್ದು ಯೋಜನೆಯನ್ನು ಸಫಲವಾಗಿಸಿದೆ. |
| **18. ಕರಪರಿಷ್ಕರಣೆ ಮಾಡದೇ ಇರುವ ಪಂಚಾಯ್ತಿಗಳು :**<br>ಗ್ರಾಮ ಪಂಚಾಯ್ತಿಗಳಲ್ಲಿ ಪ್ರತಿ 4 ವರ್ಷಕ್ಕೊಮ್ಮೆ ಕರಪರಿಷ್ಕರಣೆ ಮಾಡಬೇಕಾಗಿರುತ್ತದೆ ಆದರೆ ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಹಾಗೂ ಪಂಚಾಯ್ತಿಯ ಸದಸ್ಯರ ಮನವೊಲಿಸದೇ ಇದ್ದವು. | **18. ಕರಪರಿಷ್ಕರಣೆ ಮಾಡಿ ಆದಾಯ ಹೆಚ್ಚಿಸಲು ಪ್ರಯತ್ನಿಸಲಾಯಿತು.:**<br>ಯೋಜನೆಯು ಅನುಷ್ಠಾನಗೊಂಡ ಮೇಲೆ ಪಂಚಾಯ್ತಿಗಳಲ್ಲಿ ಸದಸ್ಯರೊಂದಿಗೆ ಮುಕ್ತವಾದ ಚರ್ಚೆ ಪ್ರಾರಂಭವಾಯಿತು ಇದು ಅಭಿವೃದ್ದಿಯೆಡೆಗೆ ಒಲವು ಇರುವ ಸದಸ್ಯರುಗಳನ್ನು ಗುರುತಿಸಿ ಅವರೊಂದಿಗೆ ಸೇರಿ ಕರ ಪರಿಷ್ಕರಣೆಯನ್ನು ಮಾಡಲು ಸಫಲವಾಯಿತು. |
| **19. ವಿದ್ಯುತ್ ಕೊರತೆಯಿಂದ ಜಾಗತೀಕರಣಕ್ಕೆ ಹೊಂದಿಕೊಳ್ಳ ಲಾಗದ ಪರಿಸ್ಥಿತಿ.**<br>ಗ್ರಾಮ ಪಂಚಾಯ್ತಿಗಳು ಜಾಗತೀಕರಣಕ್ಕೆ ತೆರೆದುಕೊಳ್ಳು ವಿದ್ಯುತ್ ಕೊರತೆಯೂ ಸಹ ಅಡ್ಡಗಾಲು ಹಾಕಿತ್ತು. | **19. ವಿದ್ಯುತ್ ಕೊರತೆ ನೀಗಿಸಲು ಸೋಲಾರ್ ಯು.ಪಿ.ಎಸ್. ಬಳಕೆ.**<br>ಯೋಜನೆಯು ಗ್ರಾಮ ಪಂಚಾಯ್ತಿಗಳಲ್ಲಿ ಕಂಪ್ಯೂರ್, ಇಂಟರ್‌ನೆಟ್ ಬಳಕೆಯನ್ನು ಕಡ್ಡಾಯಗೊಳಿಸಿದ್ದಲ್ಲದೇ ಇದಕ್ಕೆ ಪೂರಕವಾದಂತೆ ವಿದ್ಯುತ್ ಕೊರತೆಯನ್ನು ನೀಗಿಸಲು ಪರಿಹಾರವನ್ನು ಕಂಡುಹಿಡಿದು ಸೋಲಾರ್ ಯು.ಪಿ.ಎಸ್.ಗಳನ್ನು ಅಳವಡಿಸಿ ಕೊಳ್ಳುವಂತೆ ಸಲಹೆ ನೀಡಿ ಜಾಗತೀಕರಣಕ್ಕೆ ಗ್ರಾಮಪಂಚಾಯ್ತಿಗಳೂ ಸಹ ತೆರೆದುಕೊಳ್ಳುವಂತೆ ಮಾಡಿತು. |

ಮೇಲ್ಕಂಡ ಎಲ್ಲಾ ಬೆಳವಣಿಗೆಗಳಿಂದ ಗ್ರಾಮ ಪಂಚಾಯ್ತಿಗಳು ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳು ಅಭಿವೃದ್ಧಿಯೆಡೆಗೆ ಪಯಣಿಸುವಲ್ಲಿ ಗ್ರಾಮ ಸ್ವರಾಜ್ ಯೋಜನೆಯು ಪ್ರೇರಕ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತಿದೆ.

# STATEMENT OF OWNERSHIP PARTICULARS ABOUT "KARNATAKA VIKASA"

## Form IV (See Rule 5)

| | | |
|---|---|---|
| Place of Publication | : | **Rural Development & Panchayat Raj Department**<br>Room No. 309, 3rd Floor,<br>'A' Block, Gate No. 1<br>Multistoreyed Building<br>Bangalore – 560 001 |
| Periodicity of its Publication | : | **Monthly** |
| Printer's Name | : | **Sri G. Nagasundar** |
| Whether Citizen of India | : | **Indian** |
| Address | : | **M/s. Geethanjali Graphics**<br># B-71, New No. 84, KSSIDC Indl Estate<br>6th Block, Rajajinagar,<br>Bangaluru – 560 010. |
| Publisher's Name | : | **Sri B.C. Jayapala Reddy** |
| Whether Citizen of India | : | **Indian** |
| Address | : | Editor-in-Chief<br>Karnataka Vikasa, Rural Development<br>and Panchayat Raj Department<br>Bangalore – 560 001. |
| Chief Editor's Name | : | **Bhoovanahalli Nagaraj** |
| Nationality | : | Indian |
| Address | : | **Chief Editor,** "Karnataka Vikasa"<br>& **Public Relation Officer**<br>**Rural Development & Panchayat Raj Department**<br>Room No. 309, 3rd Floor,<br>1st Stage, 'A' Block, Gate No. 1<br>Multistoreyed Building<br>Bangalore – 560 001 |

I, B.C. Jayapala Reddy hereby declare that the particulars given above are true to the best of my knowledge and belief.

Bangalore
Date : 1-4-2011

**(B.C. Jayapala Reddy)**
Signature of Publisher

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದ ಅಡಿ 2010-11 ನೇ ಸಾಲಿಗೆ ಎರಡನೇ ಕಂತಿನ ಅನುದಾನವನ್ನು ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :-

1. ಸರ್ಕಾರದ ಆದೇಶ ಸಂ.ಗ್ರಾಅಪ.01.ಡಬ್ಲ್ಯೂಜಿಪಿ.2010 ದಿನಾಂಕ: 20.04.2010.
2. ಯೋಜನಾ ಆಯೋಗ(ಪಶ್ಚಿಮ ಘಟ್ಟಗಳ ಸಚಿವಾಲಯ), ಭಾರತ ಸರ್ಕಾರ, ನವದೆಹಲಿ ಇವರ ಪತ್ರ ಸಂ.ಪಿಸಿ(ಪಿ)19/125/ ಕೆಎಆರ್/2010 -ಡಬ್ಲ್ಯೂಜಿಎಸ್ ದಿನಾಂಕ.10-8-2010.
3. ಯೋಜನಾ ಆಯೋಗ(ಪಶ್ಚಿಮ ಘಟ್ಟಗಳ ಸಚಿವಾಲಯ),ಭಾರತ ಸರ್ಕಾರ, ನವದೆಹಲಿ ಇವರ ಪತ್ರ ಸಂ.ಪಿಸಿ(ಪಿ)19/320/ ಎಸ್‌ಸಿಎ/2010-ಡಬ್ಲ್ಯೂಜಿಎಸ್ ದಿನಾಂಕ.07.03.2011.
4. ಆರ್ಥಿಕ ಇಲಾಖೆಯ ಜಮಾ ಧೃಢೀಕರಣ ಪತ್ರ CCS No. FD. 13.BGL-2010 ದಿನಾಂಕ. 14.03.2011.
5. ಆರ್ಥಿಕ ಇಲಾಖೆಯ ಮರು ಹೊಂದಾಣಿಕೆಯ ಆದೇಶ ಸಂಖ್ಯೆ: FD 432 BRS 2010, ಬೆಂಗಳೂರು ದಿನಾಂಕ: 28.03.11.
6. ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ.ವ್ಹಿ.ಎಸ್.ಪಾಟೀಲ್ ರವರು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಗೆ ಬರೆದಿರುವ ಪತ್ರ ಸಂ.ವ್ಹಿ.ಎಸ್.ಪಿ./10-11 ದಿನಾಂಕ:31.01.2011.
7. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ರವರ ಟಿಪ್ಪಣಿ ಸಂ.PSCM/638/2011 ದಿನಾಂಕ:01.02.2011.

* * *

## ಪ್ರಸ್ತಾವನೆ:-

ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದ ಅನುಷ್ಠಾನವನ್ನು ಮೇಲೆ ಓದಲಾದ ಪತ್ರ (1) ರಂತೆ 2010-11 ನೇ ಸಾಲಿನಲ್ಲಿ ಮುಂದುವರೆಸಲಾಗಿದೆ. ಭಾರತ ಸರ್ಕಾರದ ಯೋಜನಾ ಆಯೋಗದ ಪಶ್ಚಿಮ ಘಟ್ಟಗಳ ಸಚಿವಾಲಯವು ಮೇಲೆ ಓದಲಾದ ಪತ್ರ (2) ರಲ್ಲಿ ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ 2010-11ನೇ ಸಾಲಿನಲ್ಲಿ ರೂ. 2924.00 ಲಕ್ಷಗಳ ವಾರ್ಷಿಕ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿರುತ್ತದೆ. ಇದರಲ್ಲಿ ಶೇ. 90 ಭಾಗ ಅಂದರೆ ರೂ. 2631.60 ಲಕ್ಷ ಕೇಂದ್ರ ಸರ್ಕಾರ ಬಿಡುಗಡೆ ಮಾಡಲಿರುವ ನಿಧಿ ರೂಪದ್ದಾಗಿದ್ದು, ಉಳಿಕೆ ಶೇ. 10 ಭಾಗ ಅಂದರೆ ರೂ. 292.40 ಲಕ್ಷ ರಾಜ್ಯದ ಪಾಲಾಗಿರುತ್ತದೆ. ಕೇಂದ್ರ ಸಚಿವಾಲಯವು ಮೇಲೆ ಓದಲಾದ ಪತ್ರ (3) ರಲ್ಲಿ ಪ್ರಸಕ್ತ ಸಾಲಿನ ಒಟ್ಟಾರೆ ಅನುದಾನ ರೂ. 2924.00 ಲಕ್ಷ ಪೈಕಿ ಶೇ. 90ರಷ್ಟು ಅಂದರೆ ರೂ. 2631.60 ಲಕ್ಷ ಆಗಲಿದ್ದು, ಅದರಲ್ಲಿ ಎರಡನೇ ಮತ್ತು ಅಂತಿಮ ಕಂತಿನ ಬಾಬ್ತು ಶೇ. 25 ರಷ್ಟು ಅಂದರೆ ರೂ. 657.90 ಲಕ್ಷಗಳನ್ನು ರಾಜ್ಯಕ್ಕೆ ಬಿಡುಗಡೆ ಮಾಡಿದೆ. ಈ ಅನುದಾನವು ರಾಜ್ಯ ಸರ್ಕಾರದ ಖಾತೆಗೆ ಜಮಾ ಆಗಿರುವ ಬಗ್ಗೆ ಆರ್ಥಿಕ ಇಲಾಖೆಯು ಮೇಲೆ ಓದಲಾದ ಪತ್ರ (4) ರಂತೆ ಜಮಾ ಧೃಢೀಕರಣ ಪತ್ರವನ್ನು ನೀಡಿರುತ್ತದೆ. ಈ ಅನುದಾನದ

ಜೊತೆಗೆ ರಾಜ್ಯದ ಪಾಲಿನ ಶೇ.10 ಅನುದಾನವಾದ ರೂ. 73.10 ಲಕ್ಷಗಳನ್ನು ಸಖಿಬಖಿಧಪಟ್ಟ ಜಿಲ್ಲಾ ಪಖಿಚಾಖಿಯಿತಿಗಳಿಗೆ ಬಿಡುಗಡೆ ಮಾಡಬೇಕಾಗಿದೆ ಮತ್ತು ಕೇಖಿದ್ರ ಸರ್ಕಾರದ ಖಿೋಜನಾ ಆಖಿೋಗದಿಖಿದ ಅನುಮತಿ PC(P) 19/ 125/ KAR/ 2010-WGS ದಿನಾಖಿಕ:10.12.2010 ನೀಡಿದಖಿತೆ ಹಾಗೂ ಸರ್ಕಾರದ ಪುನರ್ವಿನಿಖಿೋಗದ ಆದೇಶ ಸಖಿ. ಗ್ರಾಅಪ.1.ಪಘಖಿೋ.2010 ಬೆಖಿಗಳೂರು, ದಿನಾಖಿಕ:27-12-2010 ರಖಿತೆ ಉತ್ತರ ಕನ್ನಡ ಜಿಲ್ಲೆ ಖಿಯಲ್ಲಾಪುರ ತಾಲ್ಲೂಕಿನಲ್ಲಿ ಕೇಖಿದ್ರ ಸರ್ಕಾರದ ಖಿೋಜನಾ ಆಖಿೋಗ ಅನುಮೋದಿಸಲ್ಪಟ್ಟ ವಿಶೇಷ ಖಿೋಜನಾ ಅನುಷ್ಠಾನಕ್ಕಾಗಿ ಕ್ರಮವಾಗಿ ಚಿಕ್ಕಮಗಳೂರು ಜಿಲ್ಲೆಯಿಖಿದ ರೂ. 20.00 ಲಕ್ಷ ಮತ್ತು ಕೊಡಗು ಜಿಲ್ಲೆಯಿಖಿದ ರೂ. 69.41 ಲಕ್ಷಗಳನ್ನು ಪುನರ್ವಿನಿಖಿೋಗ ಮಾಡುವಖಿತೆ ಸೂಚಿಸಲಾಗಿತ್ತು. ಈ ಪೈಕಿ ಚಿಕ್ಕಮಗಳೂರು ಜಿಲ್ಲೆಯಿಖಿದ ಮಾತ್ರ ರೂ. 20.00 ಲಕ್ಷಗಳನ್ನು ಉತ್ತರ ಕನ್ನಡ ಜಿಲ್ಲೆಗೆ ವರ್ಗಾಯಿಸಲಾಗಿರುತ್ತದೆ. ಉಳಿದಖಿತೆ, ರೂ. 69.41 ಲಕ್ಷಗಳನ್ನು ಖಿೋಜನಾ ಅನುಷ್ಠಾನಕ್ಕಾಗಿ ಉತ್ತರ ಕನ್ನಡ ಜಿಲ್ಲೆಗೆ ನೀಡಬೇಕಾಗಿರುತ್ತದೆ ಮತ್ತು ಅಭಿವೃದ್ಧಿ ಖಿೋಜನಾ ಕೋಶದ ಸಿಬ್ಬಖಿದಿ ಮತ್ತು ಆಡಳಿತ ವೆಚ್ಚಕ್ಕೆ ರೂ. 14.50 ಲಕ್ಷಗಳನ್ನು ಬಿಡುಗಡೆ ಮಾಡಬೇಕಾಗಿರುತ್ತದೆ. ಈ ಮೊತ್ತದಲ್ಲಿ ರೂ. 7.50 ಲಕ್ಷಗಳು ರಾಜ್ಯ ಪಾಲಿನ ಮೊತ್ತವಾದ ರೂ. 73.10 ಲಕ್ಷಗಳಲ್ಲಿ ಸೇರಿರುತ್ತದೆ.

ಮೇಲೆ ತಿಳಿಸಿರುವ ಎಲ್ಲಾ ಅಖಿಶಗಳಿಗೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡಲು, ರಾಜ್ಯ ವಲಖಿಯದ ಉಳಿಕೆ ಮೊತ್ತ ರೂ. 469.12 ಲಕ್ಷ ಮತ್ತು ಜಿಲ್ಲಾ ವಲಖಿಯದಲ್ಲಿ ಮೀಸಲಿಟ್ಟಿರುವ ರೂ. 460.00 ಲಕ್ಷಗಳನ್ನು ಪರಿಗಣಿಸಿ ಖಿಟ್ಟಾರೆ ಲಭ್ಯವಿರುವ ರೂ. 929.12 ಲಕ್ಷಗಳಲ್ಲಿ ಪುನರ್ವಿನಿಖಿೋಗದ ಮೊತ್ತವು ಅಖಿದರೆ ಕೇಖಿದ್ರ ಸರ್ಕಾರದ ಖಿೋಜನಾ ಆಖಿೋಗವು ಉತ್ತರ ಕನ್ನಡ ಜಿಲ್ಲೆ ಖಿಯಲ್ಲಾಪುರ ತಾಲ್ಲೂಕಿನಲ್ಲಿ ವಿಶೇಷ ಖಿೋಜನಾ ಅನುಷ್ಠಾನಕ್ಕಾಗಿ ಮಖಿಜೂರಾತಿ ನೀಡಿರುವ ಮೊತ್ತ ರೂ. 89.41 ಲಕ್ಷ ಸೇರಿದಖಿತೆ ಖಿಟ್ಟಾರೆ ರೂ. 827.41 ಲಕ್ಷಗಳನ್ನು ಬಿಡುಗಡೆ ಮಾಡಬೇಕಾಗಿರುತ್ತದೆ. ಈ ಮೊತ್ತದಲ್ಲಿ ಕೇಖಿದ್ರ ಪಾಲಿನ ರೂ. 657.90 ಮತ್ತು ರಾಜ್ಯ ಪಾಲಿನ ಮೊತ್ತ ರೂ. 169.51 ಲಕ್ಷಗಳಷ್ಟು ಬಿಡುಗಡೆ ಮಾಡಲು ಆದೇಶಿಸಲಾಗಿರುತ್ತದೆ.

ಆದುದರಿಖಿದ ಈ ಆದೇಶ.

### ಸರ್ಕಾರದ ಆದೇಶ ಸಂ. ಗ್ರಾಅಪ.3.ಪಘಯೋ.2010(ಭಾ) ಬೆಂಗಳೂರು, ದಿನಾಂಕ : 29-03-2011

ಕೇಖಿದ್ರ ಪುರಸ್ಕೃತ ಕಾಖಿರ್ಯಕ್ರಮವಾದ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾಖಿರ್ಯಕ್ರಮವನ್ನು 2010-11ನೇ ಸಾಲಿನಲ್ಲಿ ಅನುಮೋದಿತ ಕ್ರಿಖಿಯಾ ಖಿೋಜನೆಖಿಯ ಅನ್ವಖಿಯ ಅನುಷ್ಠಾನಗೊಳಿಸುವ ಸಲುವಾಗಿ ಕೇಖಿದ್ರ ಸರ್ಕಾರವು ಬಿಡುಗಡೆ ಮಾಡಿರುವ ಎರಡನೇ ಹಾಗೂ ಅಖಿತಿಮ ಕಖಿತಿನ ಅನುದಾನ ರೂ. 657.90 ಲಕ್ಷ ಮತ್ತು ರಾಜ್ಯದ ಪಾಲಿನ ಶೇ. 10 ಅನುದಾನವಾದ ರೂ. 73.10 ಲಕ್ಷಗಳು, ಉತ್ತರ ಕನ್ನಡ ಜಿಲ್ಲೆಖಿಯ ಖಿಯಲ್ಲಾಪುರ ತಾಲ್ಲೂಕಿನಲ್ಲಿ ಕೇಖಿದ್ರ ಸರ್ಕಾರದ ಖಿೋಜನಾ ಆಖಿೋಗವು ಅನುಮೋದಿಸಲ್ಪಟ್ಟ ವಿಶೇಷ ಖಿೋಜನಾ ಅನುಷ್ಠಾನಕ್ಕಾಗಿ ಮತ್ತು ಪ.ಘ.ಖಿೋ.ರಾಜ್ಯ ಮಟ್ಟದ ಖಿೋಜನಾ ಕೋಶದ ವೆಚ್ಚ ರೂ. 14.50 ಲಕ್ಷಗಳು ಸೇರಿದಖಿತೆ ಈ ಮೊತ್ತದಲ್ಲಿ ರೂ. 7.50 ಲಕ್ಷಗಳು ರಾಜ್ಯ ಪಾಲಿನ ಮೊತ್ತವಾದ ರೂ. 73.10 ಲಕ್ಷಗಳಲ್ಲಿ ಸೇರಿರುತ್ತದೆ.

ಮೇಲಿನ ಎಲ್ಲಾ ಬಿಡುಗಡೆ ಅನುದಾನವು ಖಿಟ್ಟಾರೆ ರೂ. 827.41 ಲಕ್ಷಗಳನ್ನು (ರೂ. ಎಖಿಟು ನೂರ ಇಪ್ಪತ್ತೇಳು ಲಕ್ಷ ಮತ್ತು ನಲವತ್ತೊಖಿದು ಸಾವಿರ ಮಾತ್ರ) ರಾಜ್ಯದ ಖಿೋಜನಾ ಅನುಷ್ಠಾನದ ಜಿಲ್ಲಾ ಪಖಿಚಾಖಿಯಿತಿಗಳಿಗೆ ಅನುಬಖಿಧ-1 ರಲ್ಲಿ ತೋರಿಸಿರುವಖಿತೆ ಈ ಕೆಳಕಖಿಡ ನಿಬಖಿಧನೆಗಳಿಗೆ ಖಿಳಪಟ್ಟು ಬಿಡುಗಡೆ ಮಾಡಲಾಗಿದೆ.

1. 2010-11 ನೇ ಸಾಲಿನಲ್ಲಿ ನಿಮ್ಮ ಜಿಲ್ಲೆಖಿಯ ಅನುಮೋದಿತ ಕ್ರಿಖಿಯಾ ಖಿೋಜನೆಖಿಯಲ್ಲಿ ನಮೂದಿಸಿರುವ ಕಾಖಿರ್ಯಕ್ರಮಗಳನ್ನು ಮಾತ್ರ ನಿಮ್ಮ ಜಿಲ್ಲೆಗೆ ನಿಗದಿಪಡಿಸಿರುವ ಅನುದಾನಕ್ಕೊಳಪಟ್ಟು ಅನುಷ್ಠಾನಗೊಳಿಸುವುದು.

2. ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಹೊರಡಿಸುತ್ತಿರುವ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸುವುದು.

3. ಒಂದು ವಲಯಕ್ಕೆ ನಿಗದಿಪಡಿಸಿರುವ ಅನುದಾನವನ್ನು ಇನ್ನೊಂದು ವಲಯಕ್ಕೆ ಯಾವುದೇ ಕಾರಣಕ್ಕೂ ವರ್ಗಾಯಿಸಬಾರದು

4. ಸಾಂಬಾರು ಮಂಡಳಿಯ ಕಾರ್ಯಕ್ರಮಗಳಿಗೆ ಪ್ರಸ್ತುತ ಕಂತಿನಲ್ಲಿ ಒದಗಿಸಿರುವ ಅನುದಾನ ರೂ. 3.20ಲಕ್ಷಗಳನ್ನು ಆ ಮಂಡಳಿಗೆ ಸಂಬಂಧಪಟ್ಟ ಜಿಲ್ಲಾ ಪಂಚಾಯಿತಿಯು ಬಿಡುಗಡೆ ಮಾಡುವುದು.

5. 2009-10 ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ಅನುದಾನದಲ್ಲಿ ಖರ್ಚಾಗದೇ ಉಳಿದ ಅನುದಾನವನ್ನು 2010-11 ನೇ ಸಾಲಿನಲ್ಲಿ ಕಡ್ಡಾಯವಾಗಿ ಮತ್ತು ಸಂಪೂರ್ಣವಾಗಿ ದಿನಾಂಕ:30-03-2011ರೊಳಗಾಗಿ ಖರ್ಚು ಮಾಡಿ ಪ್ರಗತಿ ವರದಿಯನ್ನು ತಪ್ಪದೇ ಕಳುಹಿಸುವುದು.

6. ಕೇಂದ್ರ ಸರ್ಕಾರವು ನಿಗದಿಪಡಿಸಿರುವ ನಮೂನೆಯಲ್ಲೇ ಪ್ರತಿ ತ್ರೈಮಾಸಿಕ ವರದಿಯನ್ನು ಸಕಾಲದಲ್ಲಿ ತಪ್ಪದೇ ಸರ್ಕಾರಕ್ಕೆ ಸಲ್ಲಿಸುವುದು.(Statement-I-Financial, Statement-II-Physical, verification report for beneficiary oriented schemes, verification report for schemes relating to construction works)

7. ಜಿಲ್ಲಾ ಪಂಚಾಯಿತಿಯ ಮುಖ್ಯ ಲೆಕ್ಕಾಧಿಕಾರಿಗಳು ಸಹಾಯಾನುದಾನದ ಬಿಲ್ಲಿನ ಮೇಲೆ ನಿಯಮಗಳ ಪ್ರಕಾರ ಅನುದಾನವನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಗಳಡಿಯಲ್ಲಿ ಖಜಾನೆಯಿಂದ ಪಡೆಯುವುದು.

2551-ಗುಡ್ಡಗಾಡು ಪ್ರದೇಶಗಳು-01-ಪಶ್ಚಿಮ ಘಟ್ಟಗಳು-001-ನಿರ್ದೇಶನ ಮತ್ತು ಆಡಳಿತ-0-01-ಯೋಜನಾ ಕೋಶ-059-ಇತರೆ ಖರ್ಚು (ಯೋಜನೆ) - 2551-01-001-0-01-059, 2551-01-001-0-01-422 (SCP) ಮತ್ತು 2551-01-001-0-01-423(TSP) ಮತ್ತು ದಕ್ಷಿಣ ಕನ್ನಡ ಮತ್ತು ಹಾಸನ ಜಿಲ್ಲೆಗಳಿಗೆ ಬಿಡುಗಡೆ ಮಾಡಿರುವ ಮೊತ್ತವನ್ನು 2551-01-198-6-02 ಜಿಲ್ಲಾ ವಲಯದಲ್ಲಿ ಮೀಸಲಿಟ್ಟಿರುವ ಲೆಕ್ಕಶೀರ್ಷಿಕೆಯಲ್ಲಿ ಮೊತ್ತವನ್ನು ಸೆಳೆಯುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಪಿ.ಎ. ಮೇಘಣ್ಣವರ)**
ನಿರ್ದೇಶಕರು,
ಗ್ರಾಮೀಣ ಮೂಲಭೂತ ಸೌಲಭ್ಯಗಳು
ಹಾಗೂ ಪದ ನಿಮಿತ್ತ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.

## ಅನುಬಖಿಧ-1

### ಸರ್ಕಾರದ ಆದೇಶದ ಸಖಿ.ಗ್ರಾಅಪ.3.ಪಘಖಿಯೋ.2010(ಭಾ) ಬೆಖಿಗಳೂರು, ದಿನಾಖಿಕ.29-03-2011.

### ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾಖಿರ್ಯಕ್ರಮದ ಅಡಿ 2010-11 ನೇ ಸಾಲಿನ ಜಿಲ್ಲಾವಾರು ಎರಡನೇ ಕಖಿತಿನ ಅನುದಾನ ಬಿಡುಗಡೆ ತ:ಖ್ತೆ

(ರೂ.ಲಕ್ಷಗಳಲ್ಲಿ)

| ಕ್ರ. ಸಖಿ. | ಜಿಲ್ಲೆಖಿು ಹೆಸರು | 2010-11ನೇ ಸಾಲಿನ ಜಿಲ್ಲಾವಾರು ಅನುದಾನ ಹಖಿಚಿಕೆ | ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗುತ್ತಿರುವ ಎರಡನೇ ಹಾಗೂ ಅಖಿತಿಮ ಕಖಿತಿನ ಅನುದಾನ | | | | ಕಾಲಖಿ 4ರ ಸಾಖಿಬಾರು ಮಖಿಡಳಿಗೆ ಬಿಡುಗಡೆ ಆಗಿರುವ ಅನುದಾನ |
|---|---|---|---|---|---|---|---|
| | | | 2551-01-001-0-01-059 ಇತರೆ ಖರ್ಚು | 2551-01-001-0-01-422-SCP | 2551-01-001-0-01-423 TSP | ಖಿಟ್ಟು ಮೊತ್ತ | |
| 1 | 2 | 3 | 4 | 5 | 6 | 7 | 8 |
| 1 | ಬೆಳಗಾಖಿ | 467.75 | 73.46 | 18.28 | 25.19 | 116.93 | - |
| 2 | ಚಾಮರಾಜನಗರ | 86.20 | 12.44 | 5.85 | 3.26 | 21.55 | - |
| 3 | ಚಿಕ್ಕಮಗಳೂರು* | 276.35 | 66.96 | 17.54 | 4.59 | 89.09 | - |
| 4 | ದಕ್ಷಿಣ ಕನ್ನಡ | 206.30 | 29.50 | 13.08 | 9.00 | 51.58 | - |
| 5 | ಧಾರವಾಡ | 67.20 | 12.51 | 1.90 | 2.40 | 16.81 | - |
| 6 | ಹಾಸನ | 221.65 | 25.57 | 27.40 | 2.44 | 55.41 | 0.88 |
| 7 | ಕೊಡಗು | 247.90 | 44.79 | 9.31 | 7.87 | 61.97 | 0.83 |
| 8 | ಮೈಸೂರು | 96.95 | 14.17 | 5.93 | 4.14 | 24.24 | - |
| 9 | ಶಿವಮೊಗ್ಗ | 410.45 | 78.29 | 19.32 | 5.00 | 102.61 | 0.82 |
| 10 | ಉತ್ತರ ಕನ್ನಡ** | 516.40 | 178.76 | 12.71 | 7.04 | 198.51 | 0.67 |
| 11 | ಉಡುಪಿ | 296.85 | 59.06 | 8.86 | 6.29 | 74.21 | - |
| | ಖಿಟ್ಟು: | 2894.00 | 595.51 | 140.18 | 77.22 | 812.91 | 3.20 |
| 12 | ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾಖಿರ್ಯಕ್ರಮ ಖಿಯೋಜನಾ ಕೋಶ | 30.00 | 14.50 | 0.00 | 0.00 | 14.50 | - |
| | ಜುಮ್ಲಾ | 2924.00 | 610.01 | 140.18 | 77.22 | 827.41 | 3.20 |

* ಉತ್ತರ ಕನ್ನಡ ಜಿಲ್ಲೆಖಿು ಖಿುಲ್ಲಾಪುರ ತಾಲ್ಲೂಕಿನಲ್ಲಿ ಖಿಯೋಜನಾ ಅನುಷ್ಠಾನಕ್ಕಾಗಿ ವರ್ಗಾವಣೆ ಮಾಡಿರುವ ಮೊತ್ತವಾದ `20.00 ಲಕ್ಷಗಳನ್ನು ಪುನ: ತಮ್ಮ ಜಿಲ್ಲೆಗೆ ವರ್ಗಾಯಿಸಲಾಗಿದೆ.

** ಉತ್ತರ ಕನ್ನಡ ಜಿಲ್ಲೆಖಿು ಖಿುಲ್ಲಾಪುರ ತಾಲ್ಲೂಕಿನಲ್ಲಿ ಖಿಯೋಜನಾ ಅನುಷ್ಠಾನಕ್ಕಾಗಿ ಮಖಿಜೂರಾತಿಖಿಯಾಗಿರುವ ಖಿಟ್ಟಾರೆ `89.41 ಲಕ್ಷಗಳ ಪೈಕಿ ಚಿಕ್ಕಮಗಳೂರು ಜಿಲ್ಲಾ ಪಖಿಚಾಖಿುತಿಯಿಖಿದ `20.00 ಲಕ್ಷಗಳನ್ನು ವರ್ಗಾಯಿಸಲಾಗಿದ್ದು, ಉಳಿದಖಿತೆ `69.41 ಲಕ್ಷಗಳನ್ನು ಮಖಿಜೂರಾತಿ ಮೊತ್ತದಲ್ಲಿ ಭರಿಸಲು ಅನುದಾನ ಬಿಡುಗಡೆ ಮಾಡಲಾಗಿದೆ.

(ಪಿ.ಎ. ಮೇಘಣ್ಣವರ)
ನಿರ್ದೇಶಕರು,
ಗ್ರಾಮೀಣ ಮೂಲಭೂತ ಸೌಲಭ್ಯಗಳು
ಹಾಗೂ ಪದನಿಮಿತ್ತ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.

# ಕರ್ನಾಟಕ ಸರ್ಕಾರ

ನಂ. ಗ್ರಾಅಪ/20/ಗ್ರಾಪಂಸಿ/2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 12–04–2011

ಇಂದ,

ಸರ್ಕಾರದ ಕಾರ್ಯದರ್ಶಿ,
ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬೆಂಗಳೂರು.

ಇವರಿಗೆ,

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಎಲ್ಲಾ ಜಿಲ್ಲಾ ಪಂಚಾಯತ್.

ಮಾನ್ಯರೇ,

**ವಿಷಯ** : ರಾಜ್ಯದಲ್ಲಿನ ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ವೇತನ ಪರಿಷ್ಕರಣೆಯ ಬಗ್ಗೆ.

ಉಲ್ಲೇಖ : ಕಾರ್ಮಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಕಾಇ 152 ಎಲ್‌ಡಬ್ಲ್ಯೂಎ 2008, ದಿನಾಂಕ : 21–02–2011.

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕಾರ್ಮಿಕ ಇಲಾಖೆಯು ಹೊರಡಿಸಿರುವ ಉಲ್ಲೇಖಿತ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯಾದ್ಯಂತ ಯಾವುದೇ "ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಟ್ಟಣ ಮತ್ತು ಗ್ರಾಮ ಪಂಚಾಯಿತಿ ಸಂಸ್ಥೆಗಳು" ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ ಸದರಿ ಅಧಿಸೂಚನೆಯು ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಅನ್ವಯವಾಗುವಂತೆ ಕನಿಷ್ಟ ವೇತನವನ್ನು ನಿಗದಿಪಡಿಸಿ ಆದೇಶಿಸಿದೆ. ಸದರಿ ಅಧಿಸೂಚನೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ : 17–03–2011 ರಂದು ಪ್ರಕಟಗೊಂಡಿರುತ್ತದೆ. (ಪ್ರತಿ ಲಗತ್ತಿಸಿದೆ)

ಆದುದರಿಂದ ಸದರಿ ಅಧಿಸೂಚನೆಯಂತೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ಸಿಬ್ಬಂದಿಗಳಿಗೆ ಪರಿಷ್ಕೃತ ವೇತನ ಪಾವತಿಸಲು ಕ್ರಮ ತೆಗೆದುಕೊಳ್ಳುವಂತೆ ತಮ್ಮನ್ನು ಕೋರಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ಪರಿಷ್ಕೃತ ವೇತನ ಪಾವತಿ ಮಾಡಲು ಬೇಕಾಗುವ ಅನುದಾನವನ್ನು ಪಂಚಾಯಿತಿ ತೆರಿಗೆಗಳು, ಲೈಸನ್ಸ್ ಶುಲ್ಕ ಇತ್ಯಾದಿಗಳನ್ನು ಬಾಕಿದಾರರಿಂದ ವಸೂಲಿ ಮಾಡಿ ಪಾವತಿ ಮಾಡಲು ಸೂಚಿಸಿದೆ.

ತಮ್ಮ ವಿಶ್ವಾಸಿ

(ಸ್ವರ್ಣಲತ ಎಂ. ಭಂಡಾರೆ)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ಸಂಖ್ಯೆ : ಕಾಇ 152 ಎಲ್‌ಡಬ್ಲ್ಯೂಎ 2008

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ : 21–02–2011.

## ಅಧಿಸೂಚನೆ

ಕರ್ನಾಟಕ ರಾಜ್ಯಾದ್ಯಂತ ಯಾವುದೇ "ನಗರ ಸ್ಥಳೀಯ ಸಂಸ್ಥೆಗಳು" ಹಾಗೂ "ಪಟ್ಟಣ ಮತ್ತು ಗ್ರಾಮ ಪಂಚಾಯಿತಿ ಸಂಸ್ಥೆಗಳು" ಎಂಬ ಅನುಸೂಚಿತ ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ನಿರ್ಧಿಷ್ಟಪಡಿಸಿರುವ ಕನಿಷ್ಟ ವೇತನವನ್ನು ಪರಿಷ್ಕರಿಸಲು ಸರ್ಕಾರದ ಕರಡು ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ಪತ್ರದ ವಿಶೇಷ ಪತ್ರಿಕೆಯ ಭಾಗ 4(ಎ) ರಲ್ಲಿ ದಿನಾಂಕ: 30–09–2010 ರಂದು ಪ್ರಕಟಿಸಿ, ಕನಿಷ್ಟ ವೇತನ ಕಾಯ್ದೆ 1948ರ [ಕೇಂದ್ರಾಧಿನಿಯಮ ಸಂ: (XI)] ಸೆಕ್ಷನ್ 5(1)(ಬಿ) ಪ್ರಕಾರ ಇದರಿಂದ ಬಾಧಿತರಾಗುವ/ಸಂಬಂಧವಿರುವ ವ್ಯಕ್ತಿಗಳ ಗಮನಕ್ಕೆ ತರಲಾಗಿದ್ದು, ಅವರಿಂದ ಸಲಹೆ/ಆಕ್ಷೇಪಣೆಗಳನ್ನು ಸ್ವೀಕರಿಸಲು 2 ತಿಂಗಳ ಕಾಲಾವಧಿಯನ್ನು ನೀಡಲಾಗಿತ್ತು. ಈ ಬಗ್ಗೆ ಸ್ವೀಕರಿಸಲಾದ ಸಲಹೆ/ಆಕ್ಷೇಪಣೆಗಳನ್ನು ಕನಿಷ್ಟ ವೇತನ ಸಲಹಾ ಮಂಡಳಿಯಲ್ಲಿ ಮಂಡಿಸಲಾಗಿತ್ತು. ಮಂಡಳಿಯಲ್ಲಿ ಸರ್ಕಾರದ ಪ್ರಸ್ತಾವನೆಯ ಬಗ್ಗೆ ಚರ್ಚಿಸಿದ್ದು, ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಸರ್ಕಾರಕ್ಕೆ ತನ್ನ ಶಿಫಾರಸ್ಸು ನೀಡಿರುತ್ತದೆ.

ರಾಜ್ಯ ಕನಿಷ್ಟ ವೇತನ ಸಲಹಾ ಮಂಡಳಿಯ ಶಿಫಾರಸ್ಸನ್ನು ಪರಿಶೀಲಿಸಲಾಗಿದೆ. ಕರಡು ಅಧಿಸೂಚನೆಯಲ್ಲಿ ನಿಗದಿಪಡಿಸಿದ್ದ ವೇತನ ದರಗಳು ಇತರೆ ಅನುಸೂಚಿತ ಉದ್ದಿಮೆಗಳಿಗಿಂತ ಹಾಗೂ ಕೇಂದ್ರ ಸರ್ಕಾರವು ನಿಗದಿಪಡಿಸಿರುವ ರಾಷ್ಟ್ರೀಯ ಕನಿಷ್ಟ ವೇತನ ದರಕ್ಕಿಂತ ಗಣನೀಯವಾಗಿ ಹೆಚ್ಚಾಗಿರುವುದನ್ನು ಸರ್ಕಾರವು ಗಮನಿಸಿ, ಈ ರೀತಿ ಗಣನೀಯವಾಗಿ ಕನಿಷ್ಟ ವೇತನವನ್ನು ಹೆಚ್ಚಾಗಿ ನಿಗದಿಪಡಿಸುವುದರಿಂದ ಇತರ ಅನುಸೂಚಿತ ಉದ್ದಿಮೆಗಳಿಗೆ ತಾರತಮ್ಯ ಮಾಡಿದಂತಾಗುತ್ತದೆ ಎನ್ನುವುದನ್ನು ಮನಗಂಡು ಕರಡು ಅಧಿಸೂಚನೆಯಲ್ಲಿನ ದರಗಳನ್ನು ಕಡಿತಗೊಳಿಸಲು ತೀರ್ಮಾನಿಸಿರುತ್ತದೆ. ಆದ್ದರಿಂದ ಕನಿಷ್ಟ ವೇತನ ಕಾಯ್ದೆ 1948ರ ಸೆಕ್ಷನ್ 3(1)(ಬಿ) ಹಾಗೂ 5(1)(ಬಿ) ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ, ಕರ್ನಾಟಕ ರಾಜ್ಯಾದ್ಯಂತ ಯಾವುದೇ "ನಗರ ಸ್ಥಳೀಯ ಸಂಸ್ಥೆಗಳು" ಹಾಗೂ "ಪಟ್ಟಣ ಮತ್ತು ಗ್ರಾಮ ಪಂಚಾಯಿತಿ ಸಂಸ್ಥೆಗಳು" ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕ ವರ್ಗದವರಿಗೆ ಈ ಅಧಿಸೂಚನೆಯು ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಅನ್ವಯವಾಗುವಂತೆ ಕನಿಷ್ಟ ವೇತನವನ್ನು ಈ ಅಧಿಸೂಚನೆಯ ಅನುಸೂಚಿಯಲ್ಲಿ ಇರುವಂತೆ ಪರಿಷ್ಕರಿಸಲಾಗಿದೆ.

## ಅನುಸೂಚಿ

| ಕ್ರ. ಸಂ. | ಕೆಲಸದ ವರ್ಗಗಳು | ಕನಿಷ್ಟ ವೇತನ ದರಗಳು (ರೂಪಾಯಿಗಳಲ್ಲಿ) | | | | | |
|---|---|---|---|---|---|---|---|
| | | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು | | ಎಲ್ಲಾ ನಗರ ಸಭೆಗಳು | | ಎಲ್ಲಾ ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳು | |
| | | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ |
| 1 | 2 | 3 | 4 | 5 | 6 | 7 | 8 |
| 1 | ಗುಮಾಸ್ತ/ಕ್ಲರ್ಕ್/ಕಂಪ್ಯೂಟರ್ ಆಪರೇಟರ್/ಡಾಟಾ ಎಂಟ್ರೀ ಆಪರೇಟರ್, ಕರ ವಸೂಲಿಗಾರರು ಎಲೆಕ್ಟ್ರೀಷಿಯನ್ ಹಾಗೂ ಇತರೆ ಕುಶಲ ಕಾರ್ಮಿಕರು | 5881–20 | 226–20 | 5532–80 | 212–20 | 4919–20 | 189–20 |

| | | | | | | | |
|---|---|---|---|---|---|---|---|
| 2 | ಪಂಪ್ ಆಪರೇಟರ್, ಮೆಕ್ಯಾನಿಕ್, ಬಾಲವಾಡಿ ಕಾರ್ಯಕರ್ತೆಯರು, ವಾಹನ ಚಾಲಕರು, ಮತ್ತು ಇತರೆ ಅರೆ ಕುಶಲ ಕಾರ್ಮಿಕರು | 5647–20 | 217–20 | 5304–00 | 204–00 | 4808–70 | 184–95 |
| 3 | ವಾಟರ್ ಮ್ಯಾನ್ [ನೀರು ಗಂಟಿ] | 5413–20 | 208–20 | 5075–20 | 195–20 | 4698–20 | 180–70 |
| 4 | ಜವಾನರು, ಅಟೆಂಡರ್ | 5179–20 | 199–20 | 4846–40 | 186–40 | 4587–70 | 176–45 |
| 5 | ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕೆಲಸ, ರಸ್ತೆಗಳನ್ನು ಗುಡಿಸುವುದು, ಒಳಚರಂಡಿ, ಸ್ನಾನಗೃಹ ಮತ್ತು ಶೌಚಾಲಯಗಳನ್ನು ಸ್ವಚ್ಛಗೊಳಿಸಿವುದು ಹಾಗೂ ಇತರೆ ಕುಶಲರಲ್ಲದ ಕಾರ್ಮಿಕರು. | 5044–00 | 194–00 | 4264–00 | 164–00 | 3484–00 | 134–00 |

**ತುಟ್ಟಿಭತ್ಯೆ:–**

ಈ ಅಧಿಸೂಚನೆಯಲ್ಲಿ ಪ್ರಕಟಿಸಿರುವ ದರಗಳನ್ನು ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ (1960–100) 3944 ಅಂಶಗಳಿಗೆ ವಿಲೀನಗೊಳಿಸಲಾಗಿದೆ. ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ 3944 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ 4 ಪೈಸೆಯಂತೆ ತುಟ್ಟಿ ಭತ್ಯೆ ನೀಡತಕ್ಕದ್ದು.

ತುಟ್ಟಿಭತ್ಯೆ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ 12 ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತಿ ವರ್ಷ ಲೆಕ್ಕಾಚಾರ ಮಾಡತಕ್ಕದ್ದು. ಅಲ್ಲದೇ ಗ್ರಾಹಕ ಬೆಲೆ ಸೂಚ್ಯಂಕಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಆದ್ದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2010 ರಿಂದ ಡಿಸೆಂಬರ್ 2010)ರ ಸರಾಸರಿ ಆಧಾರದ ಮೇಲೆ 2011 ಏಪ್ರಿಲ್ 1 ನೇ ತಾರೀಖಿನಿಂದ ಜಾರಿಗೆ ಬರುತ್ತದೆ.

1. ದಿನಗೂಲಿ ಗಳಿಕೆದಾರರ ಸಂದರ್ಭದಲ್ಲಿ ಮಾಸಿಕ ವೇತನ ದರಗಳನ್ನು 26 ದಿನಗಳಿಂದ ವಿಭಾಗಿಸಿ, 4 ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿಂತೆ ಲೆಕ್ಕ ಹಾಕತಕ್ಕದ್ದು.

**ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ :**

ಅ) ಮಾಸಿಕ ವೇತನವನ್ನು ಪಡೆಯುವವರು:–

ಪ್ರತಿ ವರ್ಷ ಹೆಚ್ಚಾಗುವ ಸಿ.ಪಿ.ಐ ಅಂಶಗಳು X ತುಟ್ಟಿಭತ್ಯೆಯ ದರ X 30 ದಿನಗಳು= ತುಟ್ಟಿಭತ್ಯೆ

ಆ) ದಿನಗೂಲಿ ವೇತನ ಪಡೆಯುವವರು:–

ಪ್ರತಿ ವರ್ಷ ಹೆಚ್ಚಾಗುವ ಸಿ.ಪಿ.ಐ ಅಂಶಗಳು X ತುಟ್ಟಿಭತ್ಯೆಯ ದರ X 30 = ತುಟ್ಟಿಭತ್ಯೆ

26

2. ಮಹಿಳೆಯರು ಮತ್ತು ಪುರುಷರು ಒಂದೇ ರೀತಿಯ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಉಭಯತ್ರರಿಗೂ ಸಮಾನ ದರದ ವೇತನಗಳನ್ನು ಸಂದಾಯ ಮಾಡತಕ್ಕದ್ದು.

3. ಪ್ರಸ್ತುತ ಪಾವತಿಸುತ್ತಿರುವ ವೇತನ ದರವು ಹೆಚ್ಚಾಗಿದ್ದಲ್ಲಿ ಆ ಹೆಚ್ಚಾಗಿರುವ ದರಗಳ ವೇತನವನ್ನು ಸಂದಾಯ ಮಾಡುವುದನ್ನು ಮುಂದುವರೆಸತಕ್ಕದ್ದು.

4. ಅಧಿಸೂಚನೆಯಲ್ಲಿ ವರ್ಗವನ್ನು ನಮೂದಿಸದೆ ಇರುವ ವರ್ಗಗಳ ಕಾರ್ಮಿಕರಿಗೆ ಅದೇ ಸ್ವರೂಪದ ಕೆಲಸ ನಿರ್ವಹಿಸುತ್ತಿರುವ ಇತರೆ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಸಂದಾಯ ಮಾಡತಕ್ಕದ್ದು.

5. ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ 8 ಗಂಟೆಗಳ ಕೆಲಸದ ವೇತನವು ಅದೇ ತರಹದ ಕೆಲಸಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರಕೂಡದು. ಒಂದು ದಿನದ ಕೆಲಸ ಎಂದರೆ 8 ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು 8 ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಂತಹ ಕಡಿಮೆ ಅವಧಿಗೆ ಅನುಗುಣವಾಗಿ ವೇತನವನ್ನು ಆ ವರ್ಗದ ದಿನದ ಅಥವಾ ತಿಂಗಳ ವೇತನದ ಆಧಾರದ ಮೇಲೆ ಲೆಕ್ಕ ಹಾಕುವುದು.

6. ದಿನಗೂಲಿ ನೌಕರರಿಗೆ ಅವರ ದಿನದ ವೇತನ ದರಗಳನ್ನು ಕಂಡು ಹಿಡಿಯಬೇಕಾದಲ್ಲಿ ತಿಂಗಳ ವೇತನ ದರವನ್ನು 26 ರಿಂದ ಭಾಗಿಸಬೇಕು. ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸಬೇಕು.

7. ಸಂಸ್ಥೆಯಲ್ಲಿ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಟ ವೇತನ ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟು ಸಾಮಾನ್ಯ ವೇತನದ ಎರಡುಪಟ್ಟು ವೇತನವನ್ನು ಪಾವತಿ ಮಾಡತಕ್ಕದ್ದು.

8. ಕೆಲಸಗಾರರು ದಿನದ ನಿಗಧಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಹೆಚ್ಚುವರಿ ಅವಧಿ ಕೆಲಸಕ್ಕೆ ಆತನ ವೇತನದ ಎರಡುಪಟ್ಟು ವೇತನವನ್ನು ಪಾವತಿಸತಕ್ಕದ್ದು.

9. ವೇತನ ಲೆಕ್ಕಾಚಾರದಲ್ಲಿ ಚಿಲ್ಲರೆ ಬಂದ ಪಕ್ಷದಲ್ಲಿ ಅದನ್ನು ಸಮೀಪದ 50 ಪೈಸೆಗೆ ಪೂರ್ಣಗೊಳಿಸುವುದು.

10. ಅಪ್ರೆಂಟೀಸ್‌ಗಳಿಗೆ ಆ ವರ್ಗದ ನೌಕರರು ಪಡೆಯುತ್ತಿರುವ ವೇತನದ ಪ್ರತಿಶತ 75 ರಷ್ಟು ವೇತನವನ್ನು ಶಿಷ್ಯ ವೇತನವನ್ನಾಗಿ ಪಾವತಿಸತಕ್ಕದ್ದು.

11. ಕುಶಲ : ಕುಶಲ ಕೆಲಸಗಾರರು ಅಂದರೆ ಸ್ವತಂತ್ರವಾಗಿ, ಪರಿಣಾಮಕಾರಿಯಾಗಿ ಮತ್ತು ಕೆಲಸವನ್ನು ಸರಿಯಾಗಿ ಮಾಡಬಲ್ಲ ಸಾಮರ್ಥ್ಯವುಳ್ಳ ಕಾರ್ಮಿಕ, ಅವಶ್ಯವಿದ್ದರೆ ಸರಳವಾದ ನಕ್ಷೆಗಳನ್ನು ಓದಿ ಮತ್ತು ಕೆಲಸ ಮಾಡುವ ಸಾಮರ್ಥ್ಯವುಳ್ಳವನಾಗಿರಬೇಕು.

12. ಅರೆ ಕುಶಲ : ತನ್ನ ಕಸುಬಿನ ಬಗ್ಗೆ ಸಾಕಷ್ಟು ಜ್ಞಾನವಿರುವ ಹಾಗೂ ಪುನರಾವರ್ತನೆ ಕೆಲಸ ಮಾಡುವ ಸಾಮರ್ಥ್ಯವುಳ್ಳ ಹಾಗೂ ಯಂತ್ರ ಉಪಕರಣಗಳ ಸಹಾಯದಿಂದ ಸರಳವಾದ ಕೆಲಸಗಳನ್ನು ಮಾಡಬಲ್ಲವರು.

13. ಕುಶಲರಲ್ಲದವರು : ಸ್ವತಂತ್ರವಾದ ನಿರ್ಣಯದ ಅವಶ್ಯಕತೆಯಿಲ್ಲದ ಅಥವಾ ಹಿಂದಿನ ಅನುಭವ ಇಲ್ಲದೆ ಆದರೆ ಉದ್ಯೋಗದ ವಾತಾವರಣದ ಪರಿಚಯವಿರುವ ಕೆಲಸ ಮಾಡುವುದು, ದೈಹಿಕ ಪರಿಶ್ರಮವಿಲ್ಲದೆ ವಿವಿಧ ರೀತಿಯ ವಸ್ತುಗಳು ಮತ್ತು ಸಾಮಾನ್ಯ ಜ್ಞಾನವಿರುವ ಕೆಲಸವನ್ನು ಮಾಡುವವರು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

**(ಎನ್.ಆರ್.ಪ್ರಭು)**
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ

# ಪರಿಸರ ನಿರ್ವಹಣ ಮಾರ್ಗಸೂಚಿ

*(ಏಪ್ರಿಲ್ 2011ರ ಸಂಚಿಕೆಯಿಂದ ಮುಂದುವರೆದಿದೆ)*

## V ಕೊಳವೆ ಬಾವಿಗಳು – ಕುಡಿಯುವ ನೀರು

| ಪರಿಸರಕ್ಕೆ ಧಕ್ಕೆಯುಂಟು ಮಾಡುವ ಅಂಶಗಳು | ನಿವಾರಣಾ ಕ್ರಮಗಳು |
|---|---|
| • ಹೊಸದಾಗಿ ಕೊರೆದ ಕೊಳವೆ ಬಾವಿಗಳಿಂದ ಕುಡಿಯುವ ನೀರನ್ನು ಪೂರೈಸುವು ಮೊದಲು ನೀರಿನ ಪರೀಕ್ಷೆ ಮಾಡದಿರುವುದು. | • ಹೊಸದಾಗಿ ಕೊರೆದ ಕೊಳವೆ ಬಾವಿಗಳಿಂದ ಕುಡಿಯುವ ನೀರನ್ನು ಪೂರೈಸುವ ಮೊದಲು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ನಿಯಮಾನುಸಾರ ನೀರಿನ ಗುಣಮಟ್ಟವನ್ನು ಪರೀಕ್ಷಿಸುವುದು. ಒಂದು ವೇಳೆ ನೀರು ಕುಡಿಯಲು ಯೋಗ್ಯವಲ್ಲದಿದ್ದಾಗ, ಅವರ ಮಾರ್ಗದರ್ಶನ ಪಡೆಯುವುದು. |
| • ಅಸಮರ್ಪಕ ಸ್ಥಳದ ಆಯ್ಕೆಯು ಮಲಿನ ಅಥವಾ ಕಲುಷಿತಕ್ಕೆ ಕಾರಣವಾಗಬಹುದು. | • ಗ್ರಾಮ ಪಂಚಾಯಿತಿಯು ಆರ್ಸೆನಿಕ್ ಕ್ಷೇತ್ರದಲ್ಲಿದ್ದರೆ ಆ ಮೂಲವಸ್ತುವಿನ ದುಷ್ಪರಿಣಾಮಕ್ಕೆ ಸಂಬಂಧಿಸಿದಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ ಅವಶ್ಯಕವಾದ ತಾಂತ್ರಿಕ ಮಾರ್ಗದರ್ಶನ ಪಡೆಯುವುದು. |
| • ಯಾವುದೇ ರಕ್ಷಣೆ ಇಲ್ಲದಿರುವ ಕೊರೆದ ಬಾವಿಗಳು ಸುರಕ್ಷತೆಗೆ ತೊಡಕಾಗಿರುವುದು. | • ಅನಾಹುತಗಳನ್ನು ತಪ್ಪಿಸಲು ಎಲ್ಲಾ ಕೊರೆದ ಬಾವಿಗಳು ಮುಚ್ಚಲ್ಪಟ್ಟಿರಬೇಕು/ಟೋಪಿಯಂತಹ ಮುಚ್ಚಳದಿಂದ ಭದ್ರಪಡಿಸಬೇಕು. |
| • ಮೇಲ್ಕಟ್ಟು ಮತ್ತು ಚರಂಡಿ ಇಲ್ಲದಿರುವುದು. | • ನೀರು ನೇರವಾಗಿ ಕಲುಷಿತ / ಮಲಿನವಾಗುವುದನ್ನು ತಪ್ಪಿಸಲು ಕೊಳವೆ ಬಾವಿಗಳ ಸ್ಥಳದಿಂದ 15 ಮೀಟರ್ ದೂರದಲ್ಲಿ ನೀರು ಗುಂಡಿಗಳನ್ನು ನಿರ್ಮಿಸಿ ಇತರೆ ನೈರ್ಮಲ್ಯ ಸೌಲಭ್ಯಗಳು ಹಾಗೂ ಮಳೆ ನೀರು ಶೇಖರಣಾ ಕ್ರಮಗಳನ್ನು ಮಾಡಬೇಕು. |

* ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಎಂ.ಎಸ್.ಐ.ಎಲ್. ಕಟ್ಟಡ, 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು.

| | |
|---|---|
| | • ಮಳೆಯ ನೀರು ನೇರವಾಗಿ ಕೊಳವೆ ಬಾವಿಗೆ ಹರಿದು ಹೋಗದಂತೆ ತಪ್ಪಿಸಬೇಕು.<br><br>• ಕೊಳವೆ ಬಾವಿ ಸುತ್ತಲೂ ಸಾಕಷ್ಟು ದಪ್ಪವಾಗಿರುವ ಅಂದರೆ 75.ಸೆ.ಮೀ ತ್ರಿಜ್ಯದ ವೃತ್ತಕ್ಷೇತ್ರ ಹೊಂದಿರುವ ಸಿಮೆಂಟ್ ಸ್ಲಾವಣಿಯನ್ನು ಮಾಡುವುದು ಹಾಗೂ ಹೊರಮೈ ಪರಿಧಿಯನ್ನು ಭದ್ರಪಡಿಸುವುದು.<br><br>• ಕೊಳವೆ ಬಾವಿಗಳ ಸುತ್ತ ನೀರು ನಿಲ್ಲುವುದನ್ನು ತಪ್ಪಿಸಲು, ತ್ಯಾಜ್ಯ ನೀರನ್ನು ಸಂದು ಕಾಲುವೆ ಮೂಲಕ (ಸಸ್ಯಗಳ ಬೆಳವಣಿಗೆಗೆ) ಹೊರಕ್ಕೆ ಹರಿಸಬೇಕು. |
| • ಕ್ರಮವಾಗಿ ನೀರಿನ ಗುಣಮಟ್ಟ ಪರೀಕ್ಷಿಸದೇ ಇರುವುದು. | • ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ ನಿಯಮಾನುಸಾರ ಪ್ರತಿವರ್ಷ ನೀರಿನ ಗುಣಮಟ್ಟವನ್ನು ಪರೀಕ್ಷಿಸಬೇಕು. |
| • ಸ್ಥಳದ ಆಯ್ಕೆ ಸಮುದಾಯದ ಗುಂಪುಗಳಲ್ಲಿ ವಿವಾದಕ್ಕೆ ಕಾರಣವಾಗಬಹುದು. | • ಸಮಾನತೆ ತತ್ವವನ್ನು ಆಧಾರಿಸಿ ಕಡು ಬಡವರು ಮತ್ತು ಬುಡಕಟ್ಟುಗಳ ಜನರು ವಾಸಿಸುವ ಜನವಸತಿಗಳಿಗೆ (hamlets) ಆದ್ಯತೆಯ ಆಧಾರದ ಮೇಲೆ ಹೊಸ ಮೂಲಭೂತ ಸೌಲಭ್ಯಗಳುಳ್ಳ ಅವಕಾಶಗಳನ್ನು ಒದಗಿಸಿಕೊಡುವುದು |
| • ಭೂಮಿಯ ಅವಶ್ಯಕತೆ (ಅತ್ಯಲ್ಪ) | • ಸರ್ಕಾರ / ಗ್ರಾಮ ಪಂಚಾಯತಿ / ಸಮುದಾಯದ ಪ್ರತಿಬಂಧಕವಿಲ್ಲದ ಅಥವಾ ಯಾವುದೇ ಅಡಚಣೆಯಿಲ್ಲದೆ ಇರುವ ಭೂಮಿಯನ್ನು ಈ ಉದ್ದೇಶಕ್ಕಾಗಿ ಬಳಸುವುದು.ಕಡಿಮೆ ವಿಸ್ತೀರ್ಣದ ಭೂಮಿಯ ಸ್ವಾಧೀನವನ್ನು ಮಾತುಕತೆ / ಖರೀದಿ ಮೂಲಕ ಅಥವಾ ಸ್ವಯಂಪ್ರೇರಣೆ ಮೂಲಕ ಪಡೆದುಕೊಳ್ಳಬಹುದು. |
| • ನೀರು ಸಂಗ್ರಹಣಾ ಟ್ಯಾಂಕ್. | • ಪ್ರತಿ ತಿಂಗಳಿಗೊಮ್ಮೆ ನೀರಿನ ಟ್ಯಾಂಕನ್ನು ಸ್ವಚ್ಛಗೊಳಿಸುವುದು ಮತ್ತು ನೀರಿನ ಟ್ಯಾಂಕ್‌ನ ಸುತ್ತಲು ಪ್ರದೇಶವನ್ನು ಸ್ವಚ್ಛವಾ ಟ್ಟುಕೊಳ್ಳುವುದು. |

*(ಮುಂದುವರೆಯುತ್ತದೆ)*



ಉತ್ತರ ಕನ್ನಡ ಜಿಲ್ಲೆ ಮುಂಡಗೋಡ ತಾಲ್ಲೂಕು ಕಾತೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಕಾಮಗಾರಿ ಪ್ರಗತಿಯನ್ನು ಅಧಿಕಾರಿ ಹಾಗೂ ಪತ್ರಕರ್ತರೊಂದಿಗೆ ಶಾಸಕರಾದ ವಿ.ಎಸ್. ಪಾಟೀಲ್‌ರವರು ಪರಿಶೀಲಿಸಿಸುತ್ತಿರುವುದು



ಗುಲಬರ್ಗಾ ಜಿಲ್ಲೆ ಯಾದಗಿರಿ ತಾಲ್ಲೂಕಿನ ಕಿಲ್ಲನಕೇರಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನಿರ್ಮಿಸಲಾದ ಚೆಕ್‌ಡ್ಯಾಮ್

# KARNATAKA VIKASA : APRIL, 2011

A Monthly Magazine of Rural Development and Panchayat Raj Department, Government of Karnataka

Regd. No. KA/BGGPO/2531/09-11. Licence to post "Without Prepayment" WPP-32

RNI. No. 28103, KAR, KAN-02190, Total No. of Pages 52. Despatch Date : 1st week of every month


## ಕುಡಿಯುವ ನೀರಿನ ಮೂಲ ಸದಾ ಶುದ್ಧವಾಗಿರಲಿ



ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಕರ್ನಾಟಕ ಸರ್ಕಾರ


ಬೆಲೆ : 5 ರೂಪಾಯಿಗಳು

OFFICE OF THE CHIEF EDITOR, KARNATAKA VIKASA

Rural Development and Panchayat Raj Department, Government of Karnataka

No. 309, 3rd Floor, Gate No.1, Multistoried Building, Dr. Ambedkar Veedhi, Bengaluru-560 001

Printed at : GEETANJALI GRAPHICS

B-71 (New No. 84), KSSIDC Indl. Estate, 6th Block, Rajajinagar, Bengaluru-10. Tel : 23404232 / 4235 1346